ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೧ ನವೆಂಬರ್-೨೦೧೦ ಸಂಚಿಕೆ-೪



ಸರ್ಕಾರಕ್ಕೆ ಎರಡು ತಲೆ !
ಜನತೆಯ ತಲೆ ಎಲ್ಲಿ ?

ಜನಪದ ವಿಚಾರದಲ್ಲಿ

ನವೆಂಬರ್ -೨೦೧೦

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವೆಂಬರ್ - ೨೦೧೦
ಸಂಪುಟ - ೧೧
ಸಂಚಿಕೆ - ೪

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಸೀಮೋಲ್ಲಂಘನ

ಹೋಗೋಣ ಬಾ!
ಇನ್ನು ಸೀಮೆಯನು ದಾಟಿ!!

ಪಂಗಡವ ಪಂಗಡವ ಏಂಗಡಿಸಿ ಕೆಟ್ಟು
ಸಂಗಡಿಸಿ ಕೂಡಿರುವ ಬಾಳುವೆಯ ಗುಟ್ಟು
ಕಂಗೊಳಿಸೆ ಹಾಗಿರುವ ಬಿರುದನ್ನು ತೊಟ್ಟು
ಹೋಗೋಣ ಬಾ ಇನ್ನು ಸೀಮೆಯನು ದಾಟಿ.

ಇಲ್ಲಸಲ್ಲದ ಕಾಲತೊಡರುಗಳ ಕಡಿದು
ಬಲ್ಲವರು ತೋರಿರುವ ಹಾದಿಯನು ಹಿಡಿದು
ಎಲ್ಲರೂ ಒಂದಾಗಿ ಒಂದಾಗಿ ನಡೆದು
ಹೋಗೋಣ ನಾವೆಲ್ಲ ಸೀಮೆಯನು ದಾಟಿ.

ಹಿಂದಿರುವ ಹಗೆಯೀಗ ಅಂಗಾರವಾಯ್ತು
ಮುಂದಿರುವ ಗೆಳೆತನದ ಸಿಂಗಾರವಾಯ್ತು
ಇಂದು ಮುಟ್ಟಿದ ಪತ್ರಿ ಬಂಗಾರವಾಯ್ತು
ಹೋಗೋಣ ಬಾ ಇನ್ನು ಸೀಮೆಯನು ದಾಟಿ.

ಒಂದೆ ತಾಯಿಯ ಮಕ್ಕಳಂತೆ ಒಂದಾಗಿ
ಅಂದಗೇಡನು ಕೆಡಿಸಿ ಚೆಲುವು ಚೆಂದಾಗಿ
ಮುಂದಿರುವ ಜನರ ಸರಿಮೇಲು ಮುಂದಾಗಿ
ಸಾಗೋಣ ಹೋಗೋಣ ಸೀಮೆಯನು ದಾಟಿ.

ಹೋಗಲಾಡಿಸಿಕೊಂಡು ತಿರುಕತನವನ್ನು
ನೀಗಲಾಡಿಸುತ ಮನೆಮುರುಕುತನವನ್ನು
ಬೇಗದಿಂ ಕರುನಾಡ ಹರಕುತನವನ್ನು
ಕಳೆದು ಹಿರಿದಾಗೋಣ ಸೀಮೆಯನು ದಾಟಿ.

– ಅಂಬಿಕಾತನಯದತ್ತ

ವಿಚಾರ ದೀಪ್ತಿ

ಪ್ರತಿಯೊಂದು ದೇಶಕ್ಕೂ ತನ್ನ ದೇಶದ ವೈಶಿಷ್ಟ್ಯವಿರುತ್ತದೆ. ಮಹಾಪುರುಷರನ್ನು ಹಿಂಬಾಲಿಸುವುದು ನಮ್ಮ ದೇಶದ ವೈಶಿಷ್ಟ್ಯ. ಇಲ್ಲಿ ದೊಡ್ಡ ದೊಡ್ಡ ರಾಜರೂ ಸೇನಾಪತಿಗಳೂ ಸಾಹುಕರರೂ ಬಾಳಿದರು. ಜನ ಅವರನ್ನು ಕಂಡು ಹೆದರಿದರು. ಈಗಲೂ ಹೇಳುತ್ತಾರೆ. ಇಲ್ಲಿ ಅವರ ಅಧಿಕಾರವೂ ನಡೆಯಿತು. ಆದರೆ ದೇಶ ಅವರು ಹೇಳಿದಂತೆ ಯಾವಾಗಲೂ ಆಚರಿಸಲಿಲ್ಲ. ಅವರನ್ನು ಹಿಂಬಾಲಿಸಲಿಲ್ಲ. ಅವರ ಹೆಸರನ್ನೂ ಜನ ನೆನಪಿಡಲಿಲ್ಲ. ಜನರ ಹೃದಯಗಳ ಮೇಲೆ ಅವರ ಅಧಿಕಾರ ನಡೆಯಲಿಲ್ಲ. ಮಹಾಪುರುಷರ ಪ್ರಭಾವ ಮಾತ್ರ ಭಾರತೀಯ ಜನತಾಹೃದಯದ ಮೇಲೆ ಆಯಿತು. ಇಲ್ಲಿಯ ಜನರು ನಮ್ಮಾಳ್ವಾರ್, ಮಾಣಿಕ್ಯವಾಚಕರ್, ಶಂಕರ, ರಾಮಾನುಜ, ಬುದ್ಧ, ಮಹಾವೀರ, ಚೈತನ್ಯ, ನಾನಕ್ ಅಥವಾ ಕಬೀರರನ್ನು ಸ್ಮರಿಸಿಕೊಳ್ಳುತ್ತಾರೆ. ಆದರೆ ಅಕ್ಬರನನ್ನು ಮರೆತು ಬಿಡುತ್ತಾರೆ. ಬುದ್ಧನನ್ನು ಜ್ಞಾಪಿಸಿಕೊಳ್ಳುತ್ತಾರೆ. ಆದರೆ ಅಶೋಕನನ್ನು ಮರೆತುಬಿಡುತ್ತಾರೆ. ಅಶೋಕ ಮತ್ತು ಅಕ್ಬರ್ ಇವರುಗಳು ಒಳ್ಳೆಯ ರಾಜರಾಗಿದ್ದರೂ ಅವರು ಆದರ್ಶರಾಗಿರಲಿಲ್ಲ. ಅವರು ಹೇಳಿದಂತೆ, ಅವರ ಹಾದಿಯಲ್ಲಿ ನಾವು ನಡೆಯೋಣವೆಂದು ಜನರಿಗನಿಸಲಿಲ್ಲ. ಗೀತೆಯಲ್ಲೂ "ಯದ್ಯದಾಚರತಿ ಶ್ರೇಷ್ಠ ಸ್ತತ್ತದೇತರೋಜನಾಃ"–ಮಹಾಪುರುಷರು ವರ್ತಿಸುವಂತೆಯೇ ಜನರು ವರ್ತಿಸುತ್ತಾರೆ ಎಂದು ಹೇಳಲಾಗಿದೆ.

ಇಲ್ಲಿಯ ಜನರು ತಮ್ಮ ಬುದ್ಧಿ ಉಪಯೋಗಿಸುವುದಿಲ್ಲವೆಂದು ಇದರ ಅರ್ಥವಲ್ಲ. ಆದರೆ ಜನರು ತಮ್ಮ ಬುದ್ಧಿಯನ್ನು ಉಪಯೋಗಿಸುತ್ತಾರೆ. ಬೆಲೆಯನ್ನು ಅರಿಯುತ್ತಾರೆ. ನಮ್ಮ ಸಮಾಜದಲ್ಲಿ ಸಲ್ಲದ ಬೆಲೆ ಸಿಕ್ಕುವುದಿಲ್ಲ. ನಮ್ಮ ದೇಶದಲ್ಲಿ ಗಾಂಧೀಜಿ ಹುಟ್ಟಿದರು. ಅವರ ಚಾರಿತ್ರ್ಯ ಮಹಾಪುರುಷರ ಚಾರಿತ್ರ್ಯಕ್ಕೆ ಸಮಾನವಾಗಿತ್ತು. ಜನ ಇದನ್ನು ನೋಡಿದರು. ಆದ್ದರಿಂದ ಗಾಂಧೀಜಿಯನ್ನು ಜನರು ಒಪ್ಪಿದರು. ಅವರ ಸತ್ಯನಿಷ್ಠೆ, ಕರುಣೆ, ಬಡತನದ ಬಗ್ಗೆ ಪ್ರೇಮ, ತ್ಯಾಗ, ಸರಳತೆ, ಇತ್ಯಾದಿ ಎಲ್ಲವೂ ಮಹಾಪುರುಷರಂತೆಯೇ ಇದ್ದವು. ಗಾಂಧೀಜಿಯಲ್ಲಿ ಅನೇಕ ಶಕ್ತಿಗಳಿದ್ದವು. ಆದರೆ ಜನರು ಆ ಶಕ್ತಿ ವಿಶೇಷಗಳನ್ನು ಅರಿತು ಅವರನ್ನು ಹಿಂಬಾಲಿಸಲಿಲ್ಲ. ಆದರೆ ಅವರ ಭಕ್ತಿಜ್ಞಾನ ವೈರಾಗ್ಯದ ಅಂಶವನ್ನು ಕಂಡು ಹಿಂಬಾಲಿಸದರು. ಇದು ಹಿಂದೂಸ್ತಾನದಲ್ಲಿ ಎಲ್ಲೆಲ್ಲೂ ಕಂಡುಬರುತ್ತದೆ. ಕೇವಲ ತಮಿಳುನಾಡು ಮತ್ತು ಕರ್ನಾಟಕದಲ್ಲಿ ಮಾತ್ರವಲ್ಲ. ಆದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಎಲ್ಲೆಲ್ಲೂ ಈ ಭಾವನೆ ಕಂಡುಬರುತ್ತದೆ.

– *ವಿನೋಬಾ*

ಸರ್ಕಾರಕ್ಕೆ ಎರಡು ತಲೆ!
ಜನತೆಯ ತಲೆ ಎಲ್ಲಿ?

ಇಂದು ನಮ್ಮ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅತ್ಯಂತ ಭ್ರಮಿತ ಮತ್ತು ಗೊಂದಲದ ಮನೋಸ್ಥಿತಿಯಲ್ಲಿವೆ. ಅವು ನಿರೂಪಿಸುವ ಪ್ರತಿಯೊಂದು ನೀತಿ, ಜಾರಿಗೆ ತರುವ ಪ್ರತಿಯೊಂದು ಯೋಜನೆ ವೈರುಧ್ಯತೆಯಿಂದ ಕೂಡಿರುತ್ತದೆ. ಒಂದು ನೀತಿ ಇನ್ನೊಂದು ನೀತಿಯನ್ನು ಖಂಡಿಸುವಂತೆ ಇರುತ್ತದೆ; ಒಂದು ಅಭಿವೃದ್ಧಿ ಯೋಜನೆ ಇನ್ನೊಂದನ್ನು ಹಿನ್ನಡೆಸುತ್ತಿರುವಂತೆ ಇರುತ್ತದೆ. ಪರಿಣಾಮ ದೇಶದ ಜನತೆ ನಿಷ್ಕ್ರಿಯರೂ, ಮೂಕ ಪ್ರೇಕ್ಷಕರೂ ಆಗಿ ತಮ್ಮ ಪ್ರಜಾಧರ್ಮವನ್ನು ಕಳೆದುಕೊಂಡವರಾಗಿರುತ್ತಾರೆ. ದೇಶದ ನಾಯಕರು ನಾಯಕತ್ವದ ಯೋಗ್ಯತೆಯನ್ನು ಕಳೆದುಕೊಂಡವರಾಗಿರುತ್ತಾರೆ. ಇದರ ಭೀಕರ ಪರಿಣಾಮವೆಂದರೆ ನೆರೆರಾಷ್ಟ್ರಗಳು ಭಾರತದ ಈ ಆಂತರಿಕ ಕ್ಷೋಭೆ, ತುಮಲ, ಗೊಂದಲ ಇತ್ಯಾದಿಗಳ ಲಾಭ ಪಡೆದು ತಮ್ಮ ಸಾಮ್ರಾಜ್ಯಶಾಹಿ ಉದ್ಧೇಶ್ಯದ ಈಡೇರಿಕೆಗಾಗಿ ಹೊಂಚುಹಾಕಿಕೊಳ್ಳುತ್ತಿರುತ್ತವೆ. ಅಲ್ಲದೆ, ದೇಶದೊಳಗೇ ಇರುವ ವಿಚ್ಛಿದ್ರಕಾರಿ ಶಕ್ತಿಗಳು ಬಲಪಡೆದು ದೇಶದ ಐಕ್ಯತೆಗೆ ಮಾರಕವಾಗುವ ಚಟುವಟಿಕೆಗಳಲ್ಲಿ ಸಕ್ರಿಯವಾಗುತ್ತವೆ. ಈ ಎಲ್ಲ ಸಮಸ್ಯೆಗಳ ಪ್ರತಿರೂಪವಾಗಿ ಸಮಾಜದಲ್ಲಿ, ಆಡಳಿತದಲ್ಲಿ ಭ್ರಷ್ಟಾಚಾರ ಹಾಸುಹೊಕ್ಕಾಗಿ ಬೆರೆಯುತ್ತದೆ. ಇದಕ್ಕೆಲ್ಲ ಕಾರಣ ಸರ್ಕಾರಕ್ಕೆ ದೇಶವನ್ನು ಯಾವ ದಿಕ್ಕಿಗೆ ಕರೆದೊಯ್ಯಬೇಕೆಂಬ ಬಗ್ಗೆ ದಿಕ್ಸೂಚಿಯಿಲ್ಲದೇ ಇರುವುದು. ಆದ್ದರಿಂದ ಸಾಗರದಲ್ಲಿ ಹೋಗುವ ಹಡಗಿಗೆ, ಆಕಾಶದಲ್ಲಿ ಹಾರುವ ವಿಮಾನಕ್ಕೆ ದಿಕ್ಸೂಚಿಯಿಲ್ಲದಿದ್ದರೆ ಅವುಗಳ ಪರಿಸ್ಥಿತಿ ಏನಾಗುವುದೋ ಅಂಥದೇ ಪರಿಸ್ಥಿತಿ ಸರ್ಕಾರದ್ದಾಗಿದೆ. ಅಂದರೆ ದೇಶವನ್ನು ಅಭಿವೃದ್ಧಿಯತ್ತ ಕೊಂಡಯ್ಯುತ್ತೇನೆ ಎಂದು ಹೇಳುತ್ತ ಜನತೆಯನ್ನು ಹಣದ ಆಸೆ ತೋರಿಸಿ ಖರೀದಿಸುತ್ತಿದೆ. ಸ್ವತಂತ್ರ ದೇಶ ಆಂತರಿಕವಾಗಿ ದಾಸ್ಯದ ಮನೋರೋಗದಿಂದ ನರಳುತ್ತಿದೆ. ಜನತೆಯ ಕ್ರಿಯಾಶೀಲತೆಗೆ ಅದರ ಪುರುಷಾರ್ಥ ಇಂಧನವಾಗುವುದರ ಬದಲು ಹಣ ಅಥವಾ ಡಾಲರ್ ಇಂಧನವಾಗಿದೆ. ದೇವರ ಕೃಪೆಯಿಲ್ಲದೆ ಹುಲ್ಲುಕಡ್ಡಿಯೂ ಅಲ್ಲಾಡುವುದಿಲ್ಲವೆಂದು ಹೇಳುವಂತೆ ಈಗ ಹಣದ ಕೃಪೆಯಿಲ್ಲದಿದ್ದರೆ ಯಾವ ಪ್ರಜೆಯ ಕೈಕಾಲುಗಳೂ ಅಲ್ಲಾಡುವುದಿಲ್ಲ, ಯಾರ ಬುದ್ಧಿಯೂ ಕೆಲಸ ಮಾಡುವುದಿಲ್ಲ. ಈ ದರುವಸ್ಥೆಯನ್ನು ಕುರಿತೇ ಆಚಾರ್ಯ ವಿನೋಬಾ ಭಾವೆಯವರು ತಮ್ಮ ಭೂದಾನಯಜ್ಞ ಆಂದೋಲನದ ಸಂದರ್ಭದಲ್ಲಿ ತಮಿಳುನಾಡಿನಲ್ಲಿ ಪಾದಯಾತ್ರೆ ಮಾಡುತ್ತಿದ್ದಾಗ ಪ್ರಾರ್ಥನಾ ಸಭೆಯಲ್ಲಿ ಮೊಟ್ಟಮೊದಲ ಬಾರಿಗೆ "ಸರ್ಕಾರಕ್ಕೆ ಎರಡು ತಲೆಗಳಿವೆ" ಎಂಬ ಮಾತನ್ನು ಹೇಳಿದರು. ಈ

ಮಾತನ್ನು ಬೇರೆಯವರು ಅಥವಾ ಯಾವುದೇ ರಾಜಕಾರಣಿ ಹೇಳಿದ್ದರೆ ಅವನಿಗೇ ತಲೆಯಿಲ್ಲವೆಂದು ಹೇಳಬಹುದಾಗಿತ್ತು. ಅದರೆ ವಿನೋಬಾ ಅಂಥ ಹೊಣಗೇಡಿ ಮನುಷ್ಯನಾಗಲೀ, ವಿಚಾರಶೂನ್ಯ ಮನುಷ್ಯನಾಗಲೀ ಅಲ್ಲ. ಬ್ರಹ್ಮಚಾರಿ, ವಿದ್ವಾಂಸ, ಗಾಂಧೀಜಿಯವರ ಅಂತರಂಗದ ಶಿಷ್ಯ, ಹದಿಮೂರು ವರ್ಷ ಭಾರತದ ಹಳ್ಳಿಗಳಲ್ಲಿ ಪಾದಯಾತ್ರೆ ಮಾಡಿ ಸುಮಾರು ೧೫ಲಕ್ಷ ಎಕರೆ ಭೂಮಿಯನ್ನು ಪಡೆದವರು. ತೆಲಂಗಾಣದ ಕಮ್ಯೂನಿಸ್ಟರ ಪ್ರಾಬಲ್ಯದ ಪ್ರದೇಶದಲ್ಲಿಯೂ ತಮ್ಮ ಪ್ರೇಮ-ಕರುಣೆ-ಅಹಿಂಸೆ-ಹೃದಯ ಪರಿವರ್ತನೆ-ಶುದ್ಧವಿಚಾರದಂಥ ಮಾತುಗಳನ್ನು ಹೇಳುವುದರ ಮೂಲಕ ಯಾತ್ರೆ ಮಾಡಿ ಕಮ್ಯೂನಿಸ್ಟರನ್ನು ಮೂಕರನ್ನಾಗಿ ಮಾಡಿದ ಸಂತ. ಸರ್ಕಾರಕ್ಕೆ ಎರಡು ತಲೆ ಎಂದು ಅವರು ಹೇಳಿದಾಗ ಆ ಮಾತುಗಳು ಅವರ ಅಪಾರ ಅನುಭವಜನ್ಯ, ಆಳ ಅಧ್ಯಯನಜನ್ಯವೇ ಆಗಿರಬೇಕು. ಆದ್ದರಿಂದಲೇ ವಿನೋಬಾರ ಆ ಮಾತುಗಳನ್ನು ಈ ಲೇಖನಕ್ಕೆ ಎರವಲು ಪಡೆಯಲಾಗಿದೆ. ಸರ್ಕಾರದ ಬಗ್ಗೆ ವಿನೋಬಾ ಈ ಮಾತುಗಳನ್ನು ಹೇಳಿದಾಗ ದೇಶಕ್ಕೆ ಸ್ವಾತಂತ್ರ್ಯ ಬಂದು ಕೇವಲ ನಾಲ್ಕು ವರ್ಷಗಳಾಗಿದ್ದವು. ಈಗ ಅರವತ್ತು ವರ್ಷಗಳಾಗಿ ಹೋದವು. ಸರ್ಕಾರಕ್ಕೆ ಎರಡು ತಲೆಗಳು ಏಕಾದವು ಎಂಬುದನ್ನು ಕುರಿತು ಆಲೋಚಿಸುವುದು ಅಗತ್ಯ. ಸ್ವಾತಂತ್ರ್ಯ ಬಂದ ತಕ್ಷಣ ದೇಶಾಭಿಮಾನಿ ರಾಜಕಾರಣಿಗಳಲ್ಲೆಂದೆಲ್ಲಾ ತಮ್ಮನ್ನು ಕರೆದುಕೊಳ್ಳುತ್ತಿದ್ದ 'ಮಹಾತ್ಯಾಗಿ'ಗಳು ಆಯಕಟ್ಟಿನ ಅಧಿಕಾರದ ಸ್ಥಾನಗಳನ್ನು ಹಿಡಿದುಬಿಟ್ಟರು. ಆಗ ಅವರು ದೇಶವನ್ನು ಮರೆತರು. ತಾವು ಸುಖಲೋಲುಪರಾದರು, ಸ್ವಾರ್ಥಿಗಳಾದರು. ಪ್ರಜಾಪ್ರಭುತ್ವದ ಮೂಲ ಸಾಧನವಾದ ಚುನಾವಣೆಗಳು ಬರಬರುತ್ತಾ ಭ್ರಷ್ಟಚಾರದ ಕೂಪಗಳಾದವು, ಭ್ರಷ್ಟ ರಾಜಕಾರಣಿಗಳ ಪ್ರವೇಶಕ್ಕೆ ಫಲವತ್ತತೆಯನ್ನು ಒದಗಿಸಿದವು. ಅವರು ಮುಟ್ಟಿದ್ದೆಲ್ಲವೂ ಭ್ರಷ್ಟ ಹಾಗು ಪಾಪಿಷ್ಟಗಳಾಗುತ್ತ ಹೋದವು. ಇಂದು ಆ ಭ್ರಷ್ಟತೆ, ಆ ಪಾಪ ಪರಮಾವಧಿಗೆ ಮುಟ್ಟಿದೆ. ಮಹಾಭಾರತದ ಧೃತರಾಷ್ಟ್ರನಂತೆ ರಾಜಕಾರಣಿಗಳು ಕುರುಡಾಗಿದ್ದಾರೆ. ದೇಶಕ್ಕೆ ಗೌರವ ತರಬೇಕೆಂಬ ಉದ್ದೇಶ್ಯದಿಂದ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಏರ್ಪಡಿಸುತ್ತದೆ. ಜೊತೆಯಲ್ಲಿಯೇ ತನ್ನ ನಾಯಕರ, ಅಧಿಕಾರಿಗಳ ಭ್ರಷ್ಟಾಚಾರದ ಮಲಿನ ಬಟ್ಟೆಯನ್ನು ಸಾರ್ವಜನಿಕವಾಗಿ ತೊಳೆಯುತ್ತದೆ! ತನ್ನ ಸೈನ್ಯಕ್ಕೆ ಬಲಬರಲೆಂದು ಬೋಫರ್ಸ್‌ನಂಥ ಆಧುನಿಕ ಶಸ್ತ್ರಾಸ್ತ್ರಗಳನ್ನು ಕೋಟಿಗಟ್ಟಲೆ ಹಣವನ್ನು ಸುರಿದು ಖರೀದಿಸುತ್ತದೆ. ಆದರೆ ಆ ಫಿರಂಗಿಗಳು ಶತ್ರು ಸೈನ್ಯವನ್ನು ನಾಶಮಾಡುವುದಕ್ಕೆ ಬದಲು ನಮ್ಮ ದೇಶದ ಸೈನಿಕರೇ ಶತ್ರುಗಳ ಗುಂಡಿಗೆ ಬಲಿಯಾಗುವುದಕ್ಕೆ ಕಾರಣವಾಗುತ್ತದೆ! ಮೀರ್‌ಸಾದಕ್‌ನ ಕೆಲಸ ಮಾಡಿದ ರಾಜಕಾರಣಿಗಳು ದೇಶದ ಪ್ರಧಾನಮಂತ್ರಿಗಳಾಗುತ್ತಾರೆ! ಇದಕ್ಕೆ ಕಾರಣ ಸರ್ಕಾರಕ್ಕೆ ಎರಡು ತಲೆ ಇರುವುದು. ಒಂದು ತಲೆ ದೇಶದ ಸೈನ್ಯವನ್ನು ಬಲಗೊಳಿಸು ಎಂದು ಹೇಳಿದರೆ, ಇನ್ನೊಂದು ತಲೆ ಫಿರಂಗಿಗಳ ಖರೀದಿಯಲ್ಲಿ ದುಡ್ಡು ಹೊಡೆದು ನಿನ್ನ ಅಧಿಕಾರದ ಸ್ಥಾನ ಭದ್ರವಾಗಿರುವಂತೆ ನೋಡಿಕೊ ಎಂದು ಹೇಳುತ್ತದೆ. ಇದರ ಪರಿಣಾಮ ದೇಶದ ಸೋಲು!

ಸ್ವಾತಂತ್ರ್ಯ ಬಂದ ಮೇಲೆ ಸಂವಿಧಾನ ರಚನೆ ಆಯಿತು. ಆಡಳಿತಕ್ಕೆ ಸಂಬಂಧಿಸಿದ ಮುಖ್ಯ ಮಾತುಗಳನ್ನು ಬರೆದಾಯಿತು. ಅದೆಲ್ಲವೂ ರಾಜಕಾರಣಕ್ಕೆ ಸಂಭಂಧಿಸಿದ್ದಾಗಿದ್ದವು. ಆದರೆ ದೇಶದ ಜೀವಾಳವಾಗಿರುವ ಗ್ರಾಮಗಳ ಏಳಿಗೆಯ ಮಾತನ್ನೇ ಮರೆಯಲಾಯಿತು. ಇದಕ್ಕೆ ಕಾರಣ ಸಂವಿಧಾನ ರಚನಾಕಾರರೆಲ್ಲರೂ ರಾಜಕಾರಣಿಗಳೇ ಆಗಿದ್ದರು. ಸಂವಿಧಾನದಲ್ಲಿ ತಮ್ಮ ಮೂಗಿನ ನೇರಕ್ಕೆ ಸಂಬಂಧಿಸಿ ಮಾತುಗಳನ್ನು ಬರೆದರು. ಗ್ರಾಮಗಳ ಏಳಿಗೆಯೇ ದೇಶದ ಏಳಿಗೆಯೆಂದು ಕನವರಿಸುತ್ತಿದ್ದ ಗಾಂಧೀ ಸಂವಿಧಾನ ಸಭೆಯಲ್ಲಿ ಇರಲಿಲ್ಲ. ದಿಲ್ಲಿಯಿಂದ ದೂರ ಸೇವಾಗ್ರಾಮದಲ್ಲಿದ್ದರು. ಗ್ರಾಮವನ್ನು ಪ್ರೀತಿಸುತ್ತಿದ್ದ ವಿನೋಬಾ ಕೂಡ ಸಂವಿಧಾನ ಸಭೆಯಲ್ಲಿ ಇರಲಿಲ್ಲ, ಅವರು ದೂರದ ತಮ್ಮ ಪವನಾರ ಆಶ್ರಮದಲ್ಲಿದ್ದರು. 'ಶಾಶ್ವತ ಅರ್ಥಶಾಸ್ತ್ರ'ದ ಚಿಂತಕರಾದ ಡಾ॥ಜೆ.ಸಿ.ಕುಮಾರಪ್ಪನವರನ್ನಂತೂ ಎಲ್ಲರೂ ಮರೆತಿದ್ದರು. ಆದ್ದರಿಂದ ದೇಶದ ಸಂವಿಧಾನದಲ್ಲಿ ಗ್ರಾಮದ ಏಳಿಗೆಯ ವಿಚಾರ ಪ್ರಮುಖವಾಗಿ ಬರಲೇ ಇಲ್ಲ. ಕೊನೆಯಲ್ಲಿ ಸಂವಿಧಾನ ರಚನಾಕಾರರಿಗೆ ದೇಶದ ಬೆನ್ನೆಲುಬಾದ ಗ್ರಾಮಗಳು ನೆನಪಾಗಿ ಸಂವಿಧಾನದಲ್ಲಿ ಅವುಗಳ ಪ್ರಸ್ತಾಪವನ್ನು 'ಐಚ್ಛಿಕ ವಿಷಯ'ದಲ್ಲಿ ಸೇರಿಸಿದರು. ಅದರ ಪರಿಣಾಮವಾಗಿ ಇಂದು ನಮ್ಮ ಮುಂದೆ ಇರುವ ಭ್ರಷ್ಟ, ಅನೀತಿಯುತ, ಗ್ರಾಮಗಳನ್ನೇ ಹಾಳುಮಾಡುವ ಪಂಚಾಯತ್ ರಾಜ್ಯ ವ್ಯವಸ್ಥೆ. ಇದರ ಪ್ರತಿಬಿಂಬವನನ್ನೇ ನಮ್ಮ ಶಾಸನ ಸಭೆಗಳಲ್ಲಿ ಕಾಣುತ್ತೇವೆ. ಅಲ್ಲಿಯ ಸದಸ್ಯರು ಆಯ್ಕೆಯಾಗಿ ಬಂದ ಕೂಡಲೆ ಪ್ರತಿಜ್ಞಾವಿಧಿ ನೆರವೇರಿಸುತ್ತಾರೆ. ಆಗ ಅವರ ಒಂದು ತಲೆ ಸತ್ಯ ಅಥವಾ ದೇವರು ಅಥವಾ ರೈತ ಅಥವಾ ಆತ್ಮಸಾಕ್ಷಿ ಇತ್ಯಾದಿಗಳ ಹೆಸರಿನಲ್ಲಿ ಪ್ರತಿಜ್ಞೆ ಸ್ವೀಕರಿಸಿ ನೀನು ಯೋಗ್ಯನೆಂದು ತೋರಿಸಿಕೊ ಎಂದು ಹೇಳಿದರೆ ಇನ್ನೊಂದು ತಲೆ ಇದೆಲ್ಲ ಪ್ರಹಸನ, ಎಂದು ಉದಾಸೀನ ಮಾಡಿ ನಿನ್ನ ಏಳಿಗೆಯನ್ನು ನೋಡಿಕೊ ಎಂದು ಹೇಳುತ್ತದೆ. ಆದ್ದರಿಂದ ಇಂದಿನ ಶಾಸನಸಭೆಗಳಲ್ಲಿ ಕ್ರಿಮಿನಲ್ ಅಪರಾಧಿಗಳು, ಕಳ್ಳರು, ಸುಳ್ಳರು ಸೇರಿ ದೇಶದ ಖಜಾನೆಯನ್ನು ದೇಶದ ಪ್ರಕೃತಿ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಅಪರಿಪಕ್ವ ಶಾಸನಗಳನ್ನು ಮಾಡುತ್ತಿದ್ದಾರೆ. ಶಾಸಕರೇ ಮಂತ್ರಿಗಳಾಗುತ್ತಾರೆ. ಮಂತ್ರಿಗಳೇ ಸರ್ಕಾರವೆಂದೆನಿಸಿಕೊಳ್ಳುತ್ತದೆ. ಎರಡು ತಲೆಗಳುಳ್ಳ ಶಾಸಕರು ಮಂತ್ರಿಮಂಡಲ ರಚಿಸಿದರೆ ಸಹಜವಾಗಿಯೇ ಸರ್ಕಾರಕ್ಕೆ ಎರಡು ತಲೆಗಳು ಸೇರುತ್ತವೆ. ಆಗ ಸರ್ಕಾರದ ಪ್ರತಿಯೊಂದು ಕಾರ್ಯಕ್ರಮವೂ ಒಂದಕ್ಕೊಂದು ವಿರೋಧವಾಗಿರುತ್ತದೆ. ಒಂದು ಕಾರ್ಯಕ್ರಮದಿಂದ ಆಗುವ ಪ್ರಗತಿಯನ್ನು ಇನ್ನೊಂದು ಕಾರ್ಯಕ್ರಮ ಹಾಳುಗೆಡಹುತ್ತದೆ. ಇದೊಂದು ರೀತಿ ಸುಂದೋಪಸುಂದರ ಕಥೆಯಂತೆ ಆಗುತ್ತದೆ. ಅಂತಿಮವಾಗಿ ಆ ಇಬ್ಬರೂ ದೈತ್ಯರು ಒಬ್ಬರ ತಲೆಯ ಮೆಲೆ ಇನ್ನೊಬ್ಬರು ಗದಾ ಪ್ರಹಾರ ಮಾಡಿ ಸತ್ತು ಹೋದಂತೆ ಸರ್ಕಾರದ ಯೋಜನೆ ನಿಷೇಧಾತ್ಮಕವಾಗಿ ಪರಿಣಮಿಸುತ್ತದೆ. ಇದಕ್ಕೆ ಉದಾಹರಣೆಯನ್ನಾಗಿ ನಮ್ಮ ದೇಶದ ಹಳ್ಳಿಗಲ ವಿಷಯವೇ ಇದೆ. ಗ್ರಾಮಗಳ ಉದ್ಧಾರವೇ ದೇಶದ ಉದ್ಧಾರವೆಂಬ ಘೋಷಣೆ ಸ್ವಾತಂತ್ರ್ಯ ಪ್ರಾಪ್ತಿಯ ವರೆಗೂ ಇತ್ತು. ಜಾಗತೀಕರಣ, ಕೈಕಾರಿಕರಣದ

ಯುಗ ಪ್ರಾರಂಭವಾಗುತ್ತಲೇ ಗ್ರಾಮಗಳ ಉಚ್ಚಾಟನೆ ಪ್ರಾರಂಭವಾಯಿತು. ನಗರಗಳ ಅಭಿವೃದ್ಧಿಯೇ ದೇಶದ ಉದ್ಧಾರವೆಂಬ ಹೊಸ ಘೋಷಣೆ ಕೇಳಬರಲಾರಂಭಿಸಿತು. ಪರಿಣಾಮ ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕೆಗಳು ನುಂಗಿಹಾಕಿದವು. ಹಳ್ಳಿಗಳ ಯುವಕ-ಯುವತಿಯರು ಹಳ್ಳಿಗಳನ್ನು ತೊರೆದು ನಗರಗಳ ಕೊಂಪೆಗಳ ನಿವಾಸಿಗಳಾದರು. ನಗರಗಳು ಭಾರತೀಯತೆಯನ್ನು ಕಳೆದುಕೊಂಡು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಬೆಳೆಸಿಕೊಂಡವು. ೧೯೪೭ರಲ್ಲಿ ದೇಶ ಕೋಮುಗಳ ಕಾರಣದಿಂದ ವಿಭಜಿತಗೊಂಡರೆ ೧೯೯೦ರ ದಶಕದಲ್ಲಿ ಜಾಗತೀಕರಣದ ಕಾರಣದಿಂದ ನಗರಭಾರತ ಮತ್ತು ಗ್ರಾಮೀಣ ಭಾರತ ಎಂದು ವಿಭಜಿತಗೊಂಡಿತು. ಇದಕ್ಕೆಲ್ಲ ಕಾರಣ ಸರ್ಕಾರ ಎರಡು ತಲೆ ಹೊಂದಿರುವುದು. ಒಂದು ತಲೆ ಗಾಂಧೀಜಿಯವರ ಕನಸನ್ನು ನನಸನ್ನಾಗಿ ಮಾಡು ಎಂದು ಹೇಳಿದರೆ, ಇನ್ನೊಂದು ತಲೆ ಒಬಾಮಾನ ತಲೆ ಹಿಡಿಯೆಂದು ಹೇಳಿತು. ಆಗ ಬಂತು ಉದ್ಯೋಗ ಭರವಸೆ ಯೋಜನೆ ಮತ್ತು ಅತಿ ಅಗ್ಗದ ಬೆಲೆಯಲ್ಲಿ ಧಾನ್ಯದ ಹಂಚಿಕೆ. ಇಂಥ ಯೋಜನೆಗಳು ಒಂದ ರೀತಿಯಲ್ಲಿ ಅಮೇರಿಕಾ ಭಾರತದ ಮೇಲೆ ಹಾಕಿದ ಅಣುಬಾಂಬುಗಳೇ ಆಗಿವೆ. ಇದರ ಪರಿಣಾಮ ಭಾರತ ಅಮೇರಿಕಾಕ್ಕೆ ಶರಣಾಗಿದೆ. ಅಣುಶಕ್ತಿ ಸ್ಥಾವರಗಳ ಯೋಜನೆಗೆ ಸಂಬಂದಿಸಿದ ವಿಚಾರವಾಗಿರಬಹುದು, ಕಾಶ್ಮೀರಕ್ಕೆ ಸಂಬಂಧಿಸಿದ ವಿಚಾರವಾಗಿರಬಹುದು. ಸ್ಥಾವರ ಸ್ಥಾಪನೆಯ ವಿಚಾರದಲ್ಲಿ ಭಾರತ ಅಮೇರಿಕಾ ವಿಧಿಸುವ ನಿಯಮಗಳಿಗೆ ಬದ್ಧವಾಗರಬೇಕಾಗಿದೆ. ಕಾಶ್ಮೀರ ವಿಚಾರದಲ್ಲಿ ಅಮೇರಿಕಾದ ವಿಚಿತ್ರ ನಿಲುವನ್ನು ಸಹಿಸಿಕೊಳ್ಳುತ್ತಾ ಬರಬೇಕಿದೆ. ಅಮೇರಿಕಾ ತಾನು ಕಾಶ್ಮೀರ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವುದಿಲ್ಲ. ಭಾರತ ಮತ್ತು ಪಾಕ್ ಪರಸ್ಪರ ಮಾತುಕತೆಯ ಮೂಲಕ ಕಾಶ್ಮೀರ ಸಮಸ್ಯೆ ಬಗೆಹರಿಸಿಕೊಳ್ಳಲಿ ಎಂದು ಹೇಳುತ್ತಾ, ಇನ್ನೊಂದು ಕಡೆ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಅಪಾರ ಪ್ರಮಾಣದ ಧನಸಹಾಯ ಮಾಡುತ್ತದೆ. ಇದಕ್ಕೆ ಕಾರಣ ಕೇಂದ್ರ ಸರ್ಕಾರ ಒಂದು ತಲೆ ಅಮೇರಿಕಾವನ್ನು ಹಿಂಬಾಲಿಸು ಎಂದು ಹೇಳಿದರೆ, ಇನ್ನೊಂದು ತಲೆ ಕಾಶ್ಮೀರ ಎಂದೆಂದಿಗೂ ಭಾರತದ ಅವಿಭಾಜ್ಯ ಅಂಗವೆಂದು ಹೇಳು ಎಂದು ಸೂಚಿಸುತ್ತದೆ. ಇದರ ಪರಿಣಾಮ ಏನೆಂದರೆ ಭಾರತ ಮತ್ತು ಪಾಕಿಸ್ತಾನದ ಮಧ್ಯ ಘನಘೋರವಾದ ಯುದ್ಧ ನಡೆಯಬೇಕಾದ ಪರಿಸ್ಥಿತಿಯ ನಿರ್ಮಾಣ.

ಸರ್ಕಾರದ ಒಂದು ತಲೆ ಖಾದಿ-ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹ ಕೊಡುವುದರ ಮೂಲಕ ಎಲ್ಲೆಲ್ಲೂ ಉದ್ಯೋಗ ಸೃಷ್ಟಿ ಮಾಡು ಎಂದ ಹೇಳಿದರೆ, ಇನ್ನೊಂದು ತಲೆ ಕೇಂದ್ರೀಕೃತ ಜವಳಿ ಉದ್ಯಮವನ್ನು ಪ್ರಾರಂಭಿಸಿ ಖಾದಿ ಉದ್ಯಮವನ್ನು ನಾಶಮಾಡು ಎಂದು ಹೇಳುತ್ತದೆ. ಒಂದು ತಲೆ ಆಹಾರ ಉತ್ಪಾದನೆ ಹೆಚ್ಚಿಸುವುದಕ್ಕಾಗಿ ರಸಾಯನಿಕ ಗೊಬ್ಬರ, ಕ್ರಿಮಿನಾಶಕ ಉಪಯೋಗಿಸುವಂತೆ ರೈತರನ್ನು ಪ್ರೋತ್ಸಾಹಿಸು ಎಂದು ಹೇಳಿದರೆ, ಇನ್ನೊಂದು ತಲೆ ಸಾವಯವ ಕೃಷಿ ಕೈಗೊಂಡು ಪರಿಸರ ಕಾಪಾಡು ಎಂದು ಹೇಳುತ್ತದೆ. ಈ ನೀತಿಯಿಂದಾಗಿ ಒಂದು

ಕೈಯಿಂದ ಕೊಟ್ಟ ತುತ್ತನ್ನು ಇನ್ನೊಂದು ಕೈಯಿಂದ ಕಿತ್ತುಕೊಳ್ಳುವ ಕೆಲಸವನ್ನು ಸರ್ಕಾರ ಮಾಡುತ್ತಿದೆ.

ಸರ್ಕಾರದ ಒಂದು ತಲೆ ಸ್ವದೇಶಿ ವಿಚಾರವನ್ನು ಹೇಳಿದರೆ ಇನ್ನೊಂದು ತಲೆ ವಿದೇಶಿ ವಿಚಾರವನ್ನು ಹೇಳುತ್ತದೆ. ಪರಿಣಾಮವಾಗಿ ಸ್ವದೇಶಿ-ವಿದೇಶಿ ವಿಚಾರಗಳ ತಾಕಲಾಟದಿಂದ ದೇಶ ತನ್ನತನವನ್ನು, ತನ್ನ ಆತ್ಮಸಾಕ್ಷಿಯನ್ನು, ತನ್ನ ಆತ್ಮಗೌರವವನ್ನು, ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುತ್ತಿದೆ. ಅದ್ಭುತ ಸಂಸ್ಕೃತಿಯನ್ನು ಉಳ್ಳಂಥ ದೇಶ ಸಂಸ್ಕೃತಿ ಹೀನವಾಗುತ್ತಿದೆ.

ಸರ್ಕಾರಕ್ಕೆ ಎರಡು ತಲೆಗಳು ಬರುವುದಕ್ಕೆ ಕಾರಣ ಜನತೆ ತನ್ನ ತಲೆಯನ್ನು ಅಂದರೆ ತನ್ನ ಬುದ್ಧಿಮತ್ತೆಯನ್ನು ಸ್ವಾತಂತ್ರ್ಯ ಬಂದ ಕೂಡಲೆ ಸರ್ಕಾರಕ್ಕೆ ಒಪ್ಪಿಸಿ ತಾನು ಸರ್ಕಾರದ ಮೂರ್ಖತನದ ಆಟಗಳನ್ನು ನೋಡುತ್ತ ಮೂಕ ಪ್ರೇಕ್ಷಕನಾಗಿ ಕುಳಿತದ್ದು. ಸ್ವತಂತ್ರ ದೇಶದ ಪ್ರಜೆಗಳು ಸರ್ಕಾರ ತನ್ನ ಆಳು, ತಾನು ಒಡೆಯ ಎಂದು ಮರೆತದ್ದು; ಜನತಾ ಪ್ರತಿನಿಧಿಗಳು ತನ್ನ ಸೇವಕ ತಾನು ಸೇವ್ಯ ಎಂದು ಮರೆತದ್ದು; ಮಂತ್ರಿಗಳು ತನ್ನ ಉಪಚಾರಕರು ತಾನು ಉಪಚಾರ ಪಡೆಯುವವ ಎಂದು ಮರೆತದ್ದು. ದಂಡಶಕ್ತಿ, ರಾಜ್ಯಶಕ್ತಿಗಿಂತ ಲೋಕಶಕ್ತಿ ನಿಯಂತ್ರಕ ಎಂದು ಮರೆತದ್ದು; ಭ್ರಷ್ಟ ರಾಜಕಾರಣಿಗಳೊಂದಿಗೆ ತಾನೂ ಭ್ರಷ್ಟನಾದದ್ದು.

ಸರ್ಕಾರದ ಎರಡು ತಲೆಯ ಚಿಂತನೆಯ ಪರಿಣಾಮವಾಗಿ ಉಂಟಾದ ಭೀಕರ ಪರಿಸ್ಥಿತಿ ಪರಿಸರ ವಿನಾಶದ್ದು. ಒಂದು ತಲೆ ಅಭಿವೃದ್ಧಿ, ಅಭಿವೃದ್ಧಿ, ಅಭಿವೃದ್ಧಿ ಎಂದ ಮಂತ್ರ ಜಪಿಸಿದರೆ, ಇನ್ನೊಂದು ತಲೆ ಪರಿಸರದ ರಕ್ಷಣೆಯ ಮಂತ್ರ ಜಪಿಸುವುದು. ಇದರ ಪರಿಣಾಮವಾಗಿ ವಾಯು-ಜಲ-ಭೂಮಿ-ಆಹಾರ ಎಲ್ಲವೂ ವಿಷಯುಕ್ತವಾಗಿ ಭೂಮಿಯ ಮೇಲೆ ಮನುಷ್ಯ ಬದುಕುವುದು ಆತಂಕಕಾರಿ ಸಂಗತಿಯಾಗಿರುವುದು.

ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದವು, ಗಣರಾಜ್ಯ ಬಂದು ಐವತ್ತು ವರ್ಷಗಳಾದವು, ನಾಲ್ಕು ಮಹಾಚುನಾವಣೆಗಳಾದವು, ಹಳೆ ತಲೆಮಾರಿನವರೆಲ್ಲ ಗತಿಸಿ ಹೊಸ ತಲೆಮಾರಿನವರು ಬಂದಿರುವರು. ಇವರಾದರೂ ತಮ್ಮ ತಲೆ ಎಲ್ಲಿದೆ ಎಂಬುದನ್ನು ಕಂಡುಕೊಳ್ಳಲಿ.

ಡಿಂಭಗಳನೊಡೆದು ಬನ್ನಿ! ಕಂಭಗಳನೊಡೆದು ಬನ್ನಿ!
ತಾಯಿ ಇದೋ ಬಂದೆವೆನ್ನಿ!

– ಬೇಂದ್ರೆ

* * *

ಕವಿಕರ್ಮ / ಒಂದು ನೀಳ್ಗತೆ

– ಡಾ. ಶಿವರಾಮ ಕಾರಂತ

(ಅಕ್ಟೋಬರ್ ಶಿವರಾಮ ಕಾರಂತರ ಜನ್ಮ ಮಾಹೆ. ಕಾರಂತರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಕಾರಂತರ ಈ ಕಥೆಯನ್ನು ಓದುಗರಿಗೆ ಅರ್ಪಿಸಲಾಗಿದೆ. -ಸಂ)

ನನ್ನ ಗೆಳೆಯನ ಹೆಸರು ಸಿದ್ಧಣ್ಣನೆಂದು. ಅವನು ಇದುವರೆಗೆ ಯಾವ ಸಿದ್ಧಿಯನ್ನೂ ಪಡೆದವನೆಂದು ನನಗೆ ತೋರಿ ಬಂದುದಿಲ್ಲ. ಆದರೂ ಅವನ ತಂದೆ, ಮಗುವು ಗಂಡಾಗಿ ಹುಟ್ಟಿದರೆ 'ಸಿದ್ಧಣ್ಣ'ನೆಂದು ಇವನು ತಾಯಿಯ ಬಸುರಲ್ಲಿರುವಾಗಲೇ ಯೋಚಿಸಿದ್ದನು. ಇದೇ ಅವನ ತಂದೆಯ ಪ್ರಥಮ ಬಯಕೆ. ಅವನ ತಂದೆ ಮಡಿದಿ ಗರ್ಭಿಣಿಯಾದಾಗಲೆಲ್ಲ ಇದೇ ಬಯಕೆಯನ್ನು ಹೊತ್ತಿದ್ದನು. ಆದರೆ ದುರ್ದೈವದಿಂದ ಮೊದಲು ಮೂರಾವರ್ತಿ ಹುಟ್ಟಿದ ಮಕ್ಕಳು ಸಿದ್ಧರಾಗುವ ಬದಲು 'ಸಿದ್ಧಿ'ಯರಾಗಿ ಹುಟ್ಟಿದರು. ರೂಪವೂ ಅಂಥದಿತ್ತು. ನಾಲ್ಕನೆಯ ಬಸಿರು, ತನ್ನ ಮನದ ಕಾಂಕ್ಷೆಯನ್ನು ಪೂರೈಸೀತೆಂದು ಅವನು ಯೋಚಿಸಿದರೆ, ಅದು ಗರ್ಭದಿಂದ ಆರನೆಯ ತಿಂಗಳಲ್ಲೇ ಜಾರಿತು; 'ಸಿದ್ಧಸಿದ್ಧಿ' ಎರಡೂ ಆಗದೆ ಸದ್ದಿಲ್ಲದೆ ಜಾರಿತು. ಇನ್ನು ತನ್ನ ಕರುಳಿನಲ್ಲಿ ನಿಜವಾಗಿಯೂ ಗಂಡು ಮಗು ಹುಟ್ಟದೆಂದು ಹತಾಶನಾದನು. ಒಮ್ಮೆ ಹುಟ್ಟಬೇಕೆಂದರೆ ಗಂಡುಸಾದ ಅವನ ಕರುಳಲ್ಲಿ ಮಕ್ಕಳು ಹುಟ್ಟುವರೇ? ಆದರೆ ದೇವರಿಗೆ ಈ ದೀನನನ್ನು ನಿರಾಶೆಗೊಳಿಸಬಾರದೆಂದು ಮನಸ್ಸಿದ್ದಂತೆ ಕಾಣುವುದು. ತಿರುಗಿ ಅವನ ತಾಯಿ ಇವನನ್ನು ಹಡೆಯುವ ಸಲುವಾಗಿ ಗರ್ಭಿಣಿಯಾದಳು. ಗರ್ಭದ ಮೊದಲ ಚಿಹ್ನೆಯು ಕಾಣತೊಡಗಿದಂದಿನಿಂದ ತಂದೆಯಾದವನ ತಪಸ್ಸು ತೊಡಗಿತು. ಪರಮೇಶ್ವರನನ್ನು ಕೊಂಡಾಡಿ, ಪಾರ್ವತಿಯನ್ನು ಬೈದು 'ಎಂಥವನಾದರೂ ಸರಿಯೆ; ಒಂದು ಗಂಡುಕೂಸನ್ನು ಕೊಡಿಸಯ್ಯ' ಎಂದು ಬೇಡಿದನು. ಹೇಳೀಕೇಳಿ ಆನೆಯ ಸೊಂಡಿಲಿನವನ ತಂದೆಯಾದ ಈಶ್ವರನು ಇನ್ನೇನನ್ನು ಕೊಟ್ಟಾನು? ಬೂದಿ ಬಡುಕ ವಿರಕ್ತನವನು; ಚೆಲುವುಗಿಲುವಿನ ಅರಿವುಂಟೇ? ಅಂತು, ಗಂಡುಮಗುವನ್ನು ಕೊಡಲು ನಿಶ್ಚೈಸಿದಂತೆ ಕಾಣುವುದು. ಪಾರ್ವತಿಯು ಶಪಿಸಿದಳು. ಆದರೂ ಶಿವನು ಒಲಿದ ಮೇಲೆ ಮುನಿದಾನೇ?

ತಾಯಿ ಮೂಕಾಂಬಿಕೆ ಗರ್ಭಿಣಿಯಾದಳು. ನವಮಾಸವು ಭರಿತವಾಯಿತು. ಕೆಲವು ದಿವಸಗಳೂ ಸಂದುವು. ಒಂದೇ ಸವನೆ ಪ್ರಸವ ವೇದನೆ ತೊಡಗಿತು. ತಾಯಿಯ ಕೂಗೇ ಕೂಗು! ವೈದ್ಯರು, ಡಾಕ್ಟರರು, ಸೂಲಗಿತ್ತಿಯು ಆರಾರು ಬಾರಿ ಬಂದು ಹೋದರು. ಉದರ ಶೂಲೆ ತೊಡಗಿ ಒಂದು ವಾರವಾದರೂ ಪ್ರಸವದ ಚಿಹ್ನೆಯಿಲ್ಲ. ಆ ಮದ್ದು ಈ ಮದ್ದೆಂದು ಹಲವು ಉಪಚಾರಗಳಾದವು. ಒಂದು ದಿನ ತಡೆಯಲಾರದ ಉದರಶೂಲೆ ಮಾಕಾಂಬಿಕೆಗೆ, ಇತ್ತ ಕಿವಿಯೊತ್ತಿಕೊಂಡು ಕುಳಿತು ನಾಗಣ್ಣ – "ಕೂಗಲಿಕ್ಕೆ ಕೂಗಲಿಕ್ಕೆ ಇವಳಿಗೇನು ಜೀವ ಹೋಗುತ್ತದೆಯೋ? ಗಂಡನು

ಹೆರುವುದಾಗಿದ್ದರೆ ಈ ಬೊಬ್ಬೆಯಿರುತ್ತಿತ್ತೇ?" ಅಂದುಕೊಂಡನು. ಎಂಟು ಹತ್ತು ದಿನಗಳ ಉದರ ಶೂಲೆಯಿರಲು ಮಗುವು ತೀರ ದೊಡ್ಡ ತಲೆಯದೆಂದು ಊಹಿಸಿದನು. ಬೇಡಿ ಕಾಡಿದುದಕ್ಕೆ ಶಿವನು ಅಪ್ರತಿಮ ಮೇಧಾವಿಯನ್ನು ಕೊಡುತ್ತಾನೆಂದು ನಿಶ್ಚಯಿಸಿದನು. ಒಳಗಿನ ಬೊಬ್ಬೆಯನ್ನು ಕೇಳಲಾರದೆ ತಿರುಗಿ ಸೂಲಗಿತ್ತಿ ವೈದ್ಯರನ್ನು ಬರಮಾಡಲು ಓಡಿದನು. ಅವರು, 'ಇಲ್ಲಯ್ಯ, ಅದು ಏತರಿಂದ ತೊಡಗಿದ ಬೇನೆಯೋ?" ಎಂದಿವನನ್ನು ನಿರಾಶೆಗೊಳಿಸಿ ಬಿಟ್ಟರು. ನಾಗಣ್ಣನ ಕನಸು ಒಡೆಯಿತು. ಹತಾಶನಾಗಿ ಮನೆಯ ಅಂಗಳಕ್ಕೆ ಕಾಲಿಡುತ್ತಾನೆ, ಮಗುವಿನ ಕೂಗು ಮೈಲು ದೂರ ಕೇಳಿಸುತ್ತದೆ. ಓಡೋಡಿ ಬಂದು, "ಗಂಡೇ ಹೆಣ್ಣೇ?" ಎಂದು ಕೇಳಿದನು! ಹೊರಗಿನಿಂದಲೇ ಮನೆಯಲ್ಲಿರುವವಳು ಅವಳೊಬ್ಬಳೇ. (ಉಳಿದವು ಮರಗಳು), ಅದೀಗ ಆಯಾಸದಲ್ಲಿ ಮಲಗಿರುವಳು. ಕೋಪವೂ ಬಂದಿತು. "ಬಂದು ನೋಡಲು ಕಣ್ಣಿಲ್ಲವೇ?" ಎಂದಳು. ನಾಗಣ್ಣನ ಎದೆ ಧಸಕ್ಕೆಂದಿತು. ಅವನಿಗೆ, ಕಣ್ಣಿಲ್ಲವೇ? ಎಂಬ ಕೊನೆಯ ಶಬ್ದ ಮಾತ್ರ ಕೇಳಿಸಿದುದು. "ಶಿವನೇ! ನಿನಗೆ ಮೂರು ಕಣ್ಣುಗಳಿದ್ದು, ನನಗೆ ಕಣ್ಣಿಲ್ಲದವನನ್ನು ಕೊಟ್ಟೆಯಾ!" ಎಂದು ದಿಗಿಲು ಬಿದ್ದನು. ಒಳಗೋಡಿ ನೋಡುವಾಗ ಮಗುವು ಕುರುಡಲ್ಲ; ಹೆಣ್ಣಲ್ಲ, ಸೊಂಡಿಲೂ ಇಲ್ಲ! ಕರೆದೇ ಕರೆದ, "ಸಿದ್ಧಾ! ಬಂದೆಯಾ?" ಎಂದು ಎತ್ತಿಮುತ್ತಿಡಲು ಮುಂದಾದನು. ಸೂತಕದ ತಾಯಿ ಗದರಿಸಿದಳು. ಅಲ್ಲೇ ನೋಡುತ್ತ ನಿಂತನು. "ಯಾರನ್ನಾದರೂ ಕರೆಯಬಾರದೇ?" ಎಂದಳು. ಮನಸ್ಸಿಲ್ಲದೆ ಮಗುವನ್ನು ಬಿಟ್ಟು ಓಡಿದ.

ಸೂಲಗಿತ್ತಿ ವೈದ್ಯರೆಲ್ಲ ಸಕಾಲದಲ್ಲಿ ಬಂದರು. 'ಬಾಣಂತಿ ಸೌಖ್ಯವಾಗಿದ್ದಾಳೆ. ಕಬ್ಬಿಣದ ತುಂಡಿನಂತೆ ಸಿದ್ಧನೂ ಸೌಖ್ಯವಾಗಿದ್ದಾನೆ. "ನಾಮಕರಣಕ್ಕೆ ತಪ್ಪದೆ ಬರಬೇಕು" ಎಂದು ಮಾವನಿಗೆ ಪತ್ರ ಎಸೆದು ಬಿಟ್ಟ. ಮಾವನೂ ಬಂದನು. ನಾಮಕರಣದ ದಿನವೂ ಬಂತು. ಸಿದ್ಧನೆಂಬ ಹೆಸರು ಹಾಕದುದು ಅವನಿಗಂತೂ ಅಸಮಾಧಾನ. ಒಂದು ನಿನ್ನಪ್ಪನ ಹೆಸರು, ಇಲ್ಲವೆ ನನ್ನ ಹೆಸರು ಇರಿಸಬಾರದೇ? ಎಂದು ಸೂಚನೆಯನ್ನು ಕೊಟ್ಟನು. ಒಂದೋ 'ಶಾಮಣ್ಣ' ಇನ್ನೊಂದು 'ನೇಮಣ್ಣ' ಎರಡೂ ಅವನಿಗೆ ಸರಿತೋರಲಿಲ್ಲ. ಸಿದ್ಧನೇ ಆಗಲೆಂದು ಹಟಹಿಡಿದನು. "ಹೋಗಲಿ ಅವರ ಮನಸ್ಸಿನಲ್ಲಿದ್ದದ್ದಾಗಲಿ" ಎಂದು ಮೂಕಾಂಬಿಕೆ ತಂದೆಯನ್ನು ಬೇಡಿದಳು. ಸಿದ್ಧನೆಂಬ ನಾಮಕರಣವು ಸರ್ವಸಮ್ಮತದಿಂದ ಮಂಜೂರಾಯಿತು.

ಇದು ಸಿದ್ಧನ ಜನ್ಮ. ಅವನ ಬಾಲ್ಯವು ಬಹು ಬೇಗ ಸಾಗಿತು. ಅವನಿಗೆ ೧೨-೧೩ ವರುಷವಾಗುವುದರೊಳಗೇ ಏಕೆ ಮದುವೆ ಮಾಡಬಾರದೆಂದು ನಾಗಣ್ಣನ ಯೋಚನೆ. 'ರತಿ'ಯಂಥ ಹುಡುಗಿಯನ್ನು ಹುಡುಕುವೆನೆಂದು ಪಣತೊಟ್ಟನು. ತನ್ನ ಮಗನು ಮನ್ಮಥನ ಮುತ್ತಜ್ಜನೆಂದು ನಾಗಣ್ಣನೇ ಅನ್ನುತ್ತಿದ್ದ. ಹಾಗಿರಲು, ಕಡಿಮೆ ಕಡಿಮೆ, 'ರತಿ'ಯಂಥ ಹುಡುಗಿ ಬೇಡವೇ? ಹುಡುಗಿ ಹುಡುಕುವುದರಲ್ಲೇ ವರುಷ ಕಳೆಯಿತು. 'ಅಯ್ಯೋ, ಮಗನಿಗೆ ಮೀಸೆ ಬಂದರೂ ಮದುವೆ ಮಾಡುದಿರುವುದೋ?' ಎಂಬ ಆತುರ ಅವನಿಗೆ. ಆಗ ಪಣ್ಯಕ್ಕೆ ಶಾರದಾ ಬಿಲ್ಲು ಬಂದಿರಲಿಲ್ಲ, ಬಂದಿದ್ದರೂ, ತನ್ನ ಮನಸಂತೃಪ್ತಿಗಾಗಿ ಆ ಬಿಲ್ಲನ್ನು ಮುರಿಯುತ್ತಿದ್ದ. ಅಂತು, ಎರಡು ವರುಷದ ಅವಿಶ್ರಾಂತ ಹೋರಾಟದಿಂದ 'ರತಿ'ಯೊಬ್ಬಳನ್ನು ಸೆಳೆದು ತಂದೇ ತಂದನು. ಮದುವೆ ಬಲು ಅಬ್ಬರದಿಂದ ನಡೆಯಿತು. ಸಿದ್ಧನು ಗೃಹಸ್ಥನಾದ. "ತನ್ನ ಸೊಸೆಯು ಮನೆಗೆ

ಕಾಲಿರಿಸಿದ ಘಳಿಗೆಯು ಅಮೃತ ಘಳಿಗೆ" ಖಂಡಿತವಾಗಿಯೂ, ಇನ್ನು ಮನೆಗೆ ಲಕ್ಷ್ಮಿಯೇ ಬಂದಳು ಎಂದುಕೊಂಡನು. ಲಕ್ಷ್ಮಿ ಬಂದುದು ಅಹುದು. ಹುಡುಗಿಯ ಹೆಸರು ಹಾಗೆಯೇ ಇದೆ. ಮಗನು ಹುಟ್ಟಿದಾಗ "ಆ ಕೃಷ್ಣನೇ ಮಗನಾಗಿ ಬಂದ." ಎಂದು ಹೇಳಿದ ನಾಗಣ್ಣ. ಈಗ ಈ ಲಕ್ಷ್ಮಿಯ ಹೆಸರನ್ನು ಹೇಳುವುದೊಂದು ಅತಿಶಯವೇ?

ಇತ್ತ, ಮೂಕಾಂಬಿಕೆಯ ಪ್ರಪಂಚದ ವಾರ್ತೆಯನ್ನು ಹೇಳುವ ಕುಮಾರ ಕಂಠೀರವನ ಜನುಮದ ದಿನದಿಂದ ಅವಳಿಗೆ ಬೇನೆ ತಪ್ಪದಾಯಿತು. "ಈ ಅನಿಷ್ಟವು ನನ್ನ ಪ್ರಾಣವನ್ನು ಕೊಳ್ಳುತ್ತದೆಂದು ತಿಳಿದಿದ್ದೆ. ಹಾಗೆ ಮಾಡದೆ ಈಗ ದಿನನಿತ್ಯ ಜೀವ ತಿನ್ನುತ್ತಿದೆ". ಎಂದು ಮಗುವಿನದುರಿಗೆ ಸದಾ ಅನ್ನುತ್ತಿದ್ದಳು. ಮಗುವಿನ ತಂದೆಯ ಎದುರು ಅನ್ನುವ ಸಾಹಸ ಇರಲಿಲ್ಲ. ಅಂತು, ಸಿದ್ಧನು ಪ್ರವರ್ಧಮಾನನಾಗಿ ಬೆಳೆದಂತೆ ಮೂಕಾಂಬಿಕೆ ಹಾಸಿಗೆ ಹಿಡಿಯುತ್ತ ಬಂದಳು. ಇವನ ಹೆರಿಗೆಯಿಂದಾಗಿ, ತಾಯಿಗೆ ವಾತರೋಗ ತೊಡಗಿತೆಂದು ಡಾಕ್ಟರು ಎಂಬ ವೈದ್ಯರು ಹೇಳಿದರು. ಆ ಮಾತಿಗೆ ನಾಗಣ್ಣ ಕಿಡಿಕಿಡಿಯಾದನು. "ಇದು ವಾತವಲ್ಲ ಮಣ್ಣಲ್ಲ; ಮನೆಗೆ ಯಾರಾದರೂ ಅಡುಗೆಯ ಜನ ಬರಲಿ ಎಂದು ಅವಳು ಮಾಡುವ ನಟನೆ" ಎಂದು ಬಿಟ್ಟನು. ಇನ್ನು ಮುಂದೆ 'ಅಡುಗೆಯ ಕೆಲಸವನ್ನು ಮಾತ್ರ ಹೆಂಗಸರು ನಿರ್ವಹಿಸಿದರೆ ಸಾಕು. ಶಿಶು ಧಾರಣೆಯ ಮಹಾಕಾರ್ಯವನ್ನು ಅಬಲೆಯರ, ಚಂಚಲೆಯರ, ಚಪಲೆಯರ ಕೈಯಲ್ಲಿ ಎಂದೂ ಕೊಡಬಾರದು' ಎಂದವನ ವಿರೋಧ. ಇದಕ್ಕೆ ಬ್ರಹ್ಮನು ಸಮ್ಮತಿಸಿದಿದ್ದರೆ "ಹೆಣ್ಣುಮಕ್ಕಳನ್ನು ಹೆಂಗಸರೂ, ಗಂಡುಮಕ್ಕಳನ್ನು ಗಂಡಸರೂ, ಹೆರುವಂತಾಗಲೆಂದು" ಅವನು ತಪಸ್ಸು ಮಾಡತೊಡಗಿದನು. ಈ ಇಬ್ಬರು ಗಂಡಹೆಂಡಿರ ತಪಸ್ಸಿನಲ್ಲಿ ಮೊದಲಿನ ಮೂರು ಹೆಣ್ಣು ಹುಡುಗಿಯರು, ಒಂದೆರಡು ವರ್ಷದಲ್ಲಿ ಬಂದ ಊರಿಗೆ ತೆರಳಿದವು. ತಾಯಿಯ ಶೋಕ ಮತ್ತಷ್ಟು ಹೆಚ್ಚಿತು. "ಈ ಸಿದ್ಧನೆಂಥ ಕೆಡುಗಳಿಗೆಯಲ್ಲಿ ಹುಟ್ಟಿದನೋ" ಎಂದು ಅವಳು ಮಗನನ್ನು ಶಪಿಸಿದಳು. ಜ್ಯೋತಿಷ್ಕರನ್ನು ಕರೆಯಿಸಿ ಉದ್ದಿನ ದೋಸೆಯನ್ನು ಮಾಡಿ ಬಡಿಸಿ, ಉಪಚರಿಸಿ, ಆ ಬಳಿಕ ಮಗನ ಜಾತಕ ತೋರಿಸಿದಳು. ಅವರು, "ಹುಡುಗನಿಂದ ಅಕ್ಕಂದಿರ ಸಾವಾಗುತ್ತದೆ" ಎಂದರು. ಆಗುತ್ತದೆಂದರೇನು? ಆಗಿಯಾಗಿದೆ. ಇನ್ನೇನು ಅನಿಷ್ಟವು ಬಂದೀತೋ "ಈ ಪಿಶಾಚಿಯಿಂದ" ಎಂದು ಅತ್ತಳು. ದೋಸೆ ಪಾಯಸಗಳ ಔತಣವನ್ನು ಕೊಟ್ಟ ಅನ್ನದಾತೆಯನ್ನು ನೋಯಿಸಬಾರದೆಂದು, "ಇಲ್ಲ, ಇನ್ನೇನು ಅಪಾಯವು ಬಾರದು" ಎಂದರು. ಆ ದಿನ ಪುಣ್ಯವಶಾತ್ ನಾಗಣ್ಣನು ಕೋರ್ಟು ಕಛೇರಿಯೆಂದು ಪಟ್ಟಣಕ್ಕೆ ಹೋಗಿದ್ದನು.

ನಾಗಣ್ಣನೂ ಮಗನ ಜಾತಕವನ್ನು ಇನ್ನೊಬ್ಬ ಜೋತಿಷ್ಯರ ಕೈಗೆ ಕೊಟ್ಟನು ಅವರದೊಂದೇ "ಇನ್ನಿಂಥ ಜಾತಕವಿಲ್ಲ" ಎಂದರು. ಮುಂದೆ ವಿವರಗಳನ್ನು ನಾಗಣ್ಣನು ಸಹ ಕೇಳಲಿಲ್ಲ.

ಅವನ ಹೊಟ್ಟೆ ತುಂಬಿತು. ಜ್ಯೋತಿಷ್ಯರ ಕಿಸೆ ತುಂಬಿತು. ಈ ಎರಡು ಜಾತಕಗಳ ವಿಮರ್ಶೆಮಾಡುವ ಗಂಡಹೆಂಡಿರ ಗದ್ದಲದಲ್ಲಿ ಮನೆಯೂ ತುಂಬಿತು. ಸುಕುಮಾರ ಕಂಠೀರವನ ಮೂರನೆಯ ಯವಸ್ಸಿನಲ್ಲಿ ತಾಯಿ ಮೂಕಾಂಬಿಕೆಯೂ, ಪರಲೋಕವನ್ನೈದಿದ್ದಳು. ತಾಯಿಯಿಲ್ಲದ ಮಗುವಿನ ಮುಖವನ್ನು ಕಂಡು,

ಮಡದಿಯು ಹೇಳದೆ ಕೇಳದೆ ಸತ್ತಳಲ್ಲಾ ಎಂದು ನಾಗಣ್ಣನೂ ತುಂಬಾ ವ್ಯಥೆಗೊಂಡನು. ಮರುಮದುವೆಯಾಗೆಂದು ನೂರು ಮಂದಿ ಬಂದು ಅವನನ್ನು ಕಾಡಿದರೂ ಅವನು ಒಪ್ಪಲಿಲ್ಲ. "ಮಲತಾಯಿಯ ತಂಟೆ ಮರಿಮಕ್ಕಳಿಗೂ ಇರಬಾರದು" ಎಂದುಕೊಂಡು ಸುಮ್ಮನಿದ್ದನು.

ಅಂಥ ಏಕಮಾತ್ರ ಪುತ್ರರತ್ನದ ವಿವಾಹ ಮಹೋತ್ಸವವು ಜರುಗಿ ಮನೆಯೆಲ್ಲ ನಗುವಿನಿಂದ ತುಂಬಿತು. ಗೃಹಲಕ್ಷ್ಮಿಯು ಬಂದ ಎರಡು ತಿಂಗಳಲ್ಲಿ ನಾಗಣ್ಣನ ಪ್ರಾಣಪಕ್ಷಿಯು ಸನ್ನಿಪಾತದಿಂದ ಹಾರಿಹೋಯಿತು.

ಅಲ್ಲಿಯವರೆಗೆ ತನ್ನ ಗೆಳೆಯನಾದ ಸಿದ್ಧನ ಇತಿಹಾಸ ನನಗೆ ಗೊತ್ತು. ನಾನೂ ಅವನ ಮದುವೆಗೆ ಹೋದವನು. ಕೆಲವು ಸಮಯವಾದರೂ ಅವನೊಡನೆ ಶಾಲೆಗೆ ಹೋದವನೇ. ಅಂದರೆ, ಹೆಚ್ಚು ಸಮಯ ಅವನು ಶಾಲೆಯಲ್ಲಿ ಅನಾವಶ್ಯಕವಾಗಿ ಸಮಯವನ್ನು ಕಳೆಯುತ್ತಿರಲಿಲ್ಲ. ಅವನಿಗೆ ಮದುವೆಯಾಗುವಾಗ ಹದಿನೈದನೆಯ ವಯಸ್ಸು. ತಂದೆ ಸಾಯುವಾಗ ಹದಿನಾರು. ಅವನು ಸತ್ತ ಕೆಲವು ದಿವಸಗಳಲ್ಲಿ ಅಜ್ಜನ ಮನೆಯವರು ಬಂದು, ಸಿದ್ಧನನ್ನೂ, ಅವನ ಮಡದಿಯನ್ನೂ, ಕರೆದೊಯ್ದರು. ಆಮೇಲೆ ನನಗೆ ಸಿದ್ಧನ ನೆನಪು ಸಹ ಮರೆತುಹೋಯಿತು. ನೆನಪನ್ನು ಇರಿಸಿಕೊಳ್ಳುವ ಎಂದರೆ, ಮಳೆಗಾಲ ನಮ್ಮ ಜತೆಯಲ್ಲಿ, ನೇರಿಳೆ ಹಣ್ಣುಗಳನ್ನು ಸಹ ಒಟ್ಟು ಮಾಡಲು ಅವನು ಕಾಡಿಗೆ ಬರುತ್ತಿದ್ದಿಲ್ಲ. ಕಣ್ಣಿಗೂ ದೂರವಾದನು. ಸ್ಮೃತಿ ಪಥದಿಂದಲೂ ಮರೆಯಾದನು.

ನಾನೂ, ಹಳ್ಳಿಯ ಸಾಲೆ, ಪೇಟೆಯ ಸಾಲೆ, ನಗರದ ಕಾಲೇಜು, ಈ ಮೂರರಲ್ಲೂ ಸಂಚಾರಮಾಡಿ ವಿಶ್ವವಿದ್ಯಾಲಯದ ಬಿಲ್ಲೆ ಬಿರುದುಗಳನ್ನು ಅಂಟಿಸಿಕೊಂಡು ಬಿ.ಎ. ಆಗಿ ಮನೆಗೆ ಬಂದು ಕುಳಿತಿದ್ದೇನೆ. ನೌಕರಿ ಗಿವುಕರಿ ಸಿಗುವುದಿಲ್ಲವೆಂದಲ್ಲ, ಅದರ ಪ್ರಯತ್ನ ಮಾಡಲಿಲ್ಲವೆಂದಲ್ಲ; ನಾನು ಆಗಾಗ ಅರ್ಜಿಗಳಿಗೆ ಚೀಟಿ ಅಂಟಿಸಲು ಹೋಗುವುದನ್ನು ಕಂಡು "ಯಾವನಾದರೂ ಒಬ್ಬ ಪೋಷ್ಟು ಮಾಸ್ತರನ ಮಗಳನ್ನು ಮದುವೆಯಾಗಬಾರದೇ" ಅಂದದ್ದೂ ಉಂಟು. ಆದರೂ ಕೆಲಸ ನನಗೆ ಸಿಗಲಿಲ್ಲ. ಕಾರಣವಿಷ್ಟೆ; ನಾನು ಅರ್ಜಿ ಕಳುಹಿಸಿ ಅದು ಆಫೀಸನ್ನು ಮುಟ್ಟಿದ ಕ್ಷಣಕ್ಕೆ ಒಬ್ಬರಾದರೂ ಪ್ರಾಣಬಿಟ್ಟು ಸ್ಥಳ ಖಾಲಿಯಾದುದೆಂಬುದಿಲ್ಲ. ನನಗಾದರೋ ಒಂದು ಗೌರವ, ನಾನು ಇತರರ ಬಾಯಿಗೆ ಮಣ್ಣೆರಚಿದವನಲ್ಲವೆಂದು, ವಿದ್ಯೆ ಇದ್ದಮೇಲೆ ಸರ್ವತ್ರ 'ಪೂಜ್ಯತೇ' ಅಲ್ಲವೇ? ಮತ್ತೇತರ ಹೆದರಿಕೆ ಎಂದು ಧೈರ್ಯವಾಗಿ ಮನೆಗೆ ಬಂದೆ. ಅದರಲ್ಲೂ ಒಂದು ಧೈರ್ಯವೆಂದರೆ ನನ್ನಲ್ಲಿದ್ದ ವಿದ್ಯೆಯು ಯಾರಿಗೂ ಕಳಲು ಬರುವ ಧನವಲ್ಲವಷ್ಟೆ! ನನ್ನ ಹಳ್ಳಿಯ ಮನೆಗೆ ಹೋಗಿ ಕುಳಿತೆ. ಬೇಸಾಯಗಾರನಾಗಿ ಅಲ್ಲ; ಬಾಯಿಗೆ ಮೊಸರು ಸಿಗದಿದ್ದರೂ ಚಿಂತೆ ಇಲ್ಲ, ಕೈಗೆ ಕೆಸರು ಬೇಡವೆಂದು ಸುಮ್ಮಗೆ ಕುಳಿತಿದ್ದೆ. ಕಾಲಕ್ರಮೇಣ, ಓದಿದ ಇಂಗ್ಲೀಷು ಮರೆತಿರಲೂಬಹುದು. ಕಾರಣ, ನಾನು ಆ ಕಗ್ಗಲ್ಲ ಹಳ್ಳಿಯಲಲಿ ಯಾವ ಭೂತದೊಡನೆ ಇಂಗ್ಲಿಷು ಮಾತಾಡಲೀ? ನಾಲ್ಕು ಲಾ ಪುಸ್ತಕಗಳನ್ನಾದರೂ ವಕೀಲರಲ್ಲಿ ಆಗಾಗ ಹೋಗಿ ನೋಡಿಕೊಂಡು, ಅದನ್ನು ನೆನವರಿಕೆ ಮಾಡಿಕೊಳ್ಳುವೆ ಅಂದರೆ, ನಮ್ಮ ಅಪ್ಪನೇ ಕೋರ್ಟು ಕಚೇರಿಗೆ ಹೋಗುವ ಕೆಲಸವನ್ನು ಮಾಡುತ್ತಿದ್ದ. ನನ್ನ ವಿರಾಮಕ್ಕೆ ಉತ್ತಮ ವ್ಯವಸಾಯವಾವುದೆಂದು ತಿಳಿಯದೆ "ಏಕ್‌ದಂ ಕವಿಯಾಗಲು

ನಿಶ್ಚೈಸಿದೆ. ಕವಿತೆಯ ಗುಟ್ಟು ನನಗೆ ಮೊದಲೆ ಗೊತ್ತಿತ್ತು. ಕಲಿಯುವಾಗ ಇಡಿ ಇಡೀ ಟೆನಿಸನ್, ಶೇಕ್ಸ್‌ಪಿಯರುಗಳನ್ನು ಮಗುಚಿದವನು ನಾನು. ಈಗ ಮಾಡಲೇಬೇಕಾದ ಕೆಲಸವೆಂದರೆ, ಕನ್ನಡದಲ್ಲಿ ಕವಿತೆಗಳನ್ನು ಬರೆಯುವುದು, ವೃತ್ತಪತ್ರಿಕೆಗಳಿಗೆ ಕಳುಹಿಸುವುದು. ಅವು ಎಂದಿಗೆ ಬಂದಾವು ಎಂದು ಕಾದಿರುವುದು. ಆದರೆ ನನ್ನ ದುರ್ದೈವದಿಂದೆಂಬಂತೆ ಕಲಿತ ಕನ್ನಡ ಮರೆತೇ ಹೋಯಿತು. ಕೆಲವು ದಿವಸಗಳ ಪರಿಶ್ರಮದಿಂದ ಅದನ್ನು ಜಾಗ್ರತೆಗೊಳಿಸಿಕೊಂಡು ಕವಿವರನಾಗಲು ಅಣಿಯಾದೆ. ಶಾಯಿಮಸಿಗಳಿಗೆ ಬರಗಾಲವಿಲ್ಲ. ಕವಿತಾ ವಿಷಯಕ್ಕೂ ಕೊರತೆ ಇಲ್ಲ, ಮನೆಯ ಮುಂದೆ ಕವಿತೆಗೆ ಬೇಕಾದ ನೆಲ-ಜಲ-ಆಕಾಶ-ಸೂರ್ಯ-ಚಂದ್ರ ಪ್ರತಿಯೊಂದೂ ಇದ್ದವು. ಇಲ್ಲದಿದ್ದರೆ ನಾನಿರುವಲ್ಲಿಗೆ ಬರುತ್ತಿದ್ದವು. ಹಾ! ಮಾರುತ, ಇವನ ವಿಚಾರ ಮರೆತೆ. ಅವನೂ ಕೆಲವನ್ನು ತರುತ್ತಿದ್ದನು. ಕೆಲವು ಬಾರಿ ಮಂದ-ಮಾರುತನಾಗಿ ಬರುತ್ತಿದ್ದನು. ಹೀಗೆ ನನ್ನ ಕಾರ್ಯಾಲಯದ ಸಿದ್ಧತೆಯಾಯಿತು. ಒಂದು ದಿನ ಯೋಚನೆ ಮಾಡಿ ಇಂಥಿಂಥ ವಿಷಯಗಳ ಮೇಲೆಯೇ ಕವಿತೆಗಳನ್ನು ಬರೆಯಬೇಕೆಂದು ನಿಶ್ಚಯಿಸಿದೆ. ಕನಿಷ್ಠ ಒಂದು ವರುಷದ ಪೇಪರಿನಲ್ಲಿ ಬರುವಂತೆ ೫೨ ಹೆಸರುಗಳಾದರೂ ಬೇಕಾಯಿತು. ನೆಲಜಲ-ಜಲಆಕಾಶ-ಆಕಾಶಮನೆ ಹೀಗೆ ವಿಷಯಗಳ ಸಂದು ಕುಣಿಕೆಗಳನ್ನು ಕೂಡಿಸಿ ಹಾಗೂ ಹೀಗೂ ೫೨ನ್ನು ಭರತಿ ಮಾಡಿದೆ. ಅಷ್ಟು ಬೇಡವಿತ್ತು. ವರುಷಕ್ಕೆ ನನ್ನ ಪೇಪರಿನವರು ಎರಡು ಬಾರಿ ಹಬ್ಬದ ನೆಪ ಹೇಳಿ, ಪತ್ರಿಕೆಯನ್ನು ಪ್ರಕಟಿಸುತ್ತಿರಲಿಲ್ಲ.

ಇನ್ನು ಬರೆಯುವ ಕೆಲಸ. ಬರಹ ಬಲ್ಲವರಿಗೆ ಬರೆಯುವುದು ನಿಮಿಷದ ಕೆಲಸ. ಬರೆದೆ, ಕಳುಹಿದೆ. ಬರೆದೆ ಕಳುಹಿದೆ...... ಒಂದು ವಾರ, ಒಂದು ತಿಂಗಳು, ಎರಡು ತಿಂಗಳುಗಳು ಕಳೆದರೂ ನನ್ನ ಕವಿತೆಗಳಿಲ್ಲ. ಚೀಟಿಯ ಲೆಕ್ಕವೇ ಮೂರಾಣೆಯಾಯಿತು. ಇನ್ನು ಹೀಗೆಯೇ ಕಳುಹಿಸದರಾಗದು ಎಂದು 'ಪಾವತಿ' ರಶೀದಿ ಸಹಿತ ರಿಜಿಸ್ತ್ರಿಮಾಡಿದೆ. ಆದರೂ ಕವಿತೆಯು ಪ್ರಕಟವಾಗಿ ಬರಲಿಲ್ಲ. ಆಲಸಿಕನಾದ ನಾನು ತರಿಸುವ ಪತ್ರಿಕೆಯ ಸಂಪಾದಕನು ಅಲ್ಲ ಕಂಪೋಜಿಟರನು ಒಂದೇ ಒಂದು ಪಂಕ್ತಿಯನ್ನು ಜೋಡಿಸಲಿಲ್ಲ. ಅವನನ್ನು ಶಪಿಸಿದೆ, ಮರುವರುಷದ ವರ್ಗಣಿಯನ್ನು ವಜಾಮಾಡುವೆನೆಂದು ನಿಶ್ಚೈಸಿದೆ. ಹಾಗೆಯೆ, ಒಂದು ಪತ್ರ ಬರೆಯುವ ಸಮಯ ನನ್ನ ತಂದೆ ಬಂದು, "ಇದೋ ನೋಡು, ಇದೊಂದು ಜಾಹೀರಾತನ್ನು ನಿನ್ನ ಪೇಪರಿಗೆ ಕಳುಹಿಸು. ೫ ರೂಪಾಯಿಯನ್ನು ಮನಿಯಾರ್ಡರು ಮಾಡು" ಎಂದರು. ಪಿತೃವತ್ಸಲನಾದ ಶ್ರೀರಾಮಚಂದ್ರನಂತೆ ಹಾಗೆಯೇ ಮಾಡಿದೆ. ಅದರ ಜತೆಯಲ್ಲಿ ಒಂದು ಕವಿತೆಯನ್ನೂ ಕಳುಹಿಸಿ "ಇದೇ ಕೊನೆಯ ನಿರೀಕ್ಷಣೆ" ಎಂದು ಬರೆದೆ. ಮರುವಾರದ ಸಾಹಿತ್ಯ ವಿಭಾಗದಲ್ಲಿ ನನ್ನ ಕವಿತೆಗಳ ಸಾಲೇ ಸಾಲು! ಇನ್ನಾದರೂ ಈ ಮನುಷ್ಯನಿಗೆ ಬುದ್ಧಿ ಬಂತು ಎಂದು ಧೈರ್ಯಗೊಂಡೆ.

ಈಗ ನಾನು ಒಂದೆರಡು ವರ್ಷಗಳಿಂದ ವರಕವಿಯೇ ಆದೆನು. ನನ್ನ ಕವಿತೆಗಳನ್ನು ಇಂಗ್ಲಿಷಿನಲ್ಲಿ ಪರಿವರ್ತಿಸಿ ದೊಡ್ಡ ದೊಡ್ಡ ಪತ್ರಿಕೆಗಳಿಗೆ ಕಳುಹಿಸುವ ಯೋಚನೆಯೂ ಆಯಿತು.

ಒಂದು ದಿನ ಸ್ಫೂರ್ತಿಬಂದು, ಇಂಗ್ಲೀಷಿನಲ್ಲೆ ಬರೆಯತೊಡಗಿದೆ. ಮನೆಯ ಮುಂದಿನ ಗುಡ್ಡದ ಹಿಂದೆ ಒಂದು ಮೋಡವು ಓಡುತ್ತಿತ್ತು. The cloud messenger

ಎಂಬ ಕಾಳಿದಾಸನ 'ಮೇಘದೂತ'ದ ಹೆಸರನ್ನು ಅದಕ್ಕೆ ಇರಿಸಿದೆ. ಬರೆಯತೊಡಗಿದೆ. ಒಂದು ಚರಣವು ಬರೆಯುವುದರೊಳಗಾಗಿ "ಹು ಮೋಂ" ಎಂದು ಯಾವುದೋ ಒಂದು ಪ್ರಾಣಿ, ತೋಳು ಮುರಿಯುವಂತೆ ನನ್ನನ್ನು ಅಲುಗಾಡಿಸಿ ಬಿಟ್ಟಿತು. ಸಿಟ್ಟೆಂದರೆ ಅಂಥಾ ಸಿಟ್ಟು ಬಂದಿತು. ಕಣ್ಣನ್ನು ಅರಳಿಸಿ ಮೇಲಕ್ಕೆ ನೋಡುತ್ತೇನೆ, 'ಬಾಲ್ಯದ ಗೆಳೆಯ ಸಿದ್ಧಣ್ಣ'. "ಸಿದ್ಧಣ್ಣಾ" ಎಂದೆ. ನೋ, ನೋ ನಾನೀಗ ಹೆಸರು ಬದಲಿಸಿರುವೆ. ನನ್ನ ಹೆಸರು ಸಹ ರಿಜಿಸ್ಟರು ಆಗಿದೆ. ನನ್ನ ಹೆಸರೀಗ 'ಕವಿಕರ್ಮ' ಎಂಬ ಅಭಿದಾನವನ್ನು ಆಂತಿರುವೆ ಎಂದನು. ಅವನೂ ಕವಿತಾ ರಾಜ್ಯದಲ್ಲಿ ಕಾಲಿರಿಸಿದ್ದಾನೆ. ಹೆಚ್ಚೇನು? ಸದ್ಯವೇ ಅವನ ಹೆಸರಿನದೊಂದು ಪತ್ರಿಕೆಯೂ ಪ್ರಕಟವಾಗುವುದೆಂದನು. ನನಗೆ ಧೈರ್ಯವಾಯಿತು. "ನನ್ನ ಕವಿತೆಗಳೆಲ್ಲ ನಿನ್ನ ಪತ್ರಿಕೆಗೆ" ಎಂದೆನು. ಅಲ್ಲದೆ, ನನ್ನ ಕವಿಮಾರ್ಗದ ಸಾಹಸಗಳೆಲ್ಲವನ್ನು ಹೇಳಿದೆನು. ಅವನು, "ತೀರ ನಿಜ. ಈ ಮೊಂಡರಿಗೆ ಕವಿತೆಯು ವಿಚಾರವೇನು ಗೊತ್ತು. ಯಾವಳಾದರೂ ಒಬ್ಬಳು ಹೆಗ್ಗಣವನ್ನು ಹತ್ತರೆ ಅದರ ಮೇಲೆ ಅಗ್ರಲೇಖನವನ್ನು ಬರೆಯುವ ಪತ್ರಕರ್ತರಿವರು. ಕವಿತೆಯ ವಿಷಯ ಏನು ತಿಳಿದೀತು? ಮುಖ್ಯವಾಗಿ ಕವಿಸ್ವಾತಂತ್ರ್ಯ ಉಳಿಯಬೇಕಾದರೆ ಅವನದೇ ಸ್ವಂತ ಪತ್ರಿಕೆ ಬೇಕು" ಎಂದನು. ನನಗೂ ಅಹುದೆನಿಸಿತು. ಅವನಲ್ಲಿ ಈಗಾಗಲೇ ಇರುವ ಕವಿತೆಗಳು ಮೂರು ವರ್ಷದ ಪತ್ರಿಕೆಗೆ ಸಾಕಷ್ಟು ಇವೆ ಎಂದೆನು. ನನ್ನದಿನ್ನೂ ಹಿರಿಕ್ಕೆ ಭರತಿಯಾಗಿಲ್ಲ.

ಸತ್ಯವನ್ನು ನುಡಿಯುವುದಾದರೆ, ನನ್ನ ಗೆಳೆಯ 'ಕವಿಕರ್ಮ'ನ ಮಾತುಗಳನ್ನು ಕೇಳುತ್ತ ಮರುಳಾದೆನು. ಅವನ ಕವಿತೆಯನ್ನು ನಾನು ಕೇಳಲಿಲ್ಲವಾದರೂ, ಅವನ ರೀತಿನೀತಿಗಳನ್ನು ಕಂಡು ಅವನು ನಿಜವಾಗಿಯೂ ಕವಿಯು ಅಹುದು ಎಂದು ನನಗೆ ಅನಿಸಿತು. ನನ್ನ ಪೂರ್ವದ 'ಸಿದ್ಧ'ನು ಕವಿಕರ್ಮನಾಗುವನೆಂದು ನಾನು ಎಣಿಸಿದ್ದೆನೇ? ಅವನು ಹೆಜ್ಜೆ ಹಾಕಿದರೆ ಭಾವನಾರಾಜ್ಯದಲ್ಲಿರುವವನಂತೆ ಕಂಡಿತು. ಅವನ ಉಡುಗೆತೊಡಿಗೆ, ಮೀಸೆಗೀಸೆ ಎಲ್ಲ ಕವಿಮಯವಾಗಿತ್ತು ಅನ್ನಲು ಅಂಜಲಾರೆ. ರೂಪದಲ್ಲಿ ನಮ್ಮ ಸಿದ್ಧನು ಬದಲಾಗಲಿಲ್ಲ. ಬದಲಾಗುವ ರೂಪವೂ ಅಲ್ಲ. ಪೂರ್ವದಿಂದಲೂ ಅವನು ಸ್ವಲ್ಪ ಬಣ್ಣದಲ್ಲಿ ಕಪ್ಪು. ಆಕಾರದಲ್ಲಿ ಗಿಡ್ಡ. ಮುಖ ತುಸು ಮೈಗಿಂತ ದೊಡ್ಡದು. ಕಣ್ಣುಗಳು ಒಂದು ರೀತಿಯವು. ಅಂದವಿಲ್ಲವೆನ್ನಲೇ? ತುಂಬಿದ ಠೀವಿಯಿದೆ. ಕವಿಯೂ ಅವನೇ, ರಸಿಕನೂ ಅವನೇ. ಶ್ರೀಮಂತನು ಅವನೇ ಅನ್ನಿಸುವಂತಿತ್ತು. ಬಲು ದಿವಸಗಳ ಏಕೆ, ವರುಷಗಳ ನಂತರ ನನಗೆ ಅವನ ಭೇಟಿಯಾದ್ದರಿಂದ ಮೆಲ್ಲಮೆಲ್ಲಗೆ ಮಾತನಡಿಸತೊಡಗಿದೆ. ಏಕೋ ಸಲಿಗೆಯಿಂದ ಮಾತನಾಡಲು ಭಯವೆನಿಸಿತು. ನನ್ನ ಅಂತಸ್ತಿಗೂ ಅವನ ಅಂತಸ್ತಿಗೂ ಅಜಗಜಾಂತರವಾಗಿದೆ. ಆದರೂ ಕುತೂಹಲ. ಏನು ಮಾಡುತ್ತಿದ್ದಾನೆ? ಎಷ್ಟರ ತನಕ ಓದು ಮುಂದುವರಿಸಿದವ? ಎಂಬ ಎಲ್ಲ ವಿಚಾರ ತಿಳಿಯುವ ಉತ್ಕಟವಾದ ಆಸೆ.

"ಸಿದ್ಧಾ, ಅದಿರಲಿ ಊರು ಬಿಟ್ಟವನು...." ಎಂದೆ. ನಾನು ಸಿದ್ಧನೆಂದುದು ಅವನ ಮನಸ್ಸಿಗೆ ಒಪ್ಪಿದ ಹಾಗೆ ತೋರಲಿಲ್ಲ. ನಾನು ತಿದ್ದಿಕೊಂಡು "ಕವಿಕರ್ಮ, ನೀನು ನಮ್ಮ ಕುಗ್ರಾಮವನ್ನು ಬಿಟ್ಟು ಹೋದವನೆಲ್ಲಿಗೆ ಹೋದೆ? ವಿದ್ಯಾಭ್ಯಾಸ ಎಲ್ಲಿಯವರೆಗಾಯಿತು? ಈಗ ಎಲ್ಲಿರುವೆ? ಮಕ್ಕಳು....? ನನಗೆ ತಿಳಿದೇ ಇರಬಹುದು..... ಮದುವೆ ಗಿದುವೆಯಾಗಿಲ್ಲ. ಯಾವುದನ್ನು ನಂಬಿ ಮದುವೆಯಾಗುವುದು? ಅಂತು

ನನ್ನಿಂದಾದ ಸಾಹಿತ್ಯಸೇವೆ" "ಶ್ರೀಪತಿ ನಿನಗೆ ಭ್ರಮೆ! ಸಾಹಿತ್ಯಸೇವೆ! ಸಾಹಿತ್ಯ ದೇವಿಯಂತೆ! ರಾಣಿಯಂತೆ! ಈಶ್ವರಿಯಂತೆ! ಊರಲ್ಲಿರುವ ದೇವರೇ ಸಾಕಾಗಿ ಹೋಗಿವೆ. ಪೂಜಾವಿಧಾನಗಳು ತಲೆಬೇನೆ ಹಿಡಿಸಿವೆ...... ಸಾಲದುದಕ್ಕೆ ಈ ಸಾಹಿತ್ಯದೇವಿಯರ ಸೇವೆಗಳು".

"ನೀನೇ ಕವಿಯಾಗಿ....."

"ಏನು ಕವಿಯಾದವನು ಇತರರ ಸೇವೆ ಮಾಡಲು ಗುಲಾಮನೇ? ಕವಿಯ ಮನೆಯ ದಾಸಿ ಸಾಹಿತ್ಯದೇವಿ. ಅಂಥವಳೊಬ್ಬಳಿರುವುದು ಸಾಧ್ಯವಿದ್ದರೆ! ನಮ್ಮನ್ನು ಬಿಟ್ಟು ಇನ್ನೊಂದು ಸಾಹಿತ್ಯದ ಅವತಾರವೆಲ್ಲಿ? ಕವಿಯು ಇನ್ನೊಬ್ಬನ ಪೂಜೆಗೆ ಹೊರಡುವಷ್ಟು ಆತ್ಮಾಭಿಮಾನವಿಲ್ಲದವನೇ? ನಮ್ಮಲ್ಲೆ ಉಕ್ಕಿ ಹರಡುವ ವಸ್ತು ಕವಿತೆ! ನಮ್ಮದು ಭಾವನಾ ರಾಜ್ಯ! ಆ ರಾಜ್ಯದ ಕಸಗಳು ಈ ಲೋಕದ ದೇವದೇವಿಯರು. ನಾವು ನರಸೃಷ್ಟಿಯನ್ನೇ ಮಾಡುವವರು. ಕವಿಕರ್ಮ ಎಂದರೇನು? ಅದೇ ಭಾವ! ಪ್ರೌಢವಾದ ವಿಚಾರಗಳವು".

ನಿಜಕ್ಕೂ ಹಾಗಿದ್ದುವು. ನನಗೆ ತಿಳಿಯುವುದು ತುಸು ಮೆಲ್ಲಗಾಯಿತು. ಆದರೆ ಅವನು ಅದನ್ನು ವಿವರಿಸಿದನು, ಹೇಳಿದನು.... ಬಲು ಸಮಯ ಮಾತುಕತೆಗಳಲ್ಲಿ ಸಮಯ ಕಳೆಯಿತು.

ಶ್ರೀಪತಿ, ಪ್ರಪಂಚವೆಂದರೆ ನಾವು! ನಮ್ಮನ್ನು ಬಿಟ್ಟೆಲ್ಲಿಯ ಪ್ರಪಂಚ! ಏನೋ ಅಲ್ಪ ಸ್ವಲ್ಪ ಈ ತತ್ವವನ್ನು ತಿಳಿದವನೆಂದರೆ ಶಂಕರಾಚಾರಿ. ಅಹಂ-ಬ್ರಹ್ಮ ಎಂದನು! ಅಲ್ಲೂ ಬ್ರಹ್ಮವನ್ನು ಎಂಬ ಭೂತ ಅವನನ್ನು ಕಾಡಿದಂತೆ ಕಾಣುವುದು! ನಾನೇ ಅರಸು ಎಂದರೆ, ಅರಸನಿಗೊಂದು ದೊಡ್ಡ ಸ್ಥಾನವಿತ್ತಂತೆ. ಸೂಚನೆಯಾಗುವುದಿಲ್ಲವೇ? ನಾನೇ ಸರ್ವಸ್ವ. ನಾನೇ ನಾನು! ಮುಗಿಯಿತು."

ಅವನು ಹೇಳಿದುದನ್ನು ನಾನು ತಿಳಿಯಲು ಬಲು ಸಮಯ ಹೋಯಿತು. ಮನೆಗೆ ಬಂದ ಮಹಾಪುರಷನನ್ನು ಉಪಚರಿಸದೆ ಇದುವರೆಗೆ ಕುಳಿತುದಕ್ಕಾಗಿ ಬೇಸರವಾಯಿತು. ಓಡೋಡಿ 'ಕಾಫಿ, ತಿಂಡಿ" ಮಾಡಿಸಿ ತಂದೆ. ಏನೋ ಉದಾಸೀನನಾಗಿ ತಿನ್ನುತ್ತ, ಆದರೂ ತಿನ್ನುತ್ತ "ಶ್ರೀಪತಿ, ನಾವು ತಿನ್ನುವುದೇಕೆ! ಅದರಲ್ಲಿ ರುಚಿ, ರಸಗಳನ್ನು ಬಯಸುವುದೇಕೆ? ಎಲ್ಲ ಭ್ರಮೆ. ರಸಸೃಷ್ಟಿ ಮಾಡುವವರು ನಾವು. ಮನಸ್ಸು ಮಾಡಿದರೆ ಹೊಸ ಜಗತ್ತನ್ನೆ ಸೃಷ್ಟಿ ಮಾಡಬಲ್ಲೆವು. ಬೇವೇ-ಬೆಲ್ಲ; ಬೆಲ್ಲವೇ ಬೇವು" ಎಂದನು. "ಸರಿ! ಇರಲಿ, ಇನ್ನೊಮ್ಮೆ ನೋಡುವ ಅವಕಾಶವಾದರೆ ನೋಡುವ" ಎಂದು ಹೊರಡಲು ಎದ್ದನು. "ಇಲ್ಲಿಲ್ಲ! ನಮ್ಮ ಪೂರ್ವದ ಗೆಳೆತನವನ್ನು ಸ್ಮರಿಸಿಯಾದರೂ...." ಎಂದೆ. "ಶ್ರೀಪತಿ.... ಅದೇ ಮರುಳು ಗೆಳೆತನ.... ಪೂರ್ವ-ಪಶ್ಚಿಮ! ನಾವೇ ಪೂರ್ವ, ನಾವೇ ಪಶ್ಚಿಮ. ನಾವೇ ಎಲ್ಲ. ಇನ್ನು ಗೆಳೆತನವೆಂದರೇನು. ನಾವು ನಮ್ಮೊಡನೆ ಗೆಳೆತನ ಮಾಡುವುದೇ!" ಅಂತು, ನನ್ನ ಆಗ್ರಹದಿಂದ ಅವನು ಬರದಿರಲಾರನೆಂದು ನನ್ನ ನಂಬುಗೆ. ಅವನು ಬಂದರೆ ನನಗೆ ನಾನೇ ಚಿಕ್ಕದಾಗಿ ಕಾಣುವೆನು. ಅವನು ನುಡಿದಂತೆ ತಿಳಿದರೆ ಮಾತ್ರ ನಾನು ದೊಡ್ಡವನಾಗಬಹುದು.

* * *

ಬಹುಗುಣರು ಟೆಹರಿಯಲ್ಲಿ ಚರಕ ನೋಡಿದರು

ನಮ್ಮ ಸಂಬಾಷಣೆ ಸುಂದರಲಾಲ್‌ರ ತಾಯಿಯ ಕಡೆಗೆ ತಿರುಗಿತು. ಆಗ ಅವರು ಹಿಂದಿ ಭಾಷೆಯ ಒಂದು ಪತ್ರಿಕೆಯನ್ನು ನನ್ನ ಮುಂದೆ ಇಟ್ಟರು. ಅದರಲ್ಲಿ ಅವರು ತಮ್ಮ ತಾಯಿಯ ಬಗ್ಗೆ ಒಂದು ಲೇಖನವೊಂದನ್ನು ಬರೆದಿದ್ದರು. ಅದರ ಶೀರ್ಷಿಕೆ 'ಪರ್ವತಮ್ಮ ನನ್ನ ತಾಯಿ: ಒಂದು ಸ್ಮರಣೆ' ಎಂಬುದಾಗಿತ್ತು. ಆ ಲೇಖನವನ್ನು ಓದಿ ಅದರಲ್ಲಿಯ ಮುಖ್ಯ ಅಂಶಗಳನ್ನು ಸಂಕ್ಷೇಪವಾಗಿ ಇಂಗ್ಲಿಷಿನಲ್ಲಿ ನನಗೆ ತಿಳಿಸಿದರು. "ಎಂದಾದರೂ ಬೆಳಗಿನ ಜಾವ ನಾನು ತಾಯಿಗಿಂತ ಮೊದಲು ಎದ್ದಿದ್ದೇನೇ ಎಂಬುದು ನನಗೆ ನೆನಪಿಲ್ಲ" ಎಂದರು. ತಮಗೆ ಎಚ್ಚರವಾದಾಗ ತಮ್ಮ ತಂದೆ ಹುಕ್ಕಾ ಸೇದುತ್ತಾ ಇರುವುದನ್ನು ಮತ್ತು ತಾಯಿ ತನ್ನೆಲ್ಲ ಮಕ್ಕಳ ಕೈಕಾಲು ಮುಖ ತೊಳೆಯುವುದಕ್ಕಾಗಿ ಬಿಸಿ ನೀರಿನೊಂದಿಗೆ ನಿಂತಿರುವುದನ್ನು ನೋಡುತ್ತಿದ್ದುದಾಗಿ ಜ್ಞಾಪಿಸಿಕೊಂಡರು. ಮಕ್ಕಳನ್ನು ಎಬ್ಬಿಸುವ ಮೊದಲು ತಾಯಿ ಹಸುಗಳಿಗೆ ಮೇವು ಹಾಕಿ ನಂತರ ಸುಮಾರು ಕಾಲು ಮೈಲಿ ದೂರದ ಹಳ್ಳಿಯ ಒಂದು ಬಾವಿಯಿಂದ ಆಗಲೇ ನೀರು ತಂದಿರುತ್ತಿದ್ದಳು. ಮಕ್ಕಳೆಲ್ಲರೂ ಏಳುವ ಮೊದಲೇ ಅವಳು ಹಾಲು ಕರೆದು, ಕೊಟ್ಟಿಗೆ ಸ್ವಚ್ಛಮಾಡಿ ತಮ್ಮ ವಯಸ್ಸಾದ ತಂದೆಗೆ ಚಹಾ ಮಾಡಿ ಕೊಟ್ಟಿರುತ್ತಿದ್ದಳು. ನಂತರ ಸೂರ್ಯೋದಯದ ವೇಳೆಗೆ ಉಪಹಾರ ತಯಾರಿಸುತ್ತಿದ್ದಳು. ಮಕ್ಕಳಿಗೆ ತಿಂಡಿಕೊಟ್ಟ ನಂತರವೇ ಅವಳು ಉಪಹಾರ ತೆಗೆದುಕೊಳ್ಳುತ್ತಿದ್ದಳು. ತನ್ನ ತಾಯಿ ಪಾಲಿಶ್ ಇಲ್ಲದ ಕಾಳುಗಳಿಂದ ತಯಾರಾದ ಪದಾರ್ಥಗಳನ್ನು ಮತ್ತು ಮಜ್ಜಿಗೆ ಹಾಗೂ ಹಸಿರು ತರಕಾರಿಗಳಿಂದ ತಯಾರಿಸಿದ ಊಟವನ್ನೇ ಮಾಡುತ್ತಿದ್ದಳೆಂದು ಬಹುಗುಣ ಜ್ಞಾಪಿಸಿಕೊಂಡರು. ಬೇಯಿಸಿದ ಬೇಳೆ ಮತ್ತು ಅನ್ನದ ಮೇಲೆ ತನ್ನ ಹಕ್ಕು ಇಲ್ಲವೆಂದು ತಾಯಿ ಭಾವಿಸಿದ್ದರ ಪ್ರಭಾವ ತಮ್ಮ ಮೇಲಿದೆ ಎಂದು ಬಹುಗುಣ ಹೇಳಿದರು. ನಮಗೆ ಊಟ ಹಾಕಿದ ಮೇಲೆ ಅವಳು ಹೊಲಕ್ಕೆ ಹೋಗುತ್ತಿದ್ದಳು, ಇಲ್ಲವೇ ಕುಡುಗೋಲು ತೆಗೆದುಕೊಂಡು ಹುಲ್ಲು ಕುಯ್ಯುವುದಕ್ಕಾಗಿ ಕಾಡಿಗೆ ಹೋಗುತ್ತಿದ್ದಳು. ಹೊಲದಿಂದಾಗಲೀ, ಕಾಡಿನಿಂದಾಲೀ ಹಿಂದಿರುಗಿ ಬಂದಾಗ ಅವಳ ತಲೆಯ ಮೇಲೆ ಯಾವುದಾದರೂ ಹೊರೆಯಿಲ್ಲದೆ ಬರುತ್ತಿರಲಿಲ್ಲ. ಅಸಾಧಾರಣವಾದ ಕಷ್ಟದಲ್ಲೂ ಕೂಡ ತಾಯಿಯಲ್ಲಿದ್ದ ತಾಳ್ಮೆ ಮತ್ತು ಸಹನೆ ಸುಂದರಲಾಲರ ಸ್ಮರಣೆಯಲ್ಲಿ ಅಚ್ಚೊತ್ತಿದಂತಿವೆ. ನೀರಾವರಿಗೊಂಡ ಹೊಲಗಳು ಅವರ ವಾಸಸ್ಥಾನದಿಂದ ಒಂದು ಮೈಲಿ ದೂರ ಇದ್ದವು. ಆ ಹೊಲಗಳಿಗೆ ಗೊಬ್ಬರ ಸಾಗಿಸುವುದು ತಾಯಿಯ ಕೆಲಸದಲ್ಲಿ ಒಂದಾಗಿತ್ತು. ಇಡೀ ದಿನ ಹೊಲದಲ್ಲಿ ಕೆಲಸಮಾಡಿ ನಂತರ ತುಂಬ ಇಳಿಜಾರಾದ ದಾರಿಯನ್ನೇರಿ ತಲೆಯ ಮೇಲೆ ಭತ್ತದ ಹೊರೆ ಹೊತ್ತುಕೊಂಡು ಅವಳು ಮನೆಗೆ ಬಂದ ಕೂಡಲೇ ಮಕ್ಕಳೆಲ್ಲರೂ ಅವಳ ಬಳಿಗೆ ಓಡಿ ದಣಿದ ಅವಳ ಕಾಲುಗಳಗಳನ್ನು ಅಪ್ಪಿಕೊಳ್ಳುತ್ತಿದ್ದದ್ದನ್ನು ಬಹುಗುಣ ಜ್ಞಾಪಿಸಿಕೊಳ್ಳುತ್ತಾರೆ. ತಲೆಯ ಮೇಲಿನ ಭಾರವನ್ನು

ಕೆಳಗಿಟ್ಟು ದೊಡ್ಡ ನಿಟ್ಟುಸಿರು ಬಿಡುವಳು ನಂತರ ತನ್ನ ಮಕ್ಕಳನ್ನು ತನ್ನ ಮಡಿಲಿಗೆ ತೆಗೆದುಕೊಂಡು ಅವರನ್ನು ಮುದ್ದಾಡುವಳು. "ಆ ದಿನಗಳು ನನ್ನ ಜೀವನದ ಅತ್ಯಂತ ಪ್ರೀತಿಯ ನೆನಪುಗಳಾಗಿವೆ" ಎಂದು ಸುಂದರಲಾಲ್ ಅಂದರು. ಆದರೆ ಈ ಸಂತೋಷವು ಬಹಳ ಕಾಲ ಉಳಿಯುವಂತಿರಲಿಲ್ಲ. ಏಕೆಂದರೆ ಮಕ್ಕಳಿಗಾಗಿ ಹಾಗು ದನಕರುಗಳಿಗಾಗಿ ಅವಳು ಪುನಃ ನೀರು ತರಬೇಕಾಗಿತ್ತು. ಸಂಜೆಯಾದ ಕೂಡಲೇ ತಾಯಿ ಹಾಲು ಕರೆದು, ದೀಪಗಳನ್ನು ಹಚ್ಚಿ ಮಕ್ಕಳಿಗೆ ಪ್ರಾರ್ಥನೆಯನ್ನು ಹೇಳಿಕೊಡುತ್ತಿದ್ದಳು. ಊಟದ ಸರದಿಯಲ್ಲಿ ನಾವು ಮಕ್ಕಳೇ ಮೊದಲು ಇರುತ್ತಿದ್ದೆವು. ಊಟದಲ್ಲಿ ಮಾಡಲಾದ ಪಲ್ಲೆಯನ್ನು ಬಡಿಸಿದಾಗ ತಾಯಿಗೆ ಸ್ವಲ್ಪ ಪಲ್ಲೆ ಉಳಿಯುತ್ತಿತ್ತು. ಅಡಿಗೆಮನೆ ಮತ್ತು ಪಾತ್ರೆಗಳನ್ನು ತೊಳೆದಾದ ಮೇಲೆ ಲಾಟೀನು ಹಿಡಿದುಕೊಂಡು ಕೊಟ್ಟಿಗೆ ಮನೆಗೆ ಹೋಗುತ್ತಿದ್ದಳು. ಹಸುಗಳಿಗೆ ಮೇವು ಹಾಕಿ ಅವುಗಳನ್ನು ಕಟ್ಟಿ ಕೊಟ್ಟಿಗೆಮನೆಗೂ ಮತ್ತು ಮನೆಗೂ ಅಗಣಿಹಾಕಿ ವಿಶ್ರಮಿಸಿಕೊಳ್ಳಲು ಹೋಗುತ್ತಿದ್ದಳು. ಅವಳ ಈ ಕೆಲಸ ಮುಗಿಯುವ ಹೊತ್ತಿಗೆ ಬಹುಗುಣರ ಅಣ್ಣಂದಿರು ಮತ್ತು ಅಕ್ಕಂದಿರು ಗಾಢ ನಿದ್ರೆ ಮಾಡಿರುತ್ತಿದ್ದರು. ಬಹುಗುಣರು ಮಾತ್ರ ಎಚ್ಚರವಾಗಿಯೇ ಇರುತ್ತಿದ್ದರು. ತಾಯಿ ಹೊಲಗೆಲಸದಿಂದಲೂ ದನ ಕರುಗಳ ಮೇಲ್ವಿಚಾರಣೆಯಿಂದಲೂ ದಣಿದಿದ್ದರೂ ಕೂಡ ಸುಂದರಲಾಲರು ತಮ್ಮ ತಾಯಿಯ ಪ್ರೀತಿಗಾಗಿ ಕಾದಿರುತ್ತಿದ್ದರು. ತಾಯಿ ಮಲಗುವ ಮೊದಲು ತನಗೊಂದು ಕಥೆ ಹೇಳಬೇಕೆಂದು ಒತ್ತಾಯಿಸುತ್ತಿದ್ದರು. ಆಗ ಅವಳು ಕಥೆ ಹೇಳುತ್ತಿದ್ದಳು. ಕಥೆ ಹೇಳಿದ ನಂತರ ತಾಯಿ ದೀರ್ಘವಾದ ನಿಟ್ಟುಸಿರು ಬಿಡುವುದನ್ನು ಬಾಲಕ ಸುಂದರಲಾಲ್ ಕೇಳಿಸಿಕೊಳ್ಳುತ್ತಿದ್ದರು. ಕೆಲವೊಂದು ಸಲ ಅವಳು "ಹೇ ದೇವರೇ ನನಗೇಕೆ ಸಾವಿಲ್ಲ" ಎಂದು ಹೇಳುತ್ತಿದ್ದ ಮಾತುಗಳು ಬಹುಗುಣರ ನೆನಪಿನಲ್ಲಿ ಅಚ್ಚೊತ್ತಿವೆ. ತನ್ನ ಈ ನಿರಾಶೆಯ ಮಾತುಗಳಿಂದ ಬಾಲಕ ಸುಂದರಲಾಲ್ ಪ್ರಭಾವಿತನಾಗದಿರಲೆಂದು "ಹೇ ದೇವರೇ, ನನ್ನ ಮಗನಿಗೆ ಕೃಪೆ ತೋರು" ಎಂದು ಪ್ರಾರ್ಥಿಸುತ್ತಿದ್ದಳು.

ಬಹುಗುಣರ ತಾಯಿ ತುಂಬ ಧರ್ಮನಿಷ್ಠೆ. ಹುಣ್ಣಿಮೆಯ ದಿನ ಹೊಸ ಬಟ್ಟೆಯನ್ನು ಧರಿಸಿ ಚಿನ್ನದ ಮೂಗು ಬಟ್ಟು ಹಾಕಿಕೊಂಡು ಉಪವಾಸ ಆಚರಿಸುವಳು. ಒಂದು ಕಿಲೋ ಮೀಟರ್ ದೂರದ ಇಳಿಜಾರಿನಲ್ಲಿರುವ ಭಾಗೀರಥಿ ನದಿಗೆ ಮತ್ತು ಅಲ್ಲಿಯ ದೇವಸ್ಥಾನಕ್ಕೆ ಹೋಗುವಳು. ದೇವರಿಗೆ ಆರತಿಯಾಗುವಾಗ ಮಕ್ಕಳೆಲ್ಲರಿಗೆ ಪ್ರಸಾದ ರೂಪದಲ್ಲಿ ಸಿಹಿಯನ್ನು ಕೊಡಲಾಗುತ್ತಿತ್ತು. ಉಪವಾಸ ಇದ್ದಾಗಲೂ ಅವಳ ಕೆಲಸದಲ್ಲಿ ಯಾವುದೇ ರೀತಿ ಕಡಿಮೆಯೆಂದು ಇರುತ್ತಿರಲಿಲ್ಲ. ಅವಳು ಉಪವಾಸ ಮಾಡುತ್ತಿದ್ದ ದಿನಗಳಲ್ಲೂ ಕೂಡ ತನ್ನ ತಲೆಯ ಮೇಲೆ ಹುಲ್ಲು ಹೊತ್ತು ತರುವಳು. ಮನೆಯ ಮುಂದಿನ ತುಳಸಿ ಗಿಡಗಳಿಗೆ ದಿನವೂ ನೀರು ಹಾಕುತ್ತಿದ್ದಳು. ಸಾಯಂಕಾಲ ಹಣತೆ ಹಚ್ಚಿ ಅವುಗಳ ಬಳಿ ಇಡುವಳು. ನನ್ನ ತಂದೆ ಸತ್ತ ನಂತರವೂ ಅವಳ ಉಪವಾಸಗಳು ಕಡಿಮೆಯಾಗಲಿಲ್ಲ. ಬದಲಿಗೆ ತಿಂಗಳಲ್ಲಿ ಒಂದರಿಂದ ಎರಡು ದಿನಗಳ ವರೆಗೆ ಉಪವಾಸ ಹೆಚ್ಚಾಯಿತು. ಅಂದರೆ ಹುಣ್ಣಿಮೆಯಿಂದ ಏಕಾದಶಿ ವರೆಗೆ ಉಪವಾಸ ಇರುತ್ತಿತ್ತು ಎಂದು ಬಹುಗುಣ ಜ್ಞಾಪಿಸಿಕೊಳ್ಳುತ್ತಾರೆ. ಸುಂದರಲಾಲ್ ಕೇವಲ ಹದಿನೈದು ವರ್ಷದವರಿದ್ದಾಗ ತಾಯಿ ಅಂತಿಮವಾಗಿ ವಿದಾಯ ಹೇಳಿದ್ದರು. ಅದು ಜುಲೈ ತಿಂಗಳಲ್ಲಿಯ ಏಕಾದಶಿಯಾಗಿತ್ತು. ಆಗ ತಾನೆ ಮಳೆಗಾಲ ಪ್ರಾರಂಭವಾಗಿತ್ತು

ಮತ್ತು ನದಿಯಲ್ಲಿ ಪ್ರವಾಹ ಬಂದಿತ್ತು. ಸ್ನಾನ ಮಾಡುವುದಕ್ಕಾಗಿ ತಾಯಿ ನದಿಗೆ ಹೋಗಿದ್ದಳು. ಮುಂದೆ ಎಂದೆಂದೂ ನೋಡಲಾಗದಂತೆ; ಸುಂದರಲಾಲ್‌ರ ತಾಯಿಯ ಜೀವನ ತುಂಬ ಶ್ರಮ ನಿಷ್ಠವಾಗಿತ್ತು. ತನ್ನ ತಾಯಿಯ ನಿಷ್ಠೆ, ಅವಳು ಕೊಡುತ್ತಿದ್ದ ಆರೈಕೆ ಅಂತೆಯೇ ಪರ್ವತ ಶ್ರೇಣಿಯಲ್ಲಿಯ ಎಲ್ಲ ಹೆಣ್ಣು ಮಕ್ಕಳ ಶ್ರದ್ಧೆ ಮತ್ತು ಹಾರೈಕೆ ಸುಂದರಲಾಲ್‌ರ ಪ್ರೌಢ ಜೀವನದ ಕೇಂದ್ರ ವಸ್ತುವಾಗಿತ್ತು.

ಸುಂದರಲಾಲ್ ಶಾಲಾ ಬಾಲಕನಾಗಿದ್ದಾಗ ತಾಯಿ ಅವನ ಜತೆ ಇದ್ದಳು. ಸುಂದರಲಾಲ್ ಹಾಲು ಖರೀದಿಸಲು ಸಾಧ್ಯವಾಗುವಂತೆ ಅವನ ಜೇಬಿನಲ್ಲಿ ಸ್ವಲ್ಪ ಹಣವಾದರೂ ಇರುವಂತೆ ಗಮನಿಸುತ್ತಿದ್ದಳು. ಒಂದು ಸಲ ಸುಂದರಲಾಲ್ ತಮ್ಮ ಜೇಬಿನಲ್ಲಿಯ ಹಣದ ಕಾರಣದಿಂದ ತಮ್ಮ ಜೀವನದಲ್ಲಿಯೇ ಅತ್ಯಂತ ಪ್ರಭಾವ ಬೀರುವ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ೧೯೪೦ರಲ್ಲಿ ಸುಂದರಲಾಲ್ ಹದಿಮೂರು ವರ್ಷದವರಿದ್ದಾಗ ಓರ್ವ ವ್ಯಕ್ತಿಯ ಭೇಟಿಯಾಯಿತು. ಆ ವ್ಯಕ್ತಿಯನ್ನು ಸುಂದರಲಾಲ್ ಯಾವಾಗಲೂ ತನ್ನ ಗುರುವೆಂದು ಹೇಳುತ್ತಿದ್ದರು. ಈ ಹೊತ್ತಿಗೆ ಸ್ವಾತಂತ್ರ್ಯಕ್ಕಾಗಿ ಅಹಿಂಸಾತ್ಮಕ ಚಳುವಳಿ ಬಿರುಸಾಗುತ್ತಿತ್ತು. ಅವರು ಶಾಲಾ ಬಾಲಕನಾಗಿದ್ದುದರಿಂದ ಯಾವುದೇ ಪ್ರಮುಖ ಘಟನೆ ಅವರ ಜೀವನದಲ್ಲಿ ಸಂಭವಿಸಿರಲಿಲ್ಲ. ದೇಶದ ರಾಜಕೀಯ ಕ್ಷೇತ್ರದಲ್ಲಿಯ ತುಮಲ ಅವರನ್ನು ಸ್ಪರ್ಶಿಸಿರಲಿಲ್ಲ. ಶಾಲಾ ನಂತರ ಅವರು ತಮ್ಮ ಗೆಳೆಯರೊಂದಿಗೆ ಆಡುತ್ತಿದ್ದರು. ಆಗ ದೂರದಲ್ಲಿ ಓರ್ವ ಮನುಷ್ಯನನ್ನು ನೋಡಿದರು. ಅವನ ವೇಷ ಸಂಸ್ಥಾನದ ಅಧಿಕಾರಿಯಂತೆಯೂ ಇರಲಿಲ್ಲ ಮತ್ತು ಒಬ್ಬ ಸಾಮಾನ್ಯ ಕೂಲಿ ಕಾರ್ಮಿಕನಂತೆಯೂ ಇರಲಿಲ್ಲ. ಅವನು ಆ ಊರಿಗೆ ಹೊಸಬನಾಗಿದ್ದನು. ಅವನು ಚಪ್ಪಲಿಗಳನ್ನು ಹಾಕಿಕೊಂಡಿದ್ದ. ಧೋತರವನ್ನು ಉಟ್ಟುಕೊಂಡು ಗಾಂಧೀಟೊಪಿ ಧರಿಸಿದ್ದ. ಕೈಯಲ್ಲಿ ಒಂದು ಚೀಲವು ಇತ್ತು ಹಾಗೂ ವಿಚಿತ್ರ ಆಕಾರದ ಮರದ ಪೆಟ್ಟಿಗೆಯೂ ಇತ್ತು. ಅವನಿಂದ ಮೋಹಿತಗೊಂಡ ಅವರು ಅವನನ್ನು ಹಿಂಬಾಲಿಸಿದರು. ಆ ಮನುಷ್ಯ ಓರ್ವ ಜಾದೂಗಾರನಾಗಿರಬೇಕು ಹಾಗೂ ತಮಗೆ ಮನರಂಜನೆ ಮಾಡಬಹುದೆಂದು ಅವರು ಭಾವಿಸಿದ್ದರು. ಊರಿಗೆ ಬಂದಿದ್ದ ಹೊಸಬರು ಆ ರೀತಿ ಮಾಡಿದ್ದರು. ಆದರೆ ಮಕ್ಕಳ ಕುತೂಹಲವನ್ನು ಕೆರಳಿಸಿದ್ದು ಆ ಪೆಟ್ಟಿಗೆ! ಅಂತಿಮವಾಗಿ ಅವನು ಮರದ ನೆರಳಲ್ಲಿ ನಿಂತುಕೊಂಡ ಮತ್ತು ಮಕ್ಕಳೊಂದಿಗೆ ಮಾತನಾಡಲು ಸಿದ್ಧನಾದ. ಅವನು ತನ್ನ ವಿಶಿಷ್ಟವಾದ ಪೆಟ್ಟಿಗೆ ತೆರೆದು ಅದಲ್ಲಿಯ ಭಾಗಗಳನ್ನು ತೋರಿಸಿದ. ಅದೊಂದು ಎತ್ತಿಕೊಂಡು ಓಡಾಡಬಹುದಾದಂಥ ಚರಕವಾಗಿತ್ತು. ಹುಡುಗರು ನಿರಾಶರಾಗಿ ಒಬ್ಬರ ಮುಖ ಒಬ್ಬರು ನೋಡಿದರು. ಆಗ ಆ ಮನುಷ್ಯ ಆ ಪೆಟ್ಟಿಗೆಯ ಉಪಯೋಗವನ್ನು ಮಾಡಿ ತೋರಿಸಿದ. ಮಕ್ಕಳೆಲ್ಲರೂ ಆಕರ್ಷಿತರಾದರು. ಅವನು ತೊಟ್ಟಿರುವ ಧೋತರಕ್ಕೆ ಬೇಕಾಗುವಷ್ಟು ದಾರವನ್ನು ಮಾಡಲು ಎಷ್ಟು ದಿನ ಬೇಕಾಗುತ್ತದೆ ಎಂಬುದನ್ನು ಆ ಮಕ್ಕಳು ಕೇಳಿದರು. ಅದಕ್ಕೆ ಅವನು ತನಗೆ ಯಾವುದು ಖಚಿತವಾಗಿ ಗೊತ್ತಿದೆಯೋ ಅದನ್ನು ಮಾತ್ರ ಹೇಳಿದ. ಎಲ್ಲ ಹಳ್ಳಿಗಳೂ ತಮ್ಮದೇ ದಾರವನ್ನು ತಯಾರಿಸಿ ತಮ್ಮದೇ ಬಟ್ಟೆಯನ್ನು ಉತ್ಪಾದಿಸಿದಲ್ಲಿ ಭಾರತ ಸ್ವತಂತ್ರವಾಗುವುದೆಂದು ಮಕ್ಕಳಿಗೆ ಹೇಳಿದ.

(ಮುಂದುವರಿಯುವುದು...)

* * *

ದಿ. ಎಮ್.ಎಚ್. ಕೌಜಲಗಿಯವರ ಸ್ಮರಣೆ

ಎಂ.ಎಚ್.ಕೌಜಲಗಿಯವರು ಕಳೆದ ಸೆಪ್ಟಂಬರ್ ೨೭ರಂದು ತಮ್ಮ ೮೮ನೇ ವಯಸ್ಸಿನಲ್ಲಿ ನಿಧನರಾದರು. ಅವರ ಪೂರ್ಣ ಹೆಸರು ಮಧ್ವರಾವ್ ಹನುಮಂತರಾವ್ ಕೌಜಲಗಿ. ಇವರ ತಂದೆ ಕೌಜಲಗಿ ಹನುಮಂತರಾಯರು ಹಿರಿಯ ಖಾದಿ ಕಾರ್ಯಕರ್ತರು. ತಮ್ಮ ಇಡೀ ಜೀವನವನ್ನು ಖಾದಿ ಕೆಲಸಕ್ಕಾಗಿ ಅರ್ಪಿಸಿಕೊಂಡಿದ್ದರು. ಅವರ ಸುಪುತ್ರರಾದ ಎಂ.ಎಚ್.ಕೌಜಲಗಿಯವರ ಸಂಕ್ಷಿಪ್ತ ಜೀವನ ಪರಿಚಯ ಈ ರೀತಿ ಇದೆ. ಕೌಜಲಗಿಯವರು ಅಹಮದಾಬಾದ್‌ನಲ್ಲಿರುವ ಕಾಮರ್ಸ್ ಕಾಲೇಜಿನಲ್ಲಿ ಬಿ.ಕಾಂ. ಪದವಿ ಪಡೆದರು. ನಂತರ ೧೯೪೨ರ ಚಳುವಳಿಯಲ್ಲಿ ಅಥಣಿಯಲ್ಲಿ ಭಾಗವಹಿಸಿ ಪೋಲೀಸರಿಗೆ ಬೇಕಾಗಿದ್ದವರ ಪಟ್ಟಿಯಲ್ಲಿದ್ದು ಮುತಾಲಿಕ್ ದೇಸಾಯಿ ಅನ್ನುವ ಹೆಸರಿನಲ್ಲಿ ಒಂದು ವರ್ಷ ಭೂಗತರಾಗಿದ್ದು ಮುಂದೆ ಸಾಂಗ್ಲಿ, ಪುಣೆ ಮತ್ತು ಮುಂಬೈಯಲ್ಲಿ ಗ್ರಾಮೋದ್ಯೋಗ ಕೇಂದ್ರದ ಸಹಕಾರಿ ಬ್ಯಾಂಕಿನಲ್ಲಿ ಗುಮಾಸ್ತರಾಗಿ ಸೇವೆ. ಇದಕ್ಕೆ ಪ್ರೇರಣೆ ಧೂಲಿಯಾದ ಎಸ್.ಕೆ.ಕರಮರಕರ ಮತ್ತು ವೈಕುಂಠಲಾಲ್ ಮೆಹತಾ.

ನಂತರ ಬಿಜಾಪುರದಲ್ಲಿ ತಲೆದೋರಿದ್ದ ಕ್ಷಾಮದ ಪರಿಣಾಮ ಕ್ಷಾಮ ಪರಿಹಾರದ ಸೊಸೈಟಿಯಲ್ಲಿ ಅಕೌಂಟೆಂಟ್ ಆಗಿ ಸೇವೆ.

ನಂತರ ಬಂದೀಖಾನೆಯಿಂದ ಬಿಡುಗಡೆ ಹೊಂದಿದ್ದ ರಾಜಕಾರಣಿಗಳಲ್ಲದೆ ಇದ್ದು ಚಳುವಳಿಯಲ್ಲಿ ಭಾಗವಹಿಸಿದ್ದ ವ್ಯಕ್ತಿಗಳೊಂದಿಗೆ ಒಡನಾಟ, ಕ್ರಮೇಣ ಅವರೆಲ್ಲರನ್ನ ಒಳ್ಳೆಯ ಸಾಮಾಜಿಕ ಕಾರ್ಯಕರ್ತರನ್ನಾಗಿಸಿದ್ದು ನಡುವೆ ಸಿಕ್ಕ ಬಿಡುವಿನ ವೇಳೆಯಲ್ಲಿ ಮುಂಬೈನ ಕಸ್ತೂರ ಬಾ ಟ್ರಸ್ಟ್‌ನ ಗುಮಾಸ್ತ ಮತ್ತು ಕ್ಯಾಶಿಯರ್ ಆಗಿ ಸೇವೆ. ಇದೇ ಸಂದರ್ಭದಲ್ಲೆ ಸುಪ್ರಸಿದ್ಧ ಗಾಂಧೀ ಅನುಯಾಯಿಗಳಾಗಿದ್ದ ಟಕ್ಕರ್ ಬಾಪಾ, ವೈಕುಂಠಲಾಲ್ ಮೆಹತಾ, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ದಿನಕರ ದೇಸಾಯಿ, ಮೃದುಲಾ ಸಾರಾಭಾಯಿ, ಸುಚೇತಾ ಕೃಪಲಾನಿ, ಶಾಂತಿಕುಮಾರ್ ಮೊರಾರ್ಜಿ, ಸುಮತಿ ಮೊರಾರ್ಜಿ, ಅಣ್ಣಾ ಸಾಹೇಬ ಸಹಸ್ರಬುದ್ಧೆ, ಆಚಾರ್ಯ ವಿನೋಬಾ ಭಾವೆ ಇವರುಗಳ ನಡುವಿನ ಒಡನಾಟ.

ತಂದೆಯವರ ಮರಣ–ಆಘಾತ.

ಕಸ್ತೂರ ಬಾ ಟ್ರಸ್ಟ್ ವಾರ್ಧಾಕ್ಕೆ ವರ್ಗಾವಣೆ ಹೊಂದಿದುರಿಂದ ಮುಂಬೈಯಿಂದ ವಾರ್ಧಾಕ್ಕೆ ಪ್ರಯಾಣ. ಇಲ್ಲಿ ಮಹಾತ್ಮಾ ಗಾಂಧೀ ಅವರೊಂದಿಗೆ ನೇರ ಸಂಪರ್ಕ. ಅವರೊಂದಿಗೆ ಆಭಾ ಗಾಂಧೀ, ವಿನೋಬಾ ಭಾವೆ, ಮಹದೇವಿತಾಯಿ, ಜೆ.ಸಿ.ಕುಮಾರಪ್ಪ ಇವರೊಂದಿಗೆ ಮತ್ತು ಅನೇಕ ಖಾದಿ ಕಾರ್ಯಕರ್ತರೊಂದಿಗೆ ಖಾದಿಸೇವೆ. ಶ್ರೀ ದೇವದಾಸ್ ಗಾಂಧೀ, ಅಣ್ಣಾ ಸಾಹೇಬ್ ಧೋತೆ ಅವರ ಸಂಪರ್ಕ ಬಂದದ್ದೂ ಇದೇ ಸಮಯದಲ್ಲಿ.

ತಮ್ಮ ತಂದೆಯವರ ನಿಕಟವರ್ತಿಗಳಲ್ಲಿ ಒಬ್ಬರಾದ ಶ್ರೀ ಕರ್ವೆ ಅವರ ಸಲಹೆಯಂತೆ ಮತ್ತು ದಿನಕರ ದೇಸಾಯಿಯವರ ಅಣತಿಯಂತೆ ನ್ಯೂಯಾರ್ಕ್‌ನಲ್ಲಿ ಎರಡು ವರ್ಷಗಳ ಎಂ.ಬಿ.ಎ. ವ್ಯಾಸಂಗ ಪ್ರಯತ್ನ. ಇದೇ ಸಮಯದಲ್ಲಿ ದಿನಕರ ದೇಸಾಯಿಯವರ ನೇತೃತ್ವದಲ್ಲಿ ಹಳ್ಳಿಯೊಂದರಲ್ಲಿ ಸರ್ವೇಕ್ಷಣಾಕಾರ್ಯ.

ಆಗತಾನೆ ಎರಡನೇ ಪ್ರಪಂಚ ಯುದ್ಧದಿಂದ ಬಿಡುಗಡೆಯಾಗಿದ್ದು ತಾಯ್ನಾಡಿಗೆ ಹಿಂದಿರುಗುತ್ತಿದ್ದ ಸೈನಿಕರಿಗಾಗಿ ನ್ಯೂಯಾರ್ಕ್ ಯೂನಿವರ್ಸಿಟಿ ಅವಕಾಶ ಮಾಡಿಕೊಡಬೇಕಾಗಿದ್ದರಿಂದ, ನ್ಯೂಯಾರ್ಕ್ ಪ್ರಯಾಣ ಎರಡು ವರ್ಷಗಳು

ಮುಂದೂಡಲ್ಪಟ್ಟಿತ್ತು.

ಚಿಕ್ಕಪ್ಪಂದಿರಾದ ಶ್ರೀ ಟಿ.ಎಸ್.ಕೌಜಲಗಿ ಅವರ ಆಣತಿಯಂತೆ ತಾನು ಕೆಲಸಕ್ಕೆ ಸೇರಬೇಕೆಂಬ ತೀರ್ಮಾನ. ಸಂದರ್ಭವನ್ನರಿತ ಶ್ರೀ ವೈಕುಂಠಲಾಲ್ ಮೆಹತಾ ಅವರಿಂದ ಕರ್ನಾಟಕ ಖಾದಿ ಗ್ರಾಮೋದ್ಯೋಗ ಇಲಾಖೆಯಲ್ಲಿ ಸಹಾಯಕ ಆರ್ಗನೈಸರ್ ಆಗಿ ನೇಮಕ. ಅಂದೇ ಸರ್ಕಾರಿ ಆದೇಶ.

ಇದರಿಂದಾಗಿ ಧಾರವಾಡಕ್ಕೆ ಆಗಮನ. ಮಾನ್ಯ ಶ್ರೀ ಹುಕ್ಕೇರಿಕರ್ ಅವರ ಮಾರ್ಗದರ್ಶನದಿಂದ ಪ್ರತ್ಯೇಕ ಕಛೇರಿ ಪ್ರಾರಂಭ.

೧೯೪೭ ಆಗಸ್ಟ್ ೧೫ ರಿಂದ ಅಂದು ಕೇಂದ್ರ ಸಚಿವರಾಗಿದ್ದ ಶ್ರೀ ಆರ್. ಆರ್.ದಿವಾಕರ್ ಅವರ ಅಪೇಕ್ಷೆಯಂತೆ ಸಂಯುಕ್ತ ಕರ್ನಾಟಕ ಪತ್ರಿಕಾ ಬಳಗಕ್ಕೆ ಸೇರ್ಪಡೆ. ೧೯೫೮-೫೯ರಲ್ಲಿ ಸಂಯುಕ್ತ ಕರ್ನಾಟಕದ ಬೆಂಗಳೂರು ಆವೃತ್ತಿಯನ್ನು ಪ್ರಾರಂಭಿಸಲು ಬೆಂಗಳೂರಿಗೆ ಆಗಮನ.

೧೯೫೬ ರಲ್ಲಿ ಸಂಯುಕ್ತ ಕರ್ನಾಟಕದಿಂದ ಹೊರಬರಬೇಕಾದ ಅನಿವಾರ್ಯತೆ. ಖಾದಿ ಕಮೀಶನ್‌ನ ಚೀಫ್ ಆಗಿ ಸೇವೆ. ಇದೇ ಸಮಯದಲ್ಲಿ ಆರ್.ಆರ್.ದಿವಾಕರ್ ಅವರ ಅಪೇಕ್ಷೆಯಂತೆ ಸಂಯುಕ್ತ ಕರ್ನಾಟಕಕ್ಕೆ ಮರು ಆಹ್ವಾನ.

ಆದರೂ ೧೯೬೧ರಲ್ಲಿ ಸಂಯುಕ್ತ ಕರ್ನಾಟಕ ಬಿಡಲೇಬೇಕಾಗಿ ಬಂದದ್ದು ಅಲ್ಲಿಂದಾಚೆ ಒಂದು ವರ್ಷ ಬಾಗಲಕೋಟೆಯಲ್ಲಿ ಅಜ್ಞಾತನಾಗಿದ್ದು, ಕೊನೆಗೆ ಮಕ್ಕಳು ಮತ್ತು ಮಹಿಳೆಯರಿಗಾಗಿ ಒಂದು ಪತ್ರಿಕೆಯನ್ನು ಪ್ರಾರಂಭಿಸಲು ಯೋಚಿಸಿ ಅದಕ್ಕಾಗಿ ಮುದ್ರಣಾಲಯವೊಂದನ್ನು ಪ್ರಾರಂಭಿಸಲು ಹಣ ಸಂಗ್ರಹಣೆ.

ಡಾ॥ ಎನ್.ಎಸ್.ಹರ್ಡೀಕರ್, ಶ್ರೀ ಶಂಕರರಾವ್ ಕಿರ್ಲೋಸ್ಕರ್ ಮತ್ತು ಶ್ರೀ ಹುಕ್ಕೇರಿಕರ್ ಅವರ ನೆರವಿನಿಂದ ಬೃಂದಾವನ ಪ್ರಿಂಟರ್ಸ್ ಆರಂಭ. (೧೯೬೨ ರಿಂದ ೧೯೯೮ರ ವರೆಗೆ)

ಬೃಂದಾವನ ಪ್ರಿಂಟರ್ಸ್‌ನ ಅಭಿವೃದ್ಧಿ. ೩೬ ವರ್ಷಗಳಲ್ಲಿ ಒಂದು ಜನಪ್ರಿಯ, ಅತ್ಯುತ್ತಮ, ಆದರ್ಶ ಪ್ರಿಂಟರ್ಸ್ ಅನ್ನು ಬೆಂಗಳೂರಿಗೆ ಕೊಟ್ಟ ಧನ್ಯತೆ.

೧೯೯೮ನೇ ವರ್ಷದ ಕೊನೆ ಕೊನೆಯ ದಿನಗಳಲ್ಲಿ ಅನೇಕ ಕೌಟುಂಬಿಕ ಸಮಸ್ಯೆಗಳಿಂದ ಬೃಂದಾವನ ಪ್ರಿಂಟರ್ಸ್ ಅನ್ನು ಮಾರಬೇಕಾದ ಅನಿವಾರ್ಯತೆ ತನ್ನ ಕುಟುಂಬ ವರ್ಗದವರನ್ನು ಒಳಗೊಂಡಂತೆ ಯಾರಿಗೂ ಅನಾನುಕೂಲವಾಗದಂತೆ ಎಲ್ಲಾ ಸಮಸ್ಯೆಗಳ ಪರಿಹಾರ.

ಈ ಎಲ್ಲದರೊಂದಿಗೆ, ಕರ್ನಾಟಕ ಹೆಲ್ತ್ ಇನ್‌ಸ್ಟಿಟ್ಯೂಟ್‌ನಲ್ಲಿ, ಕರ್ನಾಟಕ ವಿಭಾಗದ ಲೋಕಮಾನ್ಯ ತಿಲಕ್ ಟ್ರಸ್ಟ್‌ನ ಕಾರ್ಯದರ್ಶಿಯಾಗಿ ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿ, ಕಳೆದ ೫೨ ವರ್ಷಗಳಿಂದಲೂ ಅಖಿಲ ಭಾರತ ಮಾಧ್ವ ಮಹಾ ಮಂಡಲದ ಸದಸ್ಯರಾಗಿ ನಿರಂತರ ಸೇವೆ.

ಸ್ಕ್ರೀನ್ ಪ್ರಿಂಟಿಂಗ್ ಅನ್ನು ಮೊಟ್ಟ ಮೊದಲಬಾರಿಗೆ ಬೆಂಗಳೂರಿಗೆ ಪರಿಚಯ ಮಾಡಿಕೊಟ್ಟ ಹಿರಿಮೆ ಕೌಜಲಗಿ ಅವರದು.

ಘಟಪ್ರಭಾದಲ್ಲಿ ಡಾ॥ನಾ.ಸು.ಹರ್ಡೀಕರ್‌ರವರು ಸ್ಥಾಪಿಸಿದ ಆರೋಗ್ಯ ಧಾಮದ ಟ್ರಸ್ಟಿ, ಬಾಗಲಕೋಟೆಯಲ್ಲಿನ ಸೇವಾದಲದ ಟ್ರಸ್ಟಿ, ಗಾಂಧೀ ಸ್ಮಾರಕ ನಿಧಿ ಸಂಸ್ಥೆಯಲ್ಲಿಯೂ ಪ್ರಮುಖ ಪಾತ್ರ ವಹಿಸಿ ತೊಡಗಿಸಿಕೊಂಡ ಧನ್ಯ ಜೀವಿ ಶ್ರೀ ಎಂ.ಎಚ್.ಕೌಜಲಗಿ ಅವರು.

– *ಸಂಗ್ರಹ, ಕೆ.ಆರ್.ಮೋಹನ್, ಮೈಸೂರು*

* * *

ಗ್ರಾಮೀಣ ಜೀವನ ಮುಗಿದ ಅಧ್ಯಾಯವೇ ?

– ಡಾ.ಚಂದ್ರಶೇಖರ ಹರಿಹರನ್

ಪ್ರಾಚೀನ ಕಾಲದಲ್ಲಿ ಜನರು ಕಾಡಿನೊಳಗೆ ಪ್ರವೇಶಿಸಿದ ನಂತರ ಅವರು ದೇವರ ಶಕ್ತಿಯನ್ನು ಕಾಣುವ ನಿರೀಕ್ಷೆಯಲ್ಲಿ ಇರುತ್ತಿದ್ದರು. ಆದರೆ ಇಂದು ನಾವು ಕಾಡು ಪ್ರವೇಶಿಸಿದಾಗ ಇದರಿಂದ ಏನು ಗಳಿಸಬಹುದು ಎಂದೇ ಚಿಂತಿಸುತ್ತೇವೆ.

'ಜಗತ್ತು ನಗರದತ್ತ ತೆರಳುತ್ತಿದೆ' ಹೀಗೆಂದು ೨೦೦೮ರ ಮೇನಲ್ಲಿ ಸಂಪಾದಕರೊಬ್ಬರು ವರದಿಯೊಂದಕ್ಕೆ ಶೀರ್ಷಿಕೆ ನೀಡಿದ್ದರು. ನಗರದಲ್ಲಿ ವಾಸಿಸುತ್ತಿರುವ ಜನರು ಗ್ರಾಮೀಣ ಭಾಗದ ಜನಸಂಖ್ಯೆಯನ್ನು ಮೀರಿ ಬೆಳೆದು ನಿಂತಾಗ ಇದಕ್ಕಿಂತ ಉತ್ತಮ ಶೀರ್ಷಿಕೆ ಕೊಡುವುದಾದರೂ ಹೇಗೆ?

ಕ್ರಿ.ಶ. ೧೮೦೦ರಲ್ಲಿ ಅಂದರೆ ಉಗಿ ಎಂಜಿನ್ ಮೊದಲ ಬಾರಿಗೆ ಸದ್ದು ಮಾಡಿದ್ದೇ ಇಂದಿನ ನಗರದ ಆದಿ ಎನ್ನಬೇಕು. ಇದಾಗಿ ಕೇವಲ ೨೦೦ ವರ್ಷಗಳಲ್ಲಿ ನಗರದ ಜನಸಂಖ್ಯೆ ಗ್ರಾಮೀಣ ಭಾಗ ಮೀರಿ ನಡೆದಿದೆ. ಈ ಐತಿಹಾಸಿಕ ಘಟನೆ ನಡೆದ ಕಾರಣಕ್ಕೆ ೨೦೦೮ರ ಮೇ ತಿಂಗಳಿಗೆ ಭಾರಿ ಮಹತ್ವ ಇದೆ. ಅಷ್ಟು ಸುಲಭವಾಗಿ ಅದನ್ನು ಮರೆಯುವುದಕ್ಕೆ ಸಾಧ್ಯವೇ ಇಲ್ಲ. ಜಗತ್ತಿನ ಜನಸಂಖ್ಯಾ ಪ್ರಮಾಣ ಪ್ರಥಮ ಬಾರಿಗೆ ಸ್ಥಾನಪಲ್ಲಟಗೊಂಡ ವಿದ್ಯಮಾನ ಅಂದು ನಡೆದಿತ್ತು. ಆದರೆ ಅದು ಯಾರ ಗಮನಕ್ಕೂ ಬಾರದೆ ಕಳೆದು ಹೋಗಿದೆ. ಕೇವಲ ಎರಡು ವರ್ಷಗಳಲ್ಲಿ ಅದನ್ನು ನಾವೆಲ್ಲ ಮರೆತೇಬಿಟ್ಟಿದ್ದೇವೆ.

ಅಭಿವೃದ್ಧಿಯ ಅಸಮತೋಲನ ಅದೆಂತಹ ಪರಿಯದ್ದು ಎಂದರೆ, ಒಟ್ಟಾರೆ ಭೂ ಪ್ರದೇಶದ ಶೇ ೨ಕ್ಕಿಂತ ಕಡಿಮೆ ಭಾಗ ಹೊಂದಿರುವ ನಗರ ಪ್ರದೇಶವೇ ಒಟ್ಟು ದೇಶೀಯ ಉತ್ಪಾದನೆಯಲ್ಲಿ (ಜಿಡಿಪಿ) ಶೇ ೬೨ರಷ್ಟು ಪಾಲು ನೀಡುತ್ತಿದೆ. ನಗರಗಳಲ್ಲಿ ವಾಸಿಸುತ್ತಿರುವವರು ಉಳಿದ ಶೇ ೯೮ರಷ್ಟು ವಿಶಾಲ ಭೂಪ್ರದೇಶದಲ್ಲಿರುವ ನೈಸರ್ಗಿಕ ಸಂಪನ್ಮೂಲಗಳು ಮತ್ತು ಸೂಕ್ಷ್ಮ ಪರಿಸರ ಸಂಪತ್ತಿನಲ್ಲಿ ಶೇ ೭೫ರಷ್ಟು ಪಾಲನ್ನು ಅನುಭೋಗಿಸುತ್ತಿದ್ದಾರೆ.

ಈಗಾಗಲೇ ಏನು ನಡೆದಿದೆ ಎಂಬುದನ್ನು ತಿಳಿದುಕೊಳ್ಳುವುದು ಕಷ್ಟವೇನಲ್ಲ. ಹಳ್ಳಿ ಎಂಬುದು ನಮ್ಮ ಕಲ್ಪನಾ ವಿಲಾಸದ ಭಾಗವಾಗಿಬಿಟ್ಟಿದೆ. 'ಗ್ರಾಮೀಣ' ಎಂಬ ಪದ ಭವಿಷ್ಯದಲ್ಲಿ ಕೇವಲ ಮಾತಿನಲ್ಲಷ್ಟೇ ಇರಲಿದೆ. ಆಹಾರ ಮತ್ತು ಸಾಗುವಳಿ ವಿಚಾರಕ್ಕೆ ಬಂದರೆ ಹಳ್ಳಿಯ ಹಾದಿ ಕೊನೆಯಾಗುತ್ತ ಬಂದಿದೆ.

ಗ್ರಾಮವು ಭಾರತದ ಅಭಿವೃದ್ಧಿಯ ಯಂತ್ರವಾಗಲು ಎಂದಿಗೂ ಸಾಧ್ಯವಿಲ್ಲ. 'ಭಾರತದ ಹೃದಯ ಅದರ ಹಳ್ಳಿಯಲ್ಲಿದೆ' ಎಂಬ ಮಹಾತ್ಮಾ ಗಾಂಧಿ ಅವರ ಚಿಂತನೆ ಸಂಪೂರ್ಣ ಸುಳ್ಳು ಎಂಬುದು ಸಾಬೀತಾಗಿದೆ. ಗಾಂಧೀಜಿ ಅವರು ಈ ಮಾತು ಆಡಿದ ಸಮಯದಲ್ಲಿ ಅದೊಂದು ಆದರ್ಶ ಮಾತ್ರವಾಗಿರಲಿಲ್ಲ, ಹಳ್ಳಿಯತ್ತ ಮುಖ

ಮಾಡುವುದು ಸಾಧ್ಯವೂ ಇತ್ತು. ಇಂದು ಮತ್ತೆ ಹಳ್ಳಿಯತ್ತ ತೆರಳುವುದು ಎಂದರೆ ಉದ್ಧಟತನದ ಪರಮಾವಧಿ ಎನ್ನುವ ಸ್ಥಿತಿ ನೆಲೆಸಿದೆ.

ಈಚೆಗೆ ಬೆಂಗಳೂರಿನ ಪತ್ರಿಕೆಯೊಂದು ರಿಯಲ್ ಎಸ್ಟೇಟ್ ಉದ್ಯಮ ಯಾವ ರೀತಿಯಲ್ಲಿ ಬೆಳೆಯುತ್ತಿದೆ ಎಂಬ ಬಗ್ಗೆ ವರದಿಯೊಂದನ್ನು ಪ್ರಕಟಿಸಿತ್ತು. ನಿಮಗೆ ಒಂದು ಸುಂದರ ಬೆಟ್ಟ ಕಣ್ಣಿಗೆ ಬಿದ್ದಿದೆ ಎಂದಿಟ್ಟುಕೊಳ್ಳಿ. ಇಂದು ಅದರ ಸೌಂದರ್ಯ ಸವಿದು ಮನಸ್ಸನ್ನು ಸಂತೋಷ ಮಾಡಿಕೊಳ್ಳುವ ವ್ಯವಧಾನ ಯಾರಿಗೂ ಇಲ್ಲ, ಸಾವಿರಾರು ವರ್ಷಗಳಿಂದ ಜನರು ಖರೀದಿಸದೆ, ಹಾಳು ಮಾಡದೆ ಕೇವಲ ನೋಡುತ್ತ ಬಂದ ಈ ಪರ್ವತವನ್ನು ಎಷ್ಟು ದುಡ್ಡಿಗೆ ಖರೀದಿಸಬಹುದು ಮತ್ತು ನೆಲವನ್ನು ಹೇಗೆ ಹಾಳು ಮಾಡಬಹುದು ಎಂಬ ಚಿಂತನೆಯೇ ಮೂಡುತ್ತದೆ.

ಪ್ರಕೃತಿಯು ಮನುಷ್ಯರಿಗೆ ನೀಡಿದ ಈ ಮಹಾನ್ ಕೊಡುಗೆಯನ್ನು ಗೌರವಿಸಿ ಉಳಿಸುವ ಪರಿಪಾಠ ಮರೆತೇ ಹೋಗಿದೆ. ಪರಿಸರ ಪ್ರಜ್ಞೆ ಎಂಬ ಪದ ಅಸ್ತಿತ್ವದಲ್ಲೇ ಇರದಿದ್ದ ೧೫೦ ವರ್ಷಗಳ ಹಿಂದೆ ಲೇಖಕರೊಬ್ಬರು ಆತಂಕದಿಂದಲೇ ಹೇಳಿದ್ದರು, ಭೂಮಿಯು ಮನುಷ್ಯನ ಅನುಭವದ ಹಕ್ಕಿಗಾಗಿ ಮಾತ್ರವೇ ಈ ಸಂಪತ್ತನ್ನು ನೀಡಿಲ್ಲ, ಮನುಷ್ಯನೊಬ್ಬನೇ ಇದನ್ನು ಅನುಭವಿಸಲೂ ಬಾರದು, ಮೇಲಾಗಿ ಇಲ್ಲಿನ ಸಂಪತ್ತನ್ನು ಸ್ವೇಚ್ಛಾಚಾರದಿಂದ ವ್ಯರ್ಥ ಮಾಡಲೇಬಾರದು ಎಂದು ಆಗಲೇ ಅವರು ಎಚ್ಚರಿಸಿದ್ದರು.

ನಗರಗಳು ಬೆಳವಣಿಗೆ ಹೊಂದುತ್ತಿರುವ ರೀತಿಯನ್ನು ನಾವು ಬದಲಿಸದೆ ಇದ್ದರೆ ಹಾಗೂ ಗ್ರಾಮೀಣ ಪ್ರದೇಶಗಳನ್ನು ಏಕಮುಖವಾಗಿ ಭಾರಿ ಪ್ರಮಾಣದಲ್ಲಿ ಶೋಷಿಸುತ್ತಿರುವುದನ್ನು ನಿಲ್ಲಿಸದೆ ಇದ್ದರೆ ನಾವು, ನೀವೆಲ್ಲ ಜೀವಿಸುತ್ತಿರುವ 'ನಗರ ಪ್ರಧಾನ ಭಾರತ'ದ ಅವಸಾನದ ಎಚ್ಚರಿಕೆ ಗಂಟೆ ಮೊಳಗಿತೆಂದೇ ಅರ್ಥ.

೧೯೪೬ರಲ್ಲಿ ಗಾಂಧೀಜಿ ಅವರು ದೂರದೃಷ್ಟಿಯುಳ್ಳ ಒಂದು ಮಾತನ್ನು ಆಡಿದ್ದರು. 'ನಮ್ಮ ಹಳ್ಳಿಗಳ ರಕ್ತವೆಂಬ ಸಿಮೆಂಟ್‌ನಿಂದ ನಮ್ಮ ನಗರಗಳನ್ನು ಕಟ್ಟಲಾಗುತ್ತಿದೆ' ಎಂಬ ಅವರ ಮಾತಿನಲ್ಲಿ ನಗರಗಳ ಅಪಧಮನಿಗಳಲ್ಲಿ ಸಂಚರಿಸುವ ರಕ್ತ ಮತ್ತೆ ರಕ್ತ ನಾಳಗಳಾದ ಹಳ್ಳಿಗಳತ್ತ ಹರಿಯಬೇಕು ಎಂಬ ಆಶಯ ಅಡಗಿತ್ತು.

ಆದರೆ, ನಾವಿಂದು ಕಾಣುತ್ತಿರುವುದಾದ 'ರೂ ಏನು? ಗಾಂಧೀಜಿ ಕಂಡಿದ್ದ ಕನಸಿಗೆ ತೀರಾ ವಿರುದ್ಧ ಚಿತ್ರಣಗಳೇ ಕಣ್ಣಿಗೆ ಕಟ್ಟುತ್ತಿವೆ. ಕೊಳ್ಳುಬಾಕ ಸಂಸ್ಕೃತಿ ಮೈಗೂಡಿಸಿಕೊಂಡಿರುವ ನಗರವು ಪರಿಸರ ನಾಶಪಡಿಸುವ ಪ್ರಮುಖ ತಾಣವಾಗಿ ಬದಲಾಗಿದೆ. ಕೆಟ್ಟ ಸುದ್ದಿ ಏನೆಂದರೆ ಈ ಪರಿಸರ ನಾಶದ ಹೊರೆ ಹೆಚ್ಚಾಗಿ ಬೀಳುತ್ತಿರುವುದು ಗ್ರಾಮೀಣ ಭಾಗದ ಮೇಲೆಯೇ.

ನಗರೀಕರಣಕ್ಕೆ ನಾವು ಒಗ್ಗಿಕೊಂಡಂತೆ ನಮ್ಮ ಮನೋಭಾವವೂ ಬದಲಾಗಿದೆ. ರಾಸಾಯನಿಕ ರಸಗೊಬ್ಬರಗಳು ಮತ್ತು ಕೀಟನಾಶಕಗಳ ಅತಿಯಾದ ಬಳಕೆಯೇ ಇದಕ್ಕೆ ನಿದರ್ಶನ. ಮಣ್ಣು ನಮ್ಮ ದೇಶದ ಏಕೈಕ ಆಸ್ತಿ. ಕಳೆದ ೫೦ ವರ್ಷಗಳಿಂದೀಚೆಗೆ ನಾವು ಶೀಘ್ರ ಫಲಕ್ಕಾಗಿ ಮಣ್ಣಿನ ಫಲವತ್ತತೆ ಮಾರಾಟಕ್ಕೆ ಇಟ್ಟಿದ್ದೇವೆ.

ಇದು ನಮ್ಮ ನಾಗರಿಕತೆಯನ್ನು ನಿಧಾನವಾಗಿ ವಿನಾಶದತ್ತ ಚಲಿಸುವಂತೆ

ಮಾಡಲಿದೆ. ಮಣ್ಣನ್ನು ಫಲವತ್ತುಗೊಳಿಸುವ ಸಾವಯವ ಗೊಬ್ಬರವನ್ನು ನಾವು ಹೇಗೆ ಬಳಸುತ್ತಿದ್ದೇವೆ? ಪರಿಣಾಮಕಾರಿ ನೀರಿನ ವಿತರಣೆ ಮತ್ತು ತ್ಯಾಜ್ಯ ವಿಲೇವಾರಿಯೊಂದಿಗೆ ಗ್ರಾಮೀಣ ಭಾಗದ ಸ್ವಚ್ಛತೆಯನ್ನು ಹೇಗೆ ಸುಧಾರಿಸುತ್ತಿದ್ದೇವೆ? ದೇಶದ ವಾಣಿಜ್ಯ ವಹಿವಾಟಿನಲ್ಲಿ ಪ್ರಮುಖ ಪಾತ್ರ ವಹಿಸಬಹುದಾದ ನಮ್ಮ ಕರಕುಶಲ ಮತ್ತು ಕೌಶಲ್ಯ ಕಸುಬುದಾರಿಕೆಗೆ ನಾವು ಎಂತಹ ಉತ್ತೇಜನ ನೀಡುತ್ತಿದ್ದೇವೆ?

ನಗರ ಭಾಗದ ಜನಸಂಖ್ಯೆ ಗ್ರಾಮೀಣ ಭಾಗವನ್ನು ಮೀರಿ ಮುನ್ನಡೆದಿದೆ ಎಂದರೆ, ಭವಿಷ್ಯದಲ್ಲಿ 'ಗ್ರಾಮೀಣ ಅಭಿವೃದ್ಧಿ' ಎಂದು ಕರೆಯಬಹುದಾದ ವಿಚಾರವೇ ಇರುವುದಿಲ್ಲ. ಯಾವುದೇ ಬಗೆಯ ಅಭಿವೃದ್ಧಿ ಎಂದರೆ ಅದಕ್ಕೆ ನಗರೀಕರಣ ಎಂದೇ ಅರ್ಥ ಬಂದುಬಿಡುತ್ತದೆ.

ಕಳೆದ ಶತಮಾನದ ನಮ್ಮ ಅತ್ಯುತ್ತಮ ಚಿಂತಕರ ದೂರದೃಷ್ಟಿಯ ಮೇಲೆ ದೃಷ್ಟಿ ಹಾಯಿಸಿದಾಗ ಅವರ ಆಶಯಗಳೆಲ್ಲ ಗತಿಸಿ ಹೋದಂತೆ ಕಾಣುತ್ತದೆ. ಅಂತಹ ಒಬ್ಬ ಚಿಂತಕರು 'ಕೃಷಿಯಲ್ಲಿ ಮಾತ್ರ ಶಾಶ್ವತ ಆರ್ಥಿಕತೆ ಸ್ಥಾಪಿಸಬಹುದು' ಎಂದು ಹೇಳಿದ್ದರು. ಜನರ ಜೀವ ಮತ್ತು ಜೀವನಾಧಾರವನ್ನು ಬೇಟೆಯಾಡದೆ ಕೈಗಾರಿಕೀಕರಣ ಅಸಾಧ್ಯ ಎಂದೂ ಅವರು ಭವಿಷ್ಯ ನುಡಿದಿದ್ದರು.

ಆ ಚಿಂತಕರೆಲ್ಲ ಕೃಷಿ ಎಂಬುದು ಮಹಾನ್ ಉದ್ಯೋಗ ಎಂದೇ ಭಾವಿಸಿದ್ದರು. ಇಲ್ಲಿ ಮನುಷ್ಯ ನಿಸರ್ಗ ಮತ್ತು ತನ್ನ ಪರಿಸರವನ್ನು ನಿಯಂತ್ರಿಸಲು ಪ್ರಯತ್ನಿಸಿ ಅತ್ಯುತ್ತಮವಾದ ಫಲಿತಾಂಶ ಕಂಡುಕೊಳ್ಳುತ್ತಾನೆ ಎಂಬುದನ್ನು ಚಿಂತಕರು ಕಂಡಿದ್ದರು.

ಮಹಾನ್ ಕವಿ ವಿಲಿಯಂ ವರ್ಡ್ಸ್‌ವರ್ಥ್ ತಮ್ಮ ೮೦ ವರ್ಷಗಳ ಜೀವಿತಾವಧಿಯಲ್ಲಿ ೧,೭೫,೦೦೦ ಮೈಲು ನಡೆದಿದ್ದರು ಮತ್ತು 'ನಿಸರ್ಗದಲ್ಲಿ ನಡೆಯುವುದು ಹೇಗೆ' ಎಂಬುದನ್ನು ತಮ್ಮ ಓದುಗರಿಗೆ ತಿಳಿಹೇಳಿದ್ದರು. ನಗರಗಳು ಮತ್ತು ಕಾರ್ಖಾನೆಗಳು ನಿಸರ್ಗಕ್ಕೆ ಮಾಡಿರುವ ಘೋರ ಆಘಾತವನ್ನು ಅವರು ೧೮೫೦ರಷ್ಟು ಹಿಂದೆಯೇ ಕಂಡಿದ್ದರು. ಜನಸಾಮಾನ್ಯರು ಸ್ವಚ್ಛ ಗಾಳಿ ಸೇವಿಸುತ್ತಿಲ್ಲ ಅಥವಾ ಹಸಿರು ಭೂಮಿಯಲ್ಲಿ ನಡೆದಾಡುತ್ತಿಲ್ಲ ಎಂದು ಅವರು ಆಗಲೇ ನುಡಿದಿದ್ದರು.

ವರ್ಡ್ಸ್‌ವರ್ಥ್ ಎಚ್ಚರಿಸಿದ ಸುಮಾರು ಎರಡು ಶತಮಾನಗಳ ನಂತರ ನಾವೇ ಕೈಯಾರೆ ತಂದುಕೊಂಡ ಪರಿಸ್ಥಿತಿ ಮತ್ತು ನಮ್ಮ ಭವಿಷ್ಯದ ಜೀವನದ ಬಗ್ಗೆ ನಾವು ಏನೆಂದು ಹೇಳಿಕೊಳ್ಳಲು ಸಾಧ್ಯ?

ನಮ್ಮ ಪೂರ್ವಜರು ಮಳೆ ಮೋಡವನ್ನು ಕಂಡಾಗ ಅಗೋಚರ ಶಕ್ತಿಗಳನ್ನು ಹಾಡಿ ಹೊಗಳುತ್ತಿದ್ದರು.

ಅದೇ ಮೋಡವನ್ನು ನಾವಿಂದು ನೋಡಿದಾಗ ಎಷ್ಟು ಇಂಚು ಮಳೆ ನೀರು ಪಡೆಯಬಹುದು ಎಂದು ಚಿಂತಿಸುತ್ತೇವೆ. ನಮ್ಮ ಮಕ್ಕಳಿಗೆ ಕೊಡುಗೆಯಾಗಿ ಕೊಡುವಂತಹ ಬದುಕು ಮತ್ತು ಜೀವನ ಇದೆಯೇ?

* * *

ನೊಬೆಲ್ ಶಾಂತಿ ಪುರಸ್ಕಾರದ ದುರುಪಯೋಗ

– ಫ್ರೆಡ್ರಿಕ್ ಹೆಪರ್‌ಮೆಲ್

(ನೊಬೆಲ್‌ರವರ ಪಾರಿತೋಷಕವನ್ನು ನಾರ್ವೆ ದೇಶದ ರಾಜಕೀಯ ಮತ್ತು ವಾಣಿಜ್ಯ ಹಿತಾಸಕ್ತಿಗಾಗಿ ಉಪಯೋಗಿಸಿಕೊಂಡು ಬರಲಾಗಿದೆ. ಈ ವಿಷಯದ ಮೇಲೆ ಬೆಳಕು ಚೆಲ್ಲುವ ಲೇಖನವಿದು.)

ನೊಬೆಲ್ ಶಾಂತಿ ಪುರಸ್ಕಾರಕ್ಕಿಂತ ಬೇರೊಂದು ದೊಡ್ಡ ಕಾಣಿಕೆ ಜಗತ್ತಿಗೆ ಇದುವರೆಗೆ ಬಂದಿಲ್ಲ. ನೊಬೆಲ್‌ರು ಕೊಟ್ಟ ಐದು ಪಾರಿತೋಷಕಗಳಲ್ಲಿ ಶಾಂತಿ ಪುರಸ್ಕಾರವು ಮಾನವ ಕುಲದ ಗರಿಷ್ಠ ಲಾಭಕ್ಕಾಗಿ ಕೊಟ್ಟಂಥದ್ದಾಗಿದೆ. ಅದು ಜಗತ್ತಿನ ಅತ್ಯಂತ ಗೌರವಯುತ ಮತ್ತು ಹೆಮ್ಮೆಯ ಪಾರಿತೋಷಕ. ಆದರೆ ಇಂದು ಆ ಶಾಂತಿಪುರಸ್ಕಾರ ಆಲ್‌ಫ್ರೆಡ್ ನೊಬೆಲ್‌ರು ಬಯಸಿದ್ದಂಥ ಅಂತಾರಾಷ್ಟ್ರೀಯ ಸಂಬಂಧಗಳನ್ನು ಸುಧಾರಿಸಬೇಕೆಂಬ ಉದ್ದೇಶಕ್ಕೆ ಕೊಂಚವೂ ಹತ್ತಿರವಾಗಿಲ್ಲ. ಆದ್ದರಿಂದ ಅ ಪುರಸ್ಕಾರ ಕೇವಲ ನೊಬೆಲ್ ಹೆಸರನ್ನು ಮಾತ್ರ ಹೊತ್ತಿದೆ, ಉದ್ದೇಶವನ್ನಲ್ಲ. ವಾಸ್ತವವಾಗಿ ಆ ಶಾಂತಿಪುರಸ್ಕಾರ ನಾರ್ವೆ ದೇಶದ ಸಂಸತ್ತಿನ ಅಭಿಪ್ರಾಯಾಧೀನವಾಗಿದೆ. ಪಾರಿತೋಷಕದ ಉದ್ದೇಶ ರಾಜಕಾರಣದ ವಿಷಚಕ್ರವನ್ನು ಭೇದಿಸಿ ಅಪನಂಬಿಕೆಯನ್ನೂ, ಶಸ್ತ್ರಾಸ್ತ್ರ ಸ್ಪರ್ಧೆಗಳನ್ನೂ, ಸೈನ್ಯಶಕ್ತಿಯ ಹುಚ್ಚಾಟವನ್ನು ಸಹಕಾರದಿಂದ, ನ್ಯಾಯದಿಂದ, ಅಂತಾರಾಷ್ಟ್ರೀಯ ಕಾನೂನಿನಿಂದ ಶಾಂತಿ ಹೋರಾಟವನ್ನು ಪ್ರೋತ್ಸಾಹಿಸುವುದಾಗಿತ್ತು. ಇದುವರೆಗೆ ಪಾರಿತೋಷಕ ಪಡೆದವರ ಪಟ್ಟಿ ನೋಡಿದರೆ ಅದರಲ್ಲಿ ಬಹಳಷ್ಟು ವಿಜೇತರು ಪ್ರಭಾವೀ ವ್ಯಕ್ತಿಗಳಾಗಿದ್ದಾರೆ. ಆದರೆ ಪಾರಿತೋಷಕವು ದುಃಖ ತರುವಷ್ಟು ದುರುಪಯೋಗಗೊಂಡಿದೆ. ಪಾರಿತೋಷಕದ ನಗದು ಹಣ ಬೆಳೆದಂತೆಲ್ಲಾ, ಬಹು ಪ್ರಸಿದ್ಧರೂ ಮತ್ತು ಸ್ವಪ್ರತಿಷ್ಠಿತರೂ ಆದಂಥ ವಿಜೇತರ ಸಂಖ್ಯೆ ಹೆಚ್ಚಿದಷ್ಟೂ ಸೇನಾವಾದವನ್ನು ಕುಂಠಿತಗೊಳಿಸಿ ಯುದ್ಧಗಳನ್ನು ತಪ್ಪಿಸುವುದರಲ್ಲಿ ಶಾಂತಿಪಾರಿತೋಷಕ ಅಸಮರ್ಥವಾಗುತ್ತಿದೆ. ಆ ಶಾಂತಿ ಪುರಸ್ಕಾರವು ಜಗತ್ತನ್ನು ಬದಲಾಯಿಸಬೇಕೆಂಬ ತನ್ನ ಮೂಲ ಉದ್ದೇಶವನ್ನೇ ಕಳೆದುಕೊಂಡುಬಿಟ್ಟಿದೆ. "ನೊಬೆಲ್ ನಿಜವಾಗಿಯೂ ಬಯಸಿದ್ದೇನು?" ಎಂಬ ನನ್ನ ಪುಸ್ತಕದಲ್ಲಿ ನೊಬೆಲ್‌ರ ಉಯಿಲನ್ನು ವ್ಯಾಖ್ಯಾನಿಸಿದ್ದೇನೆ. ನನ್ನ ಅಭಿಪ್ರಾಯವೇನೆಂದರೆ ನೊಬೆಲ್‌ರು ಪುರಸ್ಕಾರವನ್ನು ಸ್ಥಾಪಿಸಿದಾಗ ಇಂಥ ಶಾಂತಿಪರವಾದ ವಿಚಾರಗಳನ್ನು ಬೆಂಬಲಿಸುವುದಾಗಿತ್ತು. ಆಗ ಈ ಶಾಂತಿಪರ ವಿಚಾರಗಳು ಯೂರೋಪಿನ ರಾಜಕಾರಣದಲ್ಲಿ ಬಹು ಶಕ್ತಿಶಾಲಿಯಾಗಿದ್ದವು. ಆಗ ನಾರ್ವೆ ದೇಶವು ಈ ವಿಚಾರದಲ್ಲಿ ಅಗ್ರಮಾನ್ಯವಾಗಿತ್ತು. ನಾರ್ವೆ ದೇಶದವರಾಗಿದ್ದ ನೊಬೆಲ್‌ರಿಗೆ ತಮ್ಮ ದೇಶದ ಸಂಸತ್ತಿನ ಸದಸ್ಯರು ಶಾಂತಿಪರವಾದ ವಿಚಾರದಲ್ಲಿ ತಮ್ಮ ಶ್ರೇಷ್ಠ ಮಿತ್ರರೆಂದು ಭಾವಿಸಿದ್ದಿರಬಹುದು. ಆದರೆ ಅವರ ಈ ಗ್ರಹಿಕೆ ಎಷ್ಟು ತಪ್ಪು! ಯಾವುದೇ ಒಂದು

ಉಯಿಲನ್ನು ವ್ಯಾಖ್ಯಾನಿಸುವುದೆಂದರೆ ಅದನ್ನು ಶಬ್ದಶಃ ಓದುವುದಾಗಲೀ ಅಥವಾ ಕಾನೂನುರೀತ್ಯಾ ಶಬ್ದಗಳ ಕುರಿತು ಸಂದಿಗ್ಧವಾಗಿ ಮಾತನಾಡುವುದಾಗಲೀ ಅಲ್ಲ. ಎರಡು ಪಕ್ಷಗಳ ಮಧ್ಯದ ಒಪ್ಪಂದದಲ್ಲಿ ಶಬ್ದಗಳು ಮುಖ್ಯವಾಗಿರುತ್ತವೆ. ಆದರೆ ಉಯಿಲುಗಳು ಏಕಪಕ್ಷೀಯ ದಾಖಲೆಗಳೇ. ಅಲ್ಲಿ ಮುಖ್ಯವಾದುದು, ಉಯಿಲುದಾರನ ಸ್ಪಷ್ಟ ಉದ್ದೇಶ. ಒಂದು ವೇಳೆ ಉಯಿಲಿನಲ್ಲಿರುವ ಶಬ್ದಗಳು ಉಯಿಲುದಾರನ ಸ್ಪಷ್ಟ ಉದ್ದೇಶಕ್ಕೆ ವಿರುದ್ಧವಾಗಿವೆ ಎಂದು ಅನ್ನಿಸಿದರೆ, ಆಗ ಉಯಿಲುದಾರನ ಉದ್ದೇಶವೇ ಮುಖ್ಯವಾಗುತ್ತದೆ. ಆಶ್ಚರ್ಯದ ಸಂಗತಿಯೇನೆಂದರೆ, ನೊಬೆಲ್ ಸಮಿತಿಯು ಅರ್ಥೈಸುವ ಕ್ರಮದ ಈ ಪ್ರಾಥಮಿಕ ತತ್ವವನ್ನು ಗಮನಿಸಿಲ್ಲವೆಂಬುದು. ನಾರ್ವೆ ದೇಶದ ಬಹುಸಂಖ್ಯಾತ ರಾಜಕಾರಣಿಗಳು ದೇಶ ಸಂರಕ್ಷಣೆಯ ಪರವಾಗಿರುವಂಥವರೂ ಮತ್ತು ನ್ಯಾಟೋ ಸಂಧಿಗೆ ವಿಧೇಯರೂ ಆದಂಥವರು. ಆದ್ದರಿಂದ ತಮ್ಮ ಇಡೀ ಜೀವನವನ್ನು ಶಾಂತಿಗಾಗಿ ಸಮರ್ಪಿಸಿಕೊಂಡವರಿಗೆ ತದ್ವಿರುದ್ಧದ ವಿಚಾರದ ಪಕ್ಷಕ್ಕೆ ಸೇರಿದವರಾದ ಅವರು ಶಾಂತಿಪುರಸ್ಕಾರ ಕೊಡಲು ಸೂಕ್ತವಲ್ಲದ ವ್ಯಕ್ತಿಗಳಾಗಿದ್ದಾರೆ.

ನೊಬೆಲ್ ಪರಿತೋಷಕವನ್ನು ಹಿತಕಾರಕ ಪ್ರಭಾವ ಬೀರುವುದಕ್ಕೆ ಉಪಯೋಗಿಸುವ ಬದಲಾಗಿ ೧೯೫೦ರ ದಶಕಗಳಿಂದಲೂ ನಾರ್ವೆ ದೇಶದ ರಾಜಕೀಯ, ವಾಣಿಜ್ಯ ಮತ್ತು ಹಿತಾಸಕ್ತಿಗೆ ಉಪಯೋಗಿಸಲ್ಪಟ್ಟಿದೆ. ನೊಬೆಲ್‌ರವರು ತಮ್ಮ ಉಯಿಲಿನಲ್ಲಿ ತಮ್ಮ ಉದ್ದೇಶವನ್ನು ಸ್ಪಷ್ಟಪಡಿಸುವುದಕ್ಕಾಗಿ "ಶಾಂತಿಯ ಸಮರ್ಥ ಪ್ರತಿಪಾದಕರು" ಎಂಬ ಶಬ್ದ ಬಳಸಿದ್ದಾರೆ. ತನ್ಮೂಲಕ ಪಾರಿತೋಷಕವನ್ನು ಪಡೆಯಲಿಚ್ಛಿಸುವವರನ್ನು ಗುರುತಿಸಿದ್ದಾರೆ. ವಾಸ್ತವ ಹೀಗಿರುವಾಗ ಸರ್ವೇಸಾಮಾನ್ಯ ಅರ್ಥದಲ್ಲಿ 'ಶಾಂತಿಗಾಗಿ' ಎಂದು ಪಾರಿತೋಷಕವನ್ನು ಒಬಾಮಗೆ ಕೊಟ್ಟು ನೊಬೆಲ್ ಸಮಿತಿಯು ದೊಡ್ಡ ತಪ್ಪನ್ನೆಸಗಿದೆ. ನೊಬೆಲ್‌ರವರು ತಮ್ಮ ಉಯಿಲಿನಲ್ಲಿ ಘೋಷಿಸಿದ ಇನ್ನೂ ಮೂರು ಅಭಿವ್ಯಕ್ತಿಗಳೇನೆಂದರೆ–

೧) ರಾಷ್ಟ್ರಗಳ ಮಧ್ಯದಲ್ಲಿಯ ಸಂಘರ್ಷವನ್ನು ಕಡಿಮೆ ಮಾಡುವುದು.

೨) ಈಗಾಗಲೇ ಇರುವ ಸೈನ್ಯದ ಪ್ರಮಾಣವನ್ನು ಕಡಿಮೆ ಮಾಡುವುದು ಅಥವಾ ವಿಸರ್ಜನೆಗೊಳಿಸುವುದು.

೩) ಶಾಂತಿ ಸಮ್ಮೇಳನಗಳನ್ನು ಪ್ರಚೋದಿಸುವುದು.

ಈ ಮಾತುಗಳನ್ನು ಗಮನಿಸಿದರೆ ಪಾರಿತೋಷಕಕ್ಕೆ ಅರ್ಹ ವ್ಯಕ್ತಿಗಳು ಶಾಂತಿ ಆಂದೋಲನದ ಸದಸ್ಯರೇ ಆಗಿರಬೇಕೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಶಾಂತಿ ಆಂದೋಲನದ ಸದಸ್ಯರಾಗಿದ್ದ ನೊಬೆಲ್‌ರಿಗೆ ಯುದ್ಧದಲ್ಲಿ ಮುಖ್ಯ ಸಾಧನವಾದ ಸೈನ್ಯವನ್ನೇ ತೆಗೆದು ಹಾಕಬೇಕೆಂಬುದೇ ಅವರ ಇಚ್ಛೆಯಾಗಿತ್ತು. ಸೈನ್ಯಶಕ್ತಿಯನ್ನು ಮಿತಗೊಳಿಸುವುದು ಮತ್ತು ಅದರ ಅಂತ್ಯವೇ ಅವರ ಪಾರಿತೋಷಕ ಪ್ರದಾನದ ಅರ್ಥವಾಗಿತ್ತು. ಇಂದಿನ ಜಗತ್ತಿನಲ್ಲಿ ನೊಬೆಲ್‌ರ ವಿಚಾರ ಗಗನ ಕುಸುಮವೆಂದು ಅನಿಸಬಹುದು. ಇಂದಿನ ಜಗತ್ತು ಒಂದು ಮಹಾನ್ ಸೈನ್ಯಶಕ್ತಿಯ ಅಡಿಯಲ್ಲಿ ಬದುಕುತ್ತಿದೆ. ನೊಬೆಲ್‌ರ ಕನಸು ಇನ್ನೂ ಹಸಿರಾಗಿದೆ ಎಂಬುದನ್ನು ತಿಳಿಯಲು ನಾವು ಬಹು ಹಿಂದೆ ಹೋಗಬೇಕಿಲ್ಲ.

ನಾರ್ವೆ ದೇಶದ ಬಹುಸಂಖ್ಯಾತ ರಾಜಕಾರಣಿಗಳು ಶಾಂತಿ ಚಳುವಳಿಯನ್ನು

ನಿರಾಕರಿಸಿದ್ದಾರೆ. ಅಷ್ಟೇ ಅಲ್ಲ, ಯಾರಿಗೆ ಹಣ ಸಂದಾಯ ಆಗಬೇಕಿತ್ತೋ ಅಂಥದ್ದನ್ನು ತಪ್ಪಾಗಿ ನಿರ್ದೇಶಿಸಿದ್ದಾರೆ ಎಂಬುದು ತುಂಬ ಗಂಭೀರವಾದ ವಿಚಾರ. ಸಾಮಾನ್ಯ ಉಯಿಲಿನ ಸಂಚಾಲಕರೇನಾದರೂ ಈ ರೀತಿ ಮಾಡಿದ್ದರೆ ಅವನ ಮೇಲೆ ದಾವೆ ಹೂಡಬಹುದಾಗಿತ್ತು, ಅಥವಾ ಅವನನ್ನು ಬಂಧಿಸಬಹುದಾಗಿತ್ತು. ಈ ಮಾತನ್ನು ಇಂಗ್ಲೆಂಡಿನ ಶಾಂತಿ ಪ್ರತಿಪಾದಕರಾದ "ಬ್ರೂಸ್ ಕೆಂಟ್" ಹೇಳಿದ್ದಾರೆ. ಇದು ಪ್ರಜಾಪ್ರಭುತ್ವದ ವಿಚಾರ. ಅವರ ಹೊಸ ಪುಸ್ತಕ ಶಾಂತಿಪರವಾಗಿರುವ ಅಲ್ಪ ಸಂಖ್ಯಾತರು ಮತ್ತು ಸೇನಾಶಕ್ತಿ ಪರವಾಗಿರುವ ಬಹುಸಂಖ್ಯಾತರ ಮಧ್ಯೆ ನಡೆಯುತ್ತಿರುವ ಹೋರಾಟವನ್ನು ಒಂದು ಮಾದರಿ ಅಧ್ಯಯನವಾಗಿ ವಿಮರ್ಶಿಸಿದೆ. ಪ್ರಜಾಪ್ರಭುತ್ವದ ನಿಯಮಾನುಸಾರ ಅಧಿಕಾರಸ್ಥಾನಕ್ಕೆ ಆಯ್ಕೆಯಾದವರು ಟೀಕೆಯನ್ನು ಕೇಳಬೇಕು ಮತ್ತು ಅದಕ್ಕೆ ಸ್ಪಂದಿಸಬೇಕು. ಒಂದು ಹಂತದವರೆಗೆ ಸತ್ಯ ಶೋಧನೆಯ ಮಾತು ನಡೆದು ಮತ್ತು ವಸ್ತು ಆಧಾರಿತ ಪ್ರಾಮಾಣಿಕ ಚರ್ಚೆಯ ಮೂಲಕ ಅಗತ್ಯವಾದ ತೀರ್ಮಾನಗಳಿಗೆ ಬಂದು ಅದರಂತೆ ಕಾರ್ಯಾಚರಣೆ ಮಾಡದೇ ಹೋದರೆ ಪ್ರಜಾಪ್ರಭುತ್ವವು ಕೆಲಸಮಾಡಲಾರದು. ಸ್ವಾರ್ಥಪರ ಕೃತಿಗಳು ಮತ್ತು ತೀರ್ಮಾನಗಳ ಆಧಾರದ ಮೇಲೆ ರಾಜಕೀಯ ಚರ್ಚೆಗಳು ನಡೆಯುವುದಕ್ಕೆ ನಾವು ಅವಕಾಶ ಮಾಡಿಕೊಟ್ಟರೆ ಪ್ರಜಾಪ್ರಭುತ್ವವು ಸತ್ತಂತೆಯೇ ಸರಿ. ನಾನು ಕಾನೂನಿನ ವಿದ್ಯಾರ್ಥಿಯಾಗಿದ್ದಾಗ ಕಲಿತ ಮೊದಲಿನ ಪಾಠವೆಂದರೆ ಪ್ರಾಚೀನ ರೋಮ್‌ನಲ್ಲಿ ವಿವಾದ ಮತ್ತು ದುರುಪಯೋಗವನ್ನು ತಪ್ಪಿಸುವುದಕ್ಕಾಗಿ ಕಾನೂನು ಬರಹ ರೂಪದಲ್ಲಿ ಇರಬೇಕೆಂಬುದು ಜನರ ಬೇಡಿಕೆಯಾಗಿತ್ತು. ಇಂದು ಎಲ್ಲ ಬಗೆಯ ಕಾನೂನು ಬರಹಗಳಲ್ಲಿವೆ. ಆದರೆ ರಾಜಕಾರಣಿಗಳು ಅವುಗಳ ಅನುಷ್ಠಾನದ ಬಗ್ಗೆ ಬದ್ಧತೆಯನ್ನು ತೋರಿಸುವುದಿಲ್ಲ. ಇದರ ಪರಿಣಾಮ ವಿವಾದಗಳ ಸೃಷ್ಟಿ ಮತ್ತು ನ್ಯಾಯದ ನಿರಾಕರಣೆ. ಈಗಿನ ನೊಬೆಲ್ ಸಮಿತಿಯ ಅಧ್ಯಕ್ಷ ನಾರ್ವೆ ದೇಶದ ತೊರಬ್ ಜೋರ್ನ್ ಜಗ್‌ಲ್ಯಾಂಡ್. ಯೂರೋಪ್ ದೇಶಗಳ ಸಂಘಟನೆಯ ಮಹಾ ಕಾರ್ಯದರ್ಶಿಗಳೂ ಆಗಿದ್ದಾರೆ. ಅಲ್ಲಿ ಅವರ ಮುಖ್ಯ ಕರ್ತವ್ಯ, ಪ್ರಜಾಪ್ರಭುತ್ವವನ್ನು ಮತ್ತು ಕಾನೂನಿನನ್ವಯವನ್ನು ಎತ್ತಿ ಹಿಡಿಯುವುದೇ ಆಗಿದೆ. ನೊಬೆಲ್ ಶಾಂತಿ ಪಾರಿತೋಷಕದ ನಿರ್ವಹಣೆಯ ಪದ್ಧತಿ ಮೂಲ ಆಶಯಕ್ಕೆ ಎಷ್ಟೊಂದು ವ್ಯತಿರಿಕ್ತವಾಗಿದೆ ಎಂಬುದನ್ನು ತಿಳಿಯ ಬೇಕಾದುದು ಅವರ ಮುಖ್ಯ ಕರ್ತವ್ಯವಾಗಿದೆ.

– ಅನು : ಸುಕೌ

* * *

ಪ್ರಜಾಪ್ರಭುತ್ವದ ಅಪಹರಣ!

– ವಿನ್ಸೆಂಟ್ ಯಕ್ಕಾ

ಅನೇಕ ಸಂದರ್ಭಗಳಲ್ಲಿ ನಮ್ಮ ರಾಜಕೀಯ ಧುರೀಣರು, ಲೇಖಕರು ಮತ್ತು ಚಿಂತಕರು ಭಾರತೀಯ ಪ್ರಜಾಪ್ರಭುತ್ವದ ಬಗ್ಗೆ ಹೆಮ್ಮೆಯಿಂದ ಮಾತನಾಡುವುದನ್ನು ಕೇಳಿದ್ದೇವೆ. ಕೆಲವರಂತೂ ನಮ್ಮದು ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಎಂದು ಹೇಳಿಕೊಳ್ಳುವವರೆಗೆ ಹೋಗಿದ್ದಾರೆ. ಅದು ಸರಿ ಕೂಡ. ಇತ್ತೀಚಿನ ದಿನಗಳಲ್ಲಿ ಇದುವರೆಗೆ ನಾವು ಬಹುಮುಖಿ ಪ್ರಜಾಪ್ರಭುತ್ವವನ್ನು ನೋಡಿದ್ದೇವೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಜೀವನದ ಮೂಲಭೂತ ಅಗತ್ಯಗಳಾದ ಸ್ವಾತಂತ್ರ್ಯ ಮತ್ತು ಆತ್ಮಗೌರವಗಳ ಹನನವಾಗಿದೆ. ಇಂಥ ಗೊಂದಲದ ಪರಿಸ್ಥಿತಿಯಲ್ಲಿ ಯಾರಿಗೇ ಆಗಲಿ ನಾವು ಪ್ರಜಾಪ್ರಭುತ್ವ ಹೊಂದಿದ್ದೇವೆಯೇ ಎಂದು ಆಶ್ಚರ್ಯವಾಗದೇ ಇರಲಾರದು. ನಮ್ಮ ಅರ್ಥದಲ್ಲಿ ಪ್ರಜಾಪ್ರಭುತ್ವ ಎಂದರೇನು? ವಾಸ್ತವವಾಗಿ ಅಧಿಕಾರದ ಎಷ್ಟು ಪ್ರಮಾಣವನ್ನು ಹಂಚಿಕೊಳ್ಳಲಾಗುತ್ತಿದೆ? ಮತ ಭೇದ ಎಂದರೇನು? ಭಿನ್ನಾಭಿಪ್ರಾಯಕ್ಕೆ, ಮತ ಭೇದಕ್ಕೆ, ಚರ್ಚೆಗೆ ಮತ್ತು ಸಂವಾದಕ್ಕೆ ಪ್ರಜಾಪ್ರಭುತ್ವದಲ್ಲಿ ಅವಕಾಶವಿದೆಯೇ? ಭಾರತದಲ್ಲಿ ಕೆಳಹಂತದಲ್ಲಿ ಪ್ರಜಾಪ್ರಭುತ್ವದ ನೈಜ ಸ್ಥಿತಿ ಏನಿದೆ? ಈ ಎಲ್ಲ ಪ್ರಶ್ನೆಗಳು ಭಾರತದ ಪ್ರಜಾಪ್ರಭುತ್ವದ ಬಗ್ಗೆ ವಸ್ತುನಿಷ್ಠವಾದ ಚಿಂತನೆಗೆ ಕಾರಣವಾಗಿವೆ.

ಭಾರತದ ಪ್ರಜಾಪ್ರಭುತ್ವದ ಮೇಲೆ ಅವ್ಯಾಹತ ಪ್ರಹಾರವಾಗುತ್ತಿದೆ ಎಂಬ ಸಾಮಾನ್ಯ ಅನಿಸಿಕೆ ಜನರಲ್ಲಿ ಮತ್ತು ನಾಗರಿಕ ಸಮಾಜ ಸಮೂಹಗಳಿಗೆ ಅನಿಸುತ್ತದೆ. ದೇಶದ ಹೊರ ಅಂಚಿನಲ್ಲಿರುವ ಕಾಶ್ಮೀರ, ಮಣಿಪುರ ಮತ್ತು ನಾಗಾಲ್ಯಾಂಡ್‌ಗಳಲ್ಲಿ ಸಾರ್ವಜನಿಕ ಜೀವನಕ್ಷೇತ್ರವು ಸೂಕ್ಷ್ಮ ಪರೀಕ್ಷೆಗೆ ಒಳಗಾಗಿದೆ. ಅದು ಭಾರತದ ಹೃದಯಕ್ಷೇತ್ರಗಳೇ ಆಗಿರುವ ಛತ್ತೀಸ್‌ಗಢ, ಝಾರ್ಖಂಡ್, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಒರಿಸ್ಸಾ, ಆಂಧ್ರಪ್ರದೇಶ, ಬಿಹಾರ, ಮಹಾರಾಷ್ಟ್ರ, ಉತ್ತರ ಪ್ರದೇಶ ಮುಂತಾದವುಗಳನ್ನೂ ಆವರಿಸಿಕೊಂಡಿದೆ. ಇಷ್ಟೇ ಅಲ್ಲ, ಇದು ಇನ್ನಿತರ ರಾಜ್ಯಗಳನ್ನೂ ಆವರಿಸಿಕೊಳ್ಳುವ ಸಾಧ್ಯತೆಯಿದೆ. "ಕ್ಷೋಭಿತಗೊಂಡಿರುವ ದೊಡ್ಡ ಪ್ರದೇಶ" ಎಂಬ ಹೆಸರಿನಲ್ಲಿ ಭಯೋತ್ಪಾದಕರನ್ನು ನಿಗ್ರಹಿಸುವ ಹೆಸರಿನಲ್ಲಿ ಗಡಿಯಂಚಿನಲ್ಲಿರುವ ರಾಜ್ಯಗಳಲ್ಲಿಯ ನಿರ್ದಿಷ್ಟ ಸಮೂಹಗಳಾದ ಮುಸಲ್ಮಾನರನ್ನು ಗುರಿಯಾಗಿ ಇಡಲಾಗಿದೆ. ಇನ್ನಿತರ ಪ್ರದೇಶಗಳಲ್ಲಿ "ರಾಷ್ಟ್ರೀಯ ಅಭಿವೃದ್ಧಿ ಮತ್ತು ಬಂಡಾಯ"ದ ಹೆಸರಿನಲ್ಲಿ ವಾಯವ್ಯ ಕ್ಷೇತ್ರದ ಬಡ ಆದಿವಾಸಿಗಳನ್ನು ಗುಂಡಿಕ್ಕುವ, ಮುಖಾಮುಖಿ ಸಾಯಿಸುವಿಕೆ, ದೈಹಿಕ ಶಿಕ್ಷೆ ಇತ್ಯಾದಿ ಉತ್ಪೀಡನೆಗೆ ಒಳಪಡಿಸಲಾಗಿದೆ. ಇನ್ನೊಂದು ಪ್ರಕಾರದ ವರದಿಯ ಆಧಾರದ ಮೇಲೆ ಪೋಲಿಸ್ ರಕ್ಷಣಾ ದಳಗಳಿಂದ, ಗುಜರಾತ್ ಮತ್ತು ಒರಿಸ್ಸಾದ ಒಂದು ನಿರ್ದಿಷ್ಟ ಸಮೂಹದ ಜೀವನವನ್ನೂ ಮತ್ತು ಬದುಕನ್ನೂ ಹಾಳುಮಾಡಲಾಗಿದೆ. ಆವೇಶಭರಿತ ದೊಂಬಿಗಾರಿಕೆ ಕರ್ನಾಟಕ, ಮಧ್ಯಪ್ರದೇಶ, ರಾಜಾಸ್ಥಾನ ರಾಜ್ಯಗಳಿಗೂ ತಲುಪಿದೆ. ದೇಶದ ಮಧ್ಯ ಭಾಗದಲ್ಲಿಯ ಮಾವೋವಾದಿಗಳ ಅತಿರೇಕವನ್ನು ಆಂತರಿಕ ಸುರಕ್ಷತೆಗೆ ದೊಡ್ಡ ಅಪಾಯವೆಂದು

ಘೋಷಿಸಲಾಗಿದೆ. ಆದ್ದರಿಂದ ಸರ್ಕಾರವು ಕೇಂದ್ರ ಮೀಸಲು ಪಡೆಗೆ, ರಾಜ್ಯ ಪೋಲಿಸ್ ಪಡೆಗೆ ಮತ್ತು ಅರೆ ಸೈನ್ಯಕ್ಕೆ "ಗ್ರೀನ್ ಹಂಟ್ ಆಪರೇಷನ್" ಎಂಬ ಕಾರ್ಯಾಚರಣೆಗೆ ಅನುಮತಿ ಕೊಟ್ಟಿದೆ. ತನ್ಮೂಲಕ ತನ್ನ ಜನರನ್ನೇ ಬೇಟೆಯಾಡುವುದಕ್ಕೆ ಅನುಮತಿಸಿದಂತಾಗಿದೆ. ಎಷ್ಟು ಅಮಾಯಕರನ್ನು ಸಾಯಿಸಲಾಗುತ್ತಿದೆ, ಎಷ್ಟು ಜನ ವಲಸೆ ಹೋಗುತ್ತಿದ್ದಾರೆ ಮತ್ತು ಎಲ್ಲಿಗೆ ಹಾಗೂ ಅವರ ಪುನರ್ವಸತಿ ಹೇಗೆ ಎಂಬುದರ ಬಗ್ಗೆ ದಾಖಲೆಗಳಿಲ್ಲ. ತನ್ನ ಜನರ ಬಗ್ಗೆಯೇ ಇಂಥ ಏಕಪಕ್ಷೀಯ ತೀರ್ಮಾನವನ್ನು ಕೈಗೊಳ್ಳಬಹುದೆ? ನಮ್ಮ ದೇಶದ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಅಸಮ್ಮತಿಗೆ ಸ್ಥಾನವಿಲ್ಲವೆಂದು ತೋರುತ್ತದೆ. ಸ್ವೇಚ್ಛಾಚಾರ ಇಂದಿನ ಆಡಳಿತ ಪದ್ಧತಿಯಾಗಿದೆ. ಪ್ರಜಾಪ್ರಭುತ್ವವು ಅಪಹರಿಸಲ್ಪಟ್ಟಿದೆ ಎಂದು ತೋರುತ್ತದೆ. ನಾಗರಿಕ ಸ್ವಾತಂತ್ರ್ಯದ ಮೇಲೆ ನಿರಂತರ ಪ್ರಹಾರ ಆಗುತ್ತಿರುವುದೆಂದು ಸಾಮಾನ್ಯ ಅನಿಸಿಕೆ. ಸಂವಿಧಾನದತ್ತ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಲವಂತವಾಗಿ ಅದುಮಲಾಗಿದೆ ಎಂದು ಅನಿಸುತ್ತದೆ. ಭಿನ್ನಮತ ಧ್ವನಿಯನ್ನು ಸರ್ಕಾರವು ವಿವಿಧ ಬಗೆಯ ದಮನಕಾರೀ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಅಡಗಿಸುತ್ತಿದೆ. ಅಗತ್ಯ ಸೇವಾ ಜಾರಿ ಕಾನೂನು(ಯಸ್ಮಾ) ಕಾರ್ಮಿಕರ ಸಂಘಗಳನ್ನು ಅಮಾನ್ಯಗೊಳಿಸುವ ಮತ್ತು ಸಂಘಗಳನ್ನು ರಚಿಸದಂತೆ ಮಾಡುವ ಹಾಗೂ ಮುಷ್ಕರದ ಹಕ್ಕನ್ನು ತಡೆಯುವ ಭೀತಿಯನ್ನು ಉಂಟುಮಾಡಿದೆ. ಈ ಕಾನೂನಿನ ಅಡಿಯಲ್ಲಿ ಯಾವುದೇ ಒಬ್ಬ ವ್ಯಕ್ತಿ ತಪ್ಪನ್ನೆಸಗಿದ್ದಾನೆ ಎಂದು ಸಕಾರಣವಾಗಿ ಅನುಮಾನ ಬಂದಲ್ಲಿ ಆತನನ್ನು ಬಂಧಿಸುವ ಅಧಿಕಾರವಿದೆ. ಹಾಗೆ ಬಂಧಿಸುವಾಗ ವಾರೆಂಟ್ ಕೊಡಬೇಕಾಗಿಲ್ಲ. ಭಯೋತ್ಪಾದನಾ ತಡೆ ಕಾನೂನು(ಪೋಟಾ), ಭಯೋತ್ಪಾದಕತೆಯ ವಿರುದ್ಧ ಇರುವ ಕಾನೂನು ಆದರೂ ಯಾವುದೇ ಒಬ್ಬ ವ್ಯಕ್ತಿಯನ್ನು ಸಂಶಯದ ಆಧಾರದ ಮೇಲೆ ಕ್ರಮಕ್ಕೊಳಪಡಿಸಲು ಪೋಲಿಸ್ ಅಧಿಕಾರಿಗೆ ಸಂಪೂರ್ಣ ಅಧಿಕಾರ ಕೊಟ್ಟಿದೆ. ಅದೇ ರೀತಿ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾನೂನು (ಊಪಾ)ಶಾಂತಿಯುತವಾಗಿ ಯಾವುದೇ ಶಸ್ತ್ರಾಸ್ತ್ರಗಳಿಲ್ಲದೇ ಸಕಾರಣವಾಗಿ ಸೇರಲು ಅವಕಾಶ ನೀಡುವಂತೆ ರಾಜ್ಯಗಳಿಗೆ ಅನುಮತಿ ಕೊಟ್ಟಿದೆ. ಸಶಸ್ತ್ರ ವಿಶೇಷ ಅಧಿಕಾರ(ಅಪ್ಸಾ) ಕಾನೂನು ಮೇರೆಗೆ ಶಾಂತಿ ಕದಡಿದ ಪ್ರದೇಶಗಳಲ್ಲಿ ಐದು ಅಥವಾ ಹೆಚ್ಚು ಜನ ಸೇರಿದಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರವನ್ನು ಸಶಸ್ತ್ರ ಸೈನಿಕರಿಗೆ ಕೊಡಲಾಗಿದೆ. ಈ ಅಧಿಕಾರ ಎಷ್ಟರಮಟ್ಟಿಗೆ ಇದೆ ಎಂದರೆ ಸಾವನ್ನೂ ಕೂಡ ಉಂಟುಮಾಡಬಹುದು. ಇನ್ನೊಂದು ಭಯಾನಕ ಕಾನೂನು ಛತ್ತೀಸ್‌ಗಢ ವಿಶೇಷ ಸಾರ್ವಜನಿಕ ಸುರಕ್ಷಾ ಕಾನೂನು(ಸಿ.ಎಸ್.ಪಿ.ಎಸ್.ಎ)ಸಾರ್ವಜನಿಕ ಸಭೆಗಳನ್ನು ಏರ್ಪಡಿಸುವ ಹಕ್ಕನ್ನು, ಸಾರ್ವಜನಿಕ ಪ್ರತಿಭಟನೆಯನ್ನು ಸಂಘಟಿಸುವುದು ಮತ್ತು ಮಾಧ್ಯಮಗಳ ಮೂಲಕ ಸರ್ಕಾರದ ನೀತಿಗಳನ್ನು ವಿರೋಧಿಸುವುದು ಇತ್ಯಾದಿಗಳ ಮೇಲೆ ನಿರ್ಬಂಧ ಹೇರುವ ಅಧಿಕಾರವನ್ನು ಪೋಲಿಸರಿಗೆ ಕೊಡಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮೇಣ ಮಾನವ ಹಕ್ಕುಗಳ ಕ್ರಿಯಾಶೀಲ ಕಾರ್ಯಕರ್ತರನ್ನು, ಭಿನ್ನಾಭಿಪ್ರಾಯ ಹೊಂದಿರುವ ಬುದ್ಧಿಜೀವಿಗಳನ್ನು, ಸಾಮಾಜಿಕ ಚಳುವಳಿಗಳನ್ನು ಮತ್ತು ಸರ್ಕಾರದ ನೀತಿಗಳನ್ನು ಟೀಕಿಸುವಂಥವರನ್ನು ಗುರಿಯಾಗಿ ಇಟ್ಟುಕೊಳ್ಳುತ್ತಿದೆ. ದೆಹಲಿ, ಗುಜರಾತ್, ರಾಯ್‌ಪುರ ಹಾಗೂ ಇತರ ಸ್ಥಳಗಳಲ್ಲಿ ಮಾವೋವಾದಿಗಳಿಗೆ

ಅನುಕಂಪ ತೋರಿಸುತ್ತಿದ್ದಾರೆ ಎಂಬ ಕಾರಣಕ್ಕಾಗಿ ಬಂಧಿಸುವುದರ ಮೂಲಕ ದೇಶದ ಯಾವುದೇ ಭಾಗದಲ್ಲಿಯ ಭಿನ್ನಾಭಿಪ್ರಾಯಗಳನ್ನು ಅಡಗಿಸುವ ಸಿದ್ಧತೆಯನ್ನು ಮಾಡಿಕೊಳ್ಳುತ್ತಿರುವಂತೆ ಕಾಣುತ್ತಿದೆ.

ರಾಜಕಾರಣಿಗಳಿಂದ, ದೊಡ್ಡ ವಾಣಿಜ್ಯ ಸಂಸ್ಥೆಗಳಿಂದ, ಪೋಲಿಸ್ ಅಧಿಕಾರಿಗಳಿಂದ ಸತತವಾಗಿ ಪ್ರಜಾಪ್ರಭುತ್ವದ ಉಲ್ಲಂಘನೆಯಾಗುತ್ತಿದೆ. ಅನೇಕ ಸಂದರ್ಭಗಳಲ್ಲಿ ಪ್ರಭಾವಶಾಲಿಯಾದ ಜನರು ತಮ್ಮನ್ನು ಪ್ರಜಾಪ್ರಭುತ್ವವಾದಿಗಳು ಎಂದು ಹೇಳಿಕೊಳ್ಳುತ್ತ ತಮ್ಮ ಸ್ವಾರ್ಥಕ್ಕಾಗಿ ಆಡಳಿತವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿ ಶಿವ ಸೈನಿಕರ ದೊಂಬಿಮಾಡುವಿಕೆ, ನೀತಿ ರಕ್ಷಕರೆಂದು ಹೇಳಿಕೊಳ್ಳುವ ಕೇಸರಿ ಬಣ್ಣದ ಪಡೆಗಳ ಕಣ್ಗಾವಲು ಹಾಗೂ ಉತ್ತರ ಭಾರತದಲ್ಲಿ ಖಪ್ ಪಂಚಾಯಿತಿಗಳು, ಭ್ರಷ್ಟ ರಾಜಕಾರಣಿಗಳು ಮತ್ತು ಅಧಿಕಾರಿಗಳ ಮುಕ್ತ ಚಲನವಲನಗಳು ಭಾರತೀಯ ಪ್ರಜಾಪ್ರಭುತ್ವದ ವ್ಯಂಗ್ಯವನ್ನು ಕುರಿತು ಬಹಳಷ್ಟು ಹೇಳುತ್ತವೆ. ಈ ಕೆಳಗಿನ ಘಟನೆಗಳು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ತೋರಿಸುತ್ತದೆ. ೨೦೦೧ರ ಫೆಬ್ರವರಿಯಲ್ಲಿ ಬಿಹಾರದ ರಾಂಚಿ ಬಳಿ ತಪ್ಸಕಾರ್ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಜನ ಸಮೂಹದ ಮೇಲೆ ಗುಂಡುಹಾರಿಸಲಾಯಿತು. ಓರ್ವ ಪೋಲಿಸ್ ದಫೇದಾರನು ಇಬ್ಬರು ಅಮಾಯಕ ಹಳ್ಳಿಗರನ್ನು ಹೊಡೆದದ್ದರ ವಿರುದ್ಧ ಆ ಸಮೂಹವು ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿತ್ತು. ಆ ಗಲಾಟೆಯ ಸಂದರ್ಭದಲ್ಲಿ ಪೋಲಿಸ್ ನಡೆಸಿದ ಗೋಲಿಬಾರ್‌ನಿಂದ ಎಂಟು ಜನರು ಸತ್ತರಲ್ಲದೆ ನೂರಾರು ಜನ ಗಾಯಗೊಂಡರು. ಪಶ್ಚಿಮ ಬಂಗಾಳದಲ್ಲಿಯ ಸಿಂಗೂರ್ ಮತ್ತು ನಂದಿಗ್ರಾಮದ ಬಗ್ಗೆ ಯಾರಿಗೆ ಗೊತ್ತಿಲ್ಲ? ಈ ಕೆಲವು ಘಟನೆಗಳು ಯಾವ ರೀತಿ ನಮ್ಮ ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಕ್ಕೆ ಮತ್ತು ನ್ಯಾಯಯುತ ಹಕ್ಕುಗಳಿಗಾಗಿ ನಡೆಸುವ ಹೋರಾಟವನ್ನು ನಿರ್ಬಂಧಿಸಲಾಗುತ್ತಿದೆ ಎಂದು ಸೂಚಿಸುತ್ತವೆ. ಕಾನೂನು ಮತ್ತು ಸುವ್ಯವಸ್ಥೆಯ ನೆಪದಲ್ಲಿ ಕಾನೂನು ಪಾಲಿಸುವ ನಾಗರಿಕರು ಮತ್ತು ಪೋಲಿಸರು ಯಾವ ವಿವೇಚನೆಯೂ ಇಲ್ಲದೆ ಜನರನ್ನು ಹತ್ಯೆಗೆಯ್ಯುವ ಕೆಲಸವನ್ನು ಮಾಡಬಹುದೆ?

ಭಾರತದ ಸಂವಿಧಾನವು ನಿರ್ದಿಷ್ಟ ಪ್ರದೇಶದಲ್ಲಿ ಪಂಚಾಯತ್ ವಿಸ್ತರಣ ೧೯೯೬(ಪೀಸಾ)ಮೂಲಕ ಗ್ರಾಮ ಸಭೆಗಳಿಗೆ ಸಾರ್ವಜನಿಕ ಸಂಪನ್ಮೂಲಗಳ ಉಸ್ತುವಾರಿಯನ್ನು, ಸ್ಥಳೀಯ ವಿವಾದಗಳ ಪರಿಹಾರ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳಿಗೆ ಮನ್ನಣೆ ಕೊಡುವುದು ಇತ್ಯಾದಿ ವಿಶಿಷ್ಟ ಅಧಿಕಾರವನ್ನು ಕೊಟ್ಟಿದೆ. ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಜನರಿಗೆ ಕೊಡಲು ಸರ್ಕಾರ ಬಯಸದೇ ಇದ್ದಾಗ ಮತ್ತು ಮತ ಭೇದಗಳನ್ನು ದಮನ ಮಾಡಲು ಸತತವಾಗಿ ವಿವಿಧ ಪ್ರಕಾರದ ಕ್ರಮಗಳನ್ನು ಕೈಗೊಳ್ಳುತ್ತಿರುವಾಗ ನಾವು ಪ್ರಜಾಸತ್ತಾತ್ಮಕ ದೇಶದಲ್ಲಿ ಇದ್ದೇವೆಯೇ ಎಂಬ ಪ್ರಶ್ನೆಯನ್ನು ಸಹಜವಾಗಿ ಕೇಳಬೇಕಾಗುತ್ತದೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಸಾಕಾರಗೊಳಿಸಬೇಕಾದರೆ ಇಂಥ ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯಬೇಕಾಗುತ್ತದೆ. – ಅನು: **ಸುಕೌ**

* * *

ಗಾಂಧಿಯೊಳಗಿನ ಬುದ್ಧನ ಮೌನ

– ಎಸ್.ಮಂಜುನಾಥ್

ಈಚೆಗೆ ಕೇಳಿದ ಒಂದು ಕಥೆ ನನ್ನ ಮನಸ್ಸನ್ನು ಆವರಿಸಿಕೊಂಡಿದೆ. ಸಿಕ್ಕ ಗೆಳೆಯರಿಗೆಲ್ಲ ನಾನು ಆ ಕಥೆಯನ್ನು ಹೇಳುತ್ತಾ ಇದ್ದೇನೆ. ಆ ಎರಡು ಜಿಂಕೆಗಳು ನನ್ನ ಮನಸ್ಸಲ್ಲಿ ಇಳಿಯುತ್ತಲೇ ಹೋಗುತ್ತಿವೆ. ಆ ಕಥೆ ಹೀಗಿದೆ:

ಹೂವರಳಿದ ಮುತ್ತುಗದ ಮರದ ಕೆಳಗೆ ಜೋಡಿ ಜಿಂಕೆಗಳು ನಿಂತಿವೆ. ಹೆಣ್ಣಿನ ಕಣ್ಣಿಂದ ನೀರಿಳಿಯುತ್ತಿದೆ. ಗಂಡು ಕೇಳುತ್ತದೆ: ಯಾಕೆ ಕಣ್ಣೀರು? ಹೆಣ್ಣು ಹೇಳುತ್ತದೆ: ಇವತ್ತು ಶ್ರೀರಾಮನ ಹುಟ್ಟುಹಬ್ಬ. ಅರಮನೆಯಲ್ಲಿ ಉತ್ಸವ. ಇನ್ನೇನು ರಾಜನ ಬೇಟೆಗಾರರು ಬರುತ್ತಾರೆ. ಜಿಂಕೆಗಳನ್ನು ಬೇಟೆಯಾಡುತ್ತಾರೆ. ಹಾಗಾಗಿ ದುಃಖವಾಗುತ್ತಿದೆ.

ಆಗಲೇ ಬೇಟೆಗಾರರು ಕಾಣಿಸಿಕೊಂಡರು. ಬಾಣ ಬಿಟ್ಟರು. ಬಲೆ ಬೀಸಿದರು. ಗಂಡು ಜಿಂಕೆ ಸಿಕ್ಕಿಕೊಂಡಿತು. ಅದನ್ನು ಒಯ್ದರು.

ಹೆಣ್ಣು ಜಿಂಕೆ ಅಯೋಧ್ಯೆಯ ಅರಮನೆಯ ಪಾಕಶಾಲೆಯ ಬಳಿ ಬರುತ್ತದೆ. ರಾಮನ ತಾಯಿ ಕೌಸಲ್ಯಾದೇವಿ ಅಡುಗೆಯ ಉಸ್ತುವಾರಿ ನೋಡುತ್ತಿದ್ದಾಳೆ. ಅವಳ ಬಳಿ ಹೋಗಿ ಹೆಣ್ಣು ಜಿಂಕೆ ಬೇಡುತ್ತದೆ. ನನ್ನ ಗಂಡನನ್ನು ಬೇಡರು ಹಿಡಿದು ತಂದಿದ್ದಾರೆ. ದಯವಿಟ್ಟು ಬಿಟ್ಟುಕೊಡಿ.

ಕೌಸಲ್ಯೆ: ಈಗಾಗಲೇ ಅದನ್ನು ಕತ್ತರಿಸಿ ಆಗಿದೆ. ಕಡಾಯಿಯಲ್ಲಿ ಮಾಂಸ ಬೇಯುತ್ತಿದೆ.

ಹರಿಣ: ಹೋಗಲಿ. ಕಡೇ ಪಕ್ಷ ಅವನ ಚರ್ಮವನ್ನಾದರೂ ಕೊಡಿಸಿ. ಮುತ್ತುಗದ ಮರದ ಮೇಲೆ ಅದನ್ನು ಹಾಕಿ ಅದನ್ನೇ ನೋಡುತ್ತ ಸಾಂತ್ವನ ಮಾಡಿಕೊಳ್ಳುತ್ತೇನೆ.

ಕೌಸಲ್ಯೆ: ಇಲ್ಲ. ಬಾಲಕ ರಾಮಚಂದ್ರನ ಆಟಕ್ಕೆ ಅದನ್ನು ಖಂಜರ ಮಾಡಬೇಕಿದೆ. ಹಾಗಾಗಿ ಅದನ್ನು ಕೊಡಲು ಬರುವುದಿಲ್ಲ.

ಜಿಂಕೆ ಮರಳುತ್ತದೆ. ಮುತ್ತುಗದ ಮರದ ಬಳಿ ನಿಂತು ಮುಂದೆ ಯಾವಾಗ ಅರಮನೆ ಕಡೆಯಿಂದ ಖಂಜರದ ಶಬ್ದ ಬರುತ್ತದೋ ಆಗೆಲ್ಲ ಆ ದಿಕ್ಕಿಗೆ ಮುಖ ತಿರುಗಿಸಿ ನೋಡುತ್ತಿರುತ್ತದೆ.

ಇಷ್ಟು ಕಥೆ. ಲೋಕದಲ್ಲಿ ಗಣ್ಯರ, ಆಢ್ಯರ ಕಷ್ಟಸುಖಗಳು ಪ್ರಸಿದ್ಧವಾಗಿರುತ್ತವೆ. 'ಶ್ರೀರಾಮನ ಕಷ್ಟಸುಖವೂ ಹಾಗೆ, ನಮ್ಮ ಮಹಾಕಾವ್ಯ ರಾಮಾಯಣವೇ ಆಗಿಬಿಟ್ಟಿದೆ. 'ಮಣ್ಣು ಕೂಡ ಮಘಮಘಿಸುತಿತ್ತು ಆ ರಾಮನು ಹುಟ್ಟಿದ ದಿನಾ' ಎಂದು ಬರೆಯುತ್ತಾರೆ ವರಕವಿ ಬೇಂದ್ರೆ, ತಮ್ಮ 'ಸೀತಾಯಣ' ಎಂಬ ಪದ್ಯದಲ್ಲಿ, ತುಸು ವ್ಯಂಗ್ಯವಾಗಿ. ಆದರೆ ಸಣ್ಣವರ, ಸಾಮಾನ್ಯರ ಸುಖದುಃಖಗಳು ತಿಳಿಯದೇ

ಹೋಗುತ್ತವೆ. ಜಿಂಕೆಯ ಸಂಕಟ ಹಾಗೆ. ಈ ಕಥೆಯನ್ನು ಕೇಳಿದ ಮೇಲೆ ನಮಗೆ ಜಿಂಕೆಯ ನೋವು ತಿಳಿಯಿತು. ಆದರೆ ಇರುವೆ ಕಪ್ಪೆ ಕಾಗೆ ಹಾವು ಹುಳ ಹುಲ್ಲು ಇನ್ನೆಷ್ಟೆಷ್ಟೋ ಜೀವ ಜಂತು ಸಸ್ಯಗಳ ನೋವು ಗೊತ್ತೇ ಇಲ್ಲ. ಕಲ್ಲಿಗೂ ಒಂದು ನೋವಿರಬಹುದೆ? ಗೊತ್ತಿಲ್ಲದಿರುವುದು ಎಷ್ಟೊಂದಿದೆ!

ಈ ಜಗತ್ತಿನಲ್ಲಿರುವ ಹಿಂಸೆಗೆ ಬಹುಪಾಲು ಕಾರಣ ಮನುಷ್ಯ ತಾನು ವಿಶ್ವದ ಕೇಂದ್ರ ಎಂದು ತಿಳಿದಿರುವುದು, ಜೀವ ವಿಕಾಸದಲ್ಲಿ ತಾನು ಅತ್ಯಂತ ಶ್ರೇಷ್ಠ, ಎಲ್ಲವೂ ತನ್ನ ಪ್ರಯೋಜನಕ್ಕಾಗಿಯೇ ಇರುವಂಥದು ಎಂದು ತಿಳಿದಿರುವುದು, ಮಾತಾಡುವ ಅವನ ಕಷ್ಟ, ಸುಖವಷ್ಟೇ ಮುಖ್ಯ! ಉಳಿದ ಜೀವಗಳದ್ದು ಅಮುಖ್ಯ ಎಂದುಕೊಂಡಿರುವುದು. ಸ್ವತಃ ಮನುಷ್ಯನ ಸಂಕಟದ ಮೂಲವೂ ಈ ಸ್ವಕೇಂದ್ರಿಕತೆಯೇ. ಇವನು ಈ ಸೃಷ್ಟಿಯ ಶ್ರೇಷ್ಠ ಕುಸುಮ ಎಂದು ಹೇಳಿರುವುದಾದರೂ ಯಾರು? ತನಗೆ ತಾನೇ ಹೇಳಿಕೊಂಡು ಆ ಮೇಲರಿಮೆಯನ್ನು ಚಲಾಯಿಸುತ್ತಿದ್ದಾನೆ, ಅಷ್ಟೆ.

ಉದಾಹರಣೆಗೆ, ರಸ್ತೆ 'ಅಗಲೀಕರಣ'ಕ್ಕಾಗಿ ಒಂದು ಮರವನ್ನು ಕಡಿಯುವಾಗ ಸರ್ಕಾರದ್ದೋ ಕಾಡಿನ ಇಲಾಖೆಯದೋ ಅನುಮತಿ ತೆಗೆದುಕೊಳ್ಳುತ್ತೇವೆ. ಅಲ್ಲಿಗೆ ನಾವು ಸರಿ. ಆದರೆ ಆ ಮರಕ್ಕೆ ಬರುತ್ತಿದ್ದ ಹಕ್ಕಿಗಳ, ಅಲ್ಲಿ ಗೂಡು ಕಟ್ಟಿದ್ದ ಇರುವೆಗಳ, ಬಿಲ ಮಾಡಿಕೊಂಡಿದ್ದ ಇಲಿ ಹಾವುಗಳ ಅನುಮತಿ ಪಡೆಯುತ್ತೇವೆಯೆ? ಅಥವಾ ಆ ಮರದ ಜೀವವನ್ನಾದರೂ ಲೆಕ್ಕಿಸುತ್ತೇವೆಯೆ?

ಜೀವಿಸಲಿಕ್ಕಾಗಿಯೇ ಇರುವ ಹಿಂಸೆ ಬೇರೆ ಅದು, ಅನಿವಾರ್ಯವಾದ್ದು. ಜಿಂಕೆಯ ಕಥೆಯಲ್ಲಿ ರಾಮನಂಥ ರಾಮನ ಹುಟ್ಟುಹಬ್ಬದ ಹಿಂದೆಯೇ ಎಷ್ಟು ಹಿಂಸೆ ಅಡಕವಾಗಿದೆ ಎಂಬುದು ನಮ್ಮನ್ನು ಮೂಕಗೊಳಿಸುತ್ತದೆ. ಜೀವದಿಂದಲೇ ಜೀವ ಜೀವಿಸುವುದು ಎಂಬ ಮಾತು ಇದೆ. ಬಾಲೆಯಾದ ನನ್ನ ಮಗಳು ಕೇಳುತ್ತಾಳೆ: 'ನಾವು ಸಸ್ಯಾಹಾರಿಗಳೋ ಮಾಂಸಾಹಾರಿಗಳೋ?'. 'ನಾವು ಸಸ್ಯಾಹಾರಿಗಳು' ಎನ್ನುತ್ತೇನೆ ನಾನು. 'ಹಾಗಾದರೆ ನಾವು ಬೆಂಡೇಕಾಯಿ, ಬೀನ್ಸ್ ಹೆಚ್ಚುತ್ತೇವೆ. ಕೊತ್ತಂಬರಿ ಸೊಪ್ಪನ್ನು ಕಚಕಚ ಕೊಚ್ಚುತ್ತೇವೆ. ಸಸ್ಯಕ್ಕೆ ಜೀವವಿಲ್ಲವೆ?' ಎನ್ನುತ್ತಾಳೆ. 'ನಾವು ಸಸ್ಯಾಹಾರಿಗಳು ಎಂದದ್ದೇ ಹೊರತು ಜೀವಕ್ಕೆ ನೋವು ಮಾಡುವುದಿಲ್ಲ ಎಂದಲ್ಲ' ಎನ್ನುತ್ತೇನೆ ನಾನು. ನಾವು ತಿನ್ನಬಹುದಾದ ಸೊಪ್ಪು, ಕಾಳು, ಮಾಂಸ ಯಾವುದೇ ಆದರೂ ಜೀವಂತವೇ. ಇಟ್ಟಿಗೆ ಕಲ್ಲು ಮರಳುಗಳನ್ನು ತಿನ್ನಲು ಸಾಧ್ಯವಿಲ್ಲ. ಅಷ್ಟು ಹಿಂಸೆ ಅನಿವಾರ್ಯವಾದದ್ದು. ಒಂದು ಹಲ್ಲಿ ಚಿಟ್ಟೆಯನ್ನು ಹಿಡಿಯುವಾಗ ಹಿಂಸೆ ಮಾಡುತ್ತಿರುವುದಿಲ್ಲ, ತನ್ನ ಊಟ ಮಾಡುತ್ತಿರುತ್ತದೆ. ಆದರೆ ಅದನ್ನು ನೋಡುವ ನಮ್ಮ ಮಾನವೀಯತೆಯ ದೌರ್ಬಲ್ಯದಿಂದಾಗಿ ನಮ್ಮ ಮನಸ್ಸಲ್ಲಿ ಹಿಂಸೆಯ ತರಂಗಗಳೇಳುತ್ತವೆ. ನಾವು ಚಿಟ್ಟೆಯನ್ನು ಹಲ್ಲಿಯಿಂದ ತಪ್ಪಿಸಲು ಯತ್ನಿಸಿದರೆ ನಿಸರ್ಗದ ಪ್ರಕ್ರಿಯೆಯಲ್ಲಿ ಅನಗತ್ಯವಾಗಿ ತಲೆಹಾಕಿದಂತಾಗಿ ಅದೇ ಹಿಂಸೆ ಎನಿಸಿಕೊಳ್ಳುತ್ತದೆ.

ಸಸ್ಯಾಹಾರಿಗಳಿಗೆ, ಅದರಲ್ಲೂ ಹೆಂಗಳೆಯರಿಗೆ, ಮಾಂಸಾಹಾರಿಗಳ ಬಗ್ಗೆ ಒಂದು ದುರಭಿಪ್ರಾಯವಿರಲು ಸಾಧ್ಯ. ಅವರು ಕೆಟ್ಟವರು, ಕ್ರೂರಿಗಳು, ಪಾಪದ ಕುರಿ ಕೋಳಿಗಳನ್ನು ಕೊಲ್ಲುತ್ತಾರೆ ಎಂದು. ಆದರೆ ಅವರು ಕುರಿ ಕೋಳಿಗಳನ್ನು

ಬಹಳ ಪ್ರೀತಿಯಿಂದಲೇ ಸಾಕುತ್ತಾರೆ. ಅವನ್ನು ಕತ್ತರಿಸುವಾಗ ಅವುಗಳಿಗೆ ನೋವು ಮಾಡಬೇಕು ಎಂಬುದು ಅವರ ಉದ್ದೇಶವಾಗಿರುವುದಿಲ್ಲ. ತಮ್ಮ ಊಟ-ಎಂದಷ್ಟೇ ಇರುತ್ತದೆ. ಸೃಷ್ಟಿಯಲ್ಲಿ ಎಲ್ಲವೂ ತಮ್ಮ ತಮ್ಮ ಸಹಜವಾದ ಊಟ ಮಾಡುವುದು ಅತ್ಯಂತ ಧಾರ್ಮಿಕವಾದ್ದೇ ಆಗಿದೆ.

ಹಾಗೆ ನೋಡಿದರೆ ಸೃಷ್ಟಿಯಲ್ಲೇ ಅಂತರ್ಗತವಾಗಿ ಹಿಂಸೆ ಇದೆ. 'ನಿಸರ್ಗ ಕೊಲೆಗಡುಕ' ಎನ್ನುತ್ತದೆ ತಾವೋ ಧರ್ಮ. ಯಾಕೆಂದರೆ ಸಾವು ಇದೆಯಲ್ಲವೆ? ಆದರೆ ಅದೆಲ್ಲ ಅತೀತವಾದ ಪ್ರಶ್ನೆ. ಅಹಂಕಾರ ಪ್ರೇರಿತ ಮನುಷ್ಯನ ಉದ್ದೇಶಪೂರ್ವಕ ಹಿಂಸೆಯಷ್ಟೇ ನಮ್ಮನ್ನು ಬಾಧಿಸುವುದು.

ಎಲ್ಲ ಜೀವವೂ (ಜಡವೂ ಕೂಡ) ಈ ಜಗತ್ತಿನ ಕೇಂದ್ರವಾಗಿರುವಾಗ ಸಣ್ಣದು ದೊಡ್ಡದು ಎಂದು ಇರುವುದಿಲ್ಲ. ಎಲ್ಲವೂ ತಮ್ಮೊಳಗೇ ತಾವು ಇರುತ್ತವೆಯಾಗಿ ಹೋಲಿಕೆ ಹೇಗೆ ಸಾಧ್ಯ? ಹಾಗೆ ನೋಡಿದರೆ ಸಣ್ಣದು, ಸಾಮಾನ್ಯವಾದ್ದು ಇವೇ ಹೆಚ್ಚು ಮೂರ್ತವಾದ್ದು. ಬದುಕಿನ ಆಶ್ರಯ ತಾಣ ಅದು. 'ಸಣ್ಣ ವಸ್ತುಗಳಲ್ಲಿ ಮನಸ್ಸು ತಂಗಲಿ, ಅವುಗಳಲ್ಲಿ ಹೆಚ್ಚಿನ ಸಮಗ್ರತೆಯಿರುತ್ತದೆ' ಎನ್ನುತ್ತದೆ ತಾವೋ.

ಇದೆಲ್ಲ ತನ್ನಷ್ಟಕ್ಕೆ ತಾನಿರುವ ಅಧ್ಯಾತ್ಮದಂತೆ, ಕಾವ್ಯಾತ್ಮಕತೆಯಂತೆ ಕೇಳಬಹುದಾದರೂ ಇದು ಬಲವಾದ ಒಂದು ರಾಜಕೀಯ ನಿಲುವು ಕೂಡ ಆಗಿರುತ್ತದೆ. ಯಾಕೆಂದರೆ ಈಗಿನ ಎಲ್ಲ ಒಲವೂ ದೊಡ್ಡದು, ಜಾಗತೀಕವಾದದ್ದು ಇವುಗಳ ಕಡೆಗಿದೆ. ಈ ಸ್ವಯಂ (selfhood)ದ ಪರವಾದ ನಿಲುವು ಜಾಗತೀಕರಣದ ಪ್ರಕ್ರಿಯೆಗೆ ಇರುವ ದೊಡ್ಡ ಸವಾಲೆನಿಸುತ್ತದೆ. ಹಾಗಾಗಿ ಜಾಗತೀಕರಣ ಅತ್ಯಂತ ತೀವ್ರವಾಗಿ ದ್ವೇಷಿಸುವುದು ಇದನ್ನೇ. ಜಾಗತೀಕರಣದ ಅಧ್ವರ್ಯುವಾದ ಒಂದು ಬಹುರಾಷ್ಟ್ರೀಯ ಕಂಪೆನಿ ಇನ್ನೊಂದು ಪ್ರತಿಸ್ಪರ್ಧಿ ಕಂಪೆನಿಯನ್ನು ಇಷ್ಟು ದ್ವೇಷಿಸುವುದಿಲ್ಲ.

ವಿಶಾಲ, ವಿಸ್ತಾರ ಎನ್ನುವುದು ಈಗಿನ ಆದರ್ಶ. ಆದರೆ ಮನುಷ್ಯ ಹೆಚ್ಚಾದಷ್ಟೂ ಕಡಿಮೆಯಾಗುತ್ತಾನೆ, ಕಡಿಮೆಯಾದಷ್ಟೂ ಹೆಚ್ಚಾಗುತ್ತಾನೆ- ಅಂದರೆ ಒಬ್ಬ ತನ್ನಷ್ಟಿರುವುದೇ ಅವನ ಅತ್ಯಂತ ಹೆಚ್ಚಿನ ಪ್ರಮಾಣ! ತಾನು ಎನ್ನುವುದು ಪ್ರಪಂಚಕ್ಕಿಂತ ದೊಡ್ಡದು. ಇದೊಂದು ಅತೀ ಕಷ್ಟದ ವಿಪರ್ಯಾಸ. ಜಾಸ್ತಿಯಿರುವುದು ಯಾವುದು ತಾನೆ ಒಳ್ಳೆಯದು? ದೇಹದ ತೂಕದಿಂದ ಹಿಡಿದು ಹಣ, ಖ್ಯಾತಿ, ಕಡೆಗೆ ಒಳ್ಳೆಯತನ ಕೂಡ ಜಾಸ್ತಿಯಾದದ್ದು ಕೆಟ್ಟದೇ. 'ಜ್ಞಾನ ಗಳಿಸುತ್ತ ಒಬ್ಬನು ಹೆಚ್ಚಾಗುವನು, ತನ್ನ ತಾ ಗಳಿಸುತ್ತ ಕಡಿಮೆಯಾಗುವನು'.

ಮನುಷ್ಯನ ಪರ-ಅಕ್ರಮದ ಆಸೆಯಿಂದ ಹಿಂದೆ ಆದ ವಸಾಹತೀಕರಣ, ಅದರ ಈಗಿನ ರೂಪವಾದ ಜಾಗತೀಕರಣ ಇವುಗಳಿಗೆ ಪರ್ಯಾಯವಾಗಿ ತಾನು ನಿಂತಿರುವ ಎರಡು ಹೆಜ್ಜೆಯೇ ಭೂಮಿ ಎಂದು ಅರಿಯುವುದು, ಮಿತಿಯಲ್ಲಿ ಅರಳುವುದು ಸ್ವ-ಸ್ಥ ಧೋರಣೆ. ತಾವೋನಲ್ಲಿ 'ಹಳ್ಳಿಸ್ವರ್ಗ' ಎಂಬ ಕಲ್ಪನೆಯಿದೆ. ಇದು ಗಾಂಧಿಯವರ ಗ್ರಾಮಸ್ವರಾಜ್ಯವೇ ಇರಬಹುದು.ಈ ಪದಾರ್ಥವಾದೀ ಭೋಗವಾದೀ ತಂತ್ರಜ್ಞಾನದ ನಾಗರೀಕತೆಯೇ ಕೆಡುಕಿನ ದೊಡ್ಡ ಅವತಾರವಾಗಿದೆ. ಎಲ್ಲರೂ ಇಂಥ ನಾಗರೀಕತೆಯ ಗುಲಾಮರೇ ಆಗಿದ್ದೇವೆ. ಗಾಂಧಿಯವರ ಹಿಂದ್ ಸ್ವರಾಜ್ಯವೆಂದರೆ

ಈ ಗುಲಾಮಗಿರಿಯಿಂದಲೇ ಬಿಡುಗಡೆ. ಹಿಂಸೆ ಮತ್ತು ಕೆಡುಕನ್ನು ಇಷ್ಟು ಅಗಾಧವಾಗಿ ಹೆಚ್ಚಿಸಿರುವ ಈ ನಾಗರಿಕತೆ ಮನುಷ್ಯನ ಒಳಿತಿನ ಸಾಮರ್ಥ್ಯವನ್ನು ಎಷ್ಟು ವೃದ್ಧಿಸಿದೆ ಎನ್ನುವುದನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ವಕ್ತಾರರು ನಮಗೆ ತಿಳಿಸಿಕೊಡಬಲ್ಲರು.

ಮೈಸೂರು ಆಕಾಶವಾಣಿಯಲ್ಲಿ ಒಬ್ಬ ಕೂಲಿ ಮಹಿಳೆ ಸಂದರ್ಶನದಲ್ಲಿ ಹಿಂದಿನ ಕಾಲಕ್ಕಿಂತಲೂ ಈಗ ಎಷ್ಟು ಉತ್ತಮವಾಗಿದೆ ಎಂದು ತನ್ನ ಅನುಭವವನ್ನು ಹೇಳಿದಳು. ಹಿಂದಾಗಿದ್ದರೆ ಕೂಲಿ ಮಾಡಿ ಬಂದು ರಾಗಿ ತಂದು ಅದನ್ನು ಬೀಸಿ ಹಿಟ್ಟು ಮಾಡಿ ಉಣ್ಣುವ ಹೊತ್ತಿಗೆ ನಡುರಾತ್ರಿಯಾಗುತ್ತಿತ್ತು. ಈಗಲಾದರೋ ಒಂದು ರೂಪಾಯಿಗೆ ಗಿರಣಿಯಲ್ಲಿ ಹಿಟ್ಟು ಮಾಡಿಕೊಡುತ್ತಾರೆ, ಕಾಲ ತುಂಬ ಚೆನ್ನಾಗಿದೆ ಎಂದಳು ಆಕೆ. ಹಿಟ್ಟಿನ ಗಿರಣಿಗೆ ನಾವು ನಮಸ್ಕರಿಸದಿರುವುದು ಹೇಗೆ? ಅಲ್ಲಿಂದ ಹಿಡಿದು ನಾನಾ ರೀತಿಯಲ್ಲಿ ನಮ್ಮ ನೋವು ಶಮಿಸುವ, ಪ್ರಾಣ ಉಳಿಸುವ ವಿಜ್ಞಾನ ತಂತ್ರಜ್ಞಾನಗಳನ್ನು ದ್ವೇಷಿಸುವುದಾದರೂ ಹೇಗೆ? ಆದರೆ ಇದು 'ದೈವರೂಪೀ'ಸೈತಾನ ಕೂಡ ಆಗಿದೆ! ಒಳಿತು ಕೇಡುಗಳು ಒಂದನ್ನೊಂದು ಆಹಾರವಾಗಿಸಿಕೊಂಡು ಹೆಚ್ಚುತ್ತವೆ! ಲಾವೋತ್ಸೆಗೆ, 'ಗುರುವೇ ನಾನು ಒಳ್ಳೆಯವನಾಗುತ್ತೇನೆ' ಎಂದರೆ 'ಬೇಡ ಸುಮ್ಮನಿರು' ಎಂದಾನು. ಒಳ್ಳೆಯವನಾಗುವ, ಒಳಿತನ್ನು ಮಾಡುವ ಉದ್ದೇಶ ನೋಡಿದರೆ ಬೆಚ್ಚಿಬಿದ್ದಾನು!

ತಂತ್ರಜ್ಞಾನವೂ ಇದೇ ರೀತಿ ಲೋಕೋಪಕಾರಿಯಾಗಿರುವುದು!

ತಾವೋನಲ್ಲಿ ಒಂದು ಪುಟ್ಟ ಕತೆ ಇದೆ. (ಸುಂದರ ಎನ್ನುವ ಅಗತ್ಯವಿಲ್ಲವಲ್ಲವೆ?) ತೋಟದ ಬಾವಿಯಿಂದೊಬ್ಬ ನೀರನ್ನು ಮೊಗೆದು ಮೊಗೆದು ಗಿಡಗಳಿಗೆ ಹಾಕುತ್ತಿರುತ್ತಾನೆ. ಅನುಭವಸ್ಥನೊಬ್ಬ ಇದನ್ನು ನೋಡಿ ಹೇಳುತ್ತಾನೆ: 'ನೀನು ಕಷ್ಟಪಡುತ್ತಿದ್ದೀಯ. ನಾನು ಒಂದು ಊರಲ್ಲಿ ಒಂದು ಸಾಧನ ನೋಡಿದೆ. ಆಧಾರದ ಮೇಲೆ ಕೂರಿಸಿದ ಉದ್ದ ದೋಟಿಯ ತುದಿಗೆ ಬಕೆಟ್ ಕಟ್ಟಿ ಈ ಕಡೆಯಿಂದ ದೋಟಿಯನ್ನು ಆರಾಮವಾಗಿ ಕಾಲಲ್ಲಿ ಒತ್ತಿದರೆ ಬಕೆಟ್‌ನಲ್ಲಿ ನೀರು ತಾನಾಗೇ ಮೇಲೆ ಬರುತ್ತೆ. ಅದು ಬಹಳ ಸುಲಭ'. ಅದಕ್ಕೆ ತೋಟಿಗ ಹೇಳುತ್ತಾನೆ. 'ಗೊತ್ತು ಅದಕ್ಕೆ ಯಾತ ಎಂದು ಹೆಸರು. ಕೆಲಸ ಬೇಡ ಅಂತಲೇ ಬಿಟ್ಟಿದ್ದೇನೆ ಅದನ್ನು. ಯಾಕೆಂದರೆ ನನ್ನ ಕೆಲಸ ಕಾರ್ಯಗಳಲ್ಲಿ ನಾನು ಯಂತ್ರ ಉಪಯೋಗಿಸಿದರೆ ನನ್ನ ಹೃದಯ ತಂತ್ರಿಯಾಗುತ್ತದೆ. ಅದರಿಂದ ನನ್ನ ಸ್ವಭಾವ ಕೆಡುತ್ತದೆ. ಆಮೇಲೆ ಸರ್ವನಾಶ'.

ತಂತ್ರಜ್ಞಾನ ಮತ್ತು ಅದರಿಂದ ಸೃಷ್ಟಿಯಾಗಿರುವ ಈ ಪ್ರಚಂಡವಾದ ಅಗಾಧವಾದ ವಸ್ತುಲೋಕ– ಹಾಗೆ ನೋಡಿದರೆ ನಮ್ಮೊಳಗಿನ ಆಸೆಯಿಂದಲೇ ಇದಿಷ್ಟೂ ಬಂದಿರುವುದು ಮತ್ತು ನಮ್ಮ ಇಚ್ಛೆಯಿಂದಲೇ ಮುಂದುವರೆಯುತ್ತಿರುವುದು ಎಂಬುದು ಮಾತ್ರ ಸತ್ಯ. ನಾನು No ಎಂದರೆ ಇದ್ಯಾವುದೂ ಇರುವುದಿಲ್ಲ. ಆದರೆ ನಾನು No ಎನ್ನಲಾರೆ. ಯಾಕೆಂದರೆ ಇದು ನನಗೆ ಬೇಕಾದುದೇ ಮತ್ತು ಇದರ ಬಗ್ಗೆ ನನಗೆ ಆಸೆ! 'ಪರ್ವತವೇ ಹೋಗಿ ಸಮುದ್ರಕ್ಕೆ ಬೀಳು' ಎಂದರೆ ಅದು ಬೀಳುತ್ತದೆ ಎನ್ನುತ್ತಾನೆ ಕ್ರಿಸ್ತ. ಪರ್ವತ ಹೇಗೆ ಚಲಿಸಿ ಸಮುದ್ರಕ್ಕೆ ಬೀಳುತ್ತದೆ ಎಂದು ನಮಗೆ ಸಂಶಯ ಬರುವುದಕ್ಕೆ ಕಾರಣ, ಅದು ನಮಗೆ ಬೇಕಾಗಿಲ್ಲ ಎಂಬುದೇ. Evil ನನಗೆ ಬೇಕು, ಹಾಗಾಗಿ ಅದನ್ನು ಗುರುತಿಸಿ, ಹೆಸರಿಸಿ ಸ್ಥಿರೀಕರಿಸುತ್ತೇನೆ. ಮತ್ತು

ಪ್ರತಿಕ್ರಿಯೆಗಳಿಂದ ಅದನ್ನು ಬೆಳೆಸುತ್ತ ಹೋಗುತ್ತೇನೆ! 'ಕಂಗಳ ತೂಕ ಲಿಂಗಕ್ಕೆ ಭಾರ' ಎನ್ನುತ್ತಾರೆ ಅಲ್ಲಮ. ಕಂಗಳ ತೂಕವನ್ನಷ್ಟೇ ಅಲ್ಲ, ನಾವು ಕೈಯಾಡಿಸಿ, ಕೈ ಎತ್ತಿ, ಕೈ ಮಾಡಿ ಕೆಡುಕನ್ನು ಅಗಾಧಗೊಳಿಸುತ್ತೇವೆ.

ಅದು ನನ್ನ ಹೊರಗಿನವರು ಎಂದು ತಿಳಿದಾಗ ಈ ಎಲ್ಲ ಪ್ರತಿಕ್ರಿಯೆ ಸಾಧ್ಯವಾಗುತ್ತದೆ. ನನಗಿರುವ ಹತ್ತಾರು ಸಾವಿರದ ಆದಾಯ ನನಗೆ ಸಾಲದು. ಇನ್ನು ಕೆಲವು ಸಾವಿರ ಬೇಕು ಎಂಬ ಆಸೆ ನನಗೆ. ದಿನಕ್ಕೆ ಹತ್ತಾರು ಕೋಟಿ ಆದಾಯವಿರುವವರು ಈ ನಾಡಿನಲ್ಲಿದ್ದಾರೆ. ಅವರಿಗೂ ಸಾಲದು, ಇನ್ನೂ ಕೆಲವು ಕೋಟಿ ಬೇಕು. ಎರಡರೊಳಗೂ ಇರುವುದು ಧನದಾಹವೇ ತಾನೆ. ಹಾಗಾಗಿ ಕೋಟಿಯಾಸೆಯಿಂದ ಈ ಭೂಮಿ ನಾಶ ಮಾಡುತ್ತಿರುವವರು ನನ್ನ ಹೊರಗಿನವರೇ?

ಹಾಗಾಗಿ,

೧. Evil ಎಂದು ಕರೆಯುತ್ತಿರುವುದು ನಾನಿಟ್ಟ ಹೆಸರು ಅಷ್ಟೇ. ತನ್ನಷ್ಟಕ್ಕೆ ಅದು ಏನೋ ಹಾವು ವಿಷಜಂತು ಎನ್ನುತ್ತಿರುವವನು ನಾನು. ಸ್ವತಃ ಹಾವು ತನ್ನನ್ನು ಹಾಗೆ ತಿಳಿಯದು, ಹುಲಿ ದುಷ್ಟಮೃಗವೆನ್ನುವುದು ನಮಗೆ; ಅದರ ಮರಿಗಳಿಗೆ ಅದು ತಾಯಿ.

೨. ಇದ್ಯಾವುದೂ ನನ್ನ ಹೊರಗಿನದಲ್ಲ.

ಈ ದೃಷ್ಟಿಕೋನದಿಂದ ಕೇಡಿನ ಬಗ್ಗೆ ಒಂದು ವಸ್ತುನಿಷ್ಠ ತಿಳಿವಳಿಕೆ ಮತ್ತು ಸಹಾನುಭೂತಿ ಸಾಧ್ಯ. ಆ ಧೋರಣೆ ಕೇಡನ್ನು ಸುಮ್ಮನಿರಿಸಬಲ್ಲದು, ನಿಧಾನವಾಗಿ ಕರಗಿಸಬಲ್ಲದು.

ಅಂದರೆ ಈ ಧೋರಣೆ ರಾಜಕೀಯ ಕ್ರಿಯೆಯ ವಿರುದ್ಧವಿದೆಯೇ? ಅಲ್ಲ. ಕ್ರಿಯೆಯೊಳಗಿನ ಮೌನದ ಬಗ್ಗೆ ಇದೆ. ಆ ಮೌನವಿರದೆ ಕ್ರಿಯೆ ನಿಷ್ಫಲವಾಗುವುದಷ್ಟೇ ಅಲ್ಲ, ತನ್ನ ಉದ್ದೇಶಕ್ಕೆ ವಿರುದ್ಧವೇ ಆಗಿಬಿಡುವುದರ ಬಗ್ಗೆ ಇದೆ.

ಸಮಾಜವನ್ನು ತಿದ್ದಬೇಕು ಎನ್ನುವವನ ದೃಷ್ಟಿ ಒಬ್ಬ ಸರ್ಜನ್‌ನಂತೆ ಇರಬಹುದೇ ಹೊರತು ಕಟುಕನಂತೆ ಅಲ್ಲ. ಅಲ್ಲದಿದ್ದರೆ ಈವರೆಗಿನ ಎಷ್ಟೊಂದು ಕ್ರಾಂತಿಗಳು, ಆಂದೋಲನಗಳು, ಪ್ರಗತಿಪರ ಚಿಂತನೆಗಳು ತಮಗೆ ವಿರುದ್ಧವಾದ್ದನ್ನೇ ಲೋಕದಲ್ಲಿ ಹೆಚ್ಚಿಸುತ್ತಿರುವಂತೆ ಕಾಣುತ್ತಿರುವುದಕ್ಕೆ ಕಾರಣವಾದರೂ ಏನು?

ಈಗ ಸಮಾಜ, ವ್ಯವಸ್ಥೆ, ಚರಿತ್ರೆಯ ಮೇಲೆ ಒಂದು ಅತಿಯಾದ ಒತ್ತು ಕಾಣುತ್ತಿದೆ. ಸಾಮಾಜಿಕತೆ ಎಂಬುದು ಮಂತ್ರವೇ ಆಗಿದೆ. ಅದಕ್ಕೆ ವಿರುದ್ಧವಾಗಿ ವ್ಯಕ್ತಿಯ ಪಾತ್ರವನ್ನು ಪ್ರಮುಖವೆನ್ನಬೇಕು ಎಂದಲ್ಲ. ಸಮಾಜ-ವ್ಯಕ್ತಿ ಒಂದರೊಳಗೊಂದಿದ್ದು ತೋರಿಕೆಗಷ್ಟೇ ಬೇರೆ ಆ ಲಯವನ್ನು ಗ್ರಹಿಸುವುದೇ ಸರಿಯಾದ ದಾರಿ. ಈ ದಾರಿಯಿಂದಷ್ಟೇ ಏನಾದರೂ ತಿದ್ದುಪಡಿ ಸಾಧ್ಯ ಎನ್ನುವ ನೋಟ ಗಾಂಧಿಯವರದಿರಬಹುದು.

ಶಿವನನ್ನು ಲಯಕರ್ತನೆನ್ನುತ್ತೇವೆ. ಎಲ್ಲವನ್ನೂ ಸೃಷ್ಟಿಸುವ ಡಮರುವಿನ ಲಯ, ಮತ್ತೊಂದು ನಾಶ. ಈ ಎರಡರ್ಥಗಳೂ ಬೇರೆ ಬೇರೆ ಅಲ್ಲ. ವ್ಯಕ್ತಿ-ಸಮಾಜ (ಅಥವಾ ನನ್ನ ಪ್ರಿಯ ವಿಷಯ ಕವಿತೆಯಲ್ಲಿ ಶಬ್ದ-ಅರ್ಥ) ಯಾವುದೊಂದೂ 'ಲಯವಾದರೆ ಲಯವಿರುತ್ತದೆ'.

ಹೊರಗಿನ ಸಮಾಜ, ಆಳುವ ವರ್ಗ, ಅಥವಾ ಅಧಿಕಾರವುಳ್ಳ ವ್ಯಕ್ತಿ ಪ್ರಬಲ, ನಾನು ದುರ್ಬಲ ಎನ್ನುವುದೊಂದು ಭ್ರಮೆ. ಒಬ್ಬ ಪ್ರಧಾನಿ ಮತ್ತು ರಸ್ತೆ ಮೇಲಿರುವ ಸಾಮಾನ್ಯ ಸಮಾನವಾಗಿ ಶಕ್ತರು ಅಥವಾ ದುರ್ಬಲರು. ಇಬ್ಬರೂ ಪರಸ್ಪರಾವಲಂಬಿಗಳು. ಮನುಷ್ಯನ ದುರಹಂಕಾರ ಅಥವಾ ಅಸಹಾಯಕತೆಯಲ್ಲಿ, ದೈನ್ಯ ದುರಾಸೆಗಳಲ್ಲಿ ಎಲ್ಲರಿಗೂ ಒಂದು ಸಮಾನತೆಯಿದೆ. ಈ ತಿಳಿವಿನೊಂದಿಗಷ್ಟೇ ಯಾವುದೇ ತಿದ್ದುಪಡಿ ಆಗಬಹುದಾದ್ದು.

(ಸಾಭಾರ : ಪ್ರಜಾವಾಣಿ)

* * *

ಸಂತಾಪ

ಶ್ರೀ ಡಾ.ಪಂಡಿತ್ ಪುಟ್ಟರಾಜ ಗವಾಯಿಗಳು ಉಭಯ ಗಾಯನ ವಿಶಾರದ, ಸಕಲ ವಾದ್ಯ ಕಂಠೀರವ ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಸಾರಂಗಿ, ಪಿಟೀಲು, ವೀಣೆ, ಮ್ಯಾಂಡೋಲಿನ್, ಸರೋದ್, ತಬಲ, ಹಾರ್ಮೋನಿಯಂ, ಸಂತೂರ್, ಸಿತಾರ್ ಇತರೆ ವಾದ್ಯಗಳನ್ನು ಅತ್ಯಂತ ಸುಶ್ರಾವ್ಯವಾಗಿ ನುಡಿಸುತ್ತಿದ್ದದ್ದು ಅವರ ವಿದ್ವತ್ತಿಗೆ ಸಾಕ್ಷಿ. ಹಳ್ಳಿಹಳ್ಳಿ ತಿರುಗಿ, ಭಿಕ್ಷೆ ತಂದು ಅಂಧರ ಬಾಳಿಗೆ ಬೆಳಕು ನೀಡಿದ ಸಾಧಕರಿವರು. ಅಂಧರಿಗೆ ಸಂಗೀತ ಹೇಳಿಕೊಟ್ಟರು. ಸ್ವಾವಲಂಬನೆಯ ಬದುಕನ್ನೂ ಕಟ್ಟಿಕೊಟ್ಟರು. ಅವರ ಒಂದೇ ಆಸೆಯೆಂದರೆ, ಆಶ್ರಮದ ಕೆಲಸ ಉಜ್ವಲವಾಗಿ ನಡೆಯಬೇಕೆಂಬುದು. ಅದಕ್ಕಾಗಿ ತಮ್ಮ ಜೀವನವನ್ನೇ ಧಾರೆಯೆರೆದರು. ಇವರು ಕಳೆದ ಸೆಪ್ಟಂಬರ್ ೧೭ ರಂದು ತಮ್ಮ ೯೭ ನೇ ವಯಸ್ಸಿನಲ್ಲಿ ಅಮರರಾದರು. ಪಂಡಿತ್ ಪುಟ್ಟರಾಜ ಗವಾಯಿಗಳಿಗೆ ಜನಪದ ವಿಚಾರವು ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಟ್ರಸ್ಟಿನ ಪ್ರಾರಂಭದ ಸೇವಾ ಕಾರ್ಯವಾದ ಕರುಣಾಗೃಹ ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ಅದು ಕೂಡ ತನ್ನ ಆಯಾಮವನ್ನು ಬದಲಿಸಿಕೊಂಡು ಬರುತ್ತಿದೆ. ದೇಶದಲ್ಲಿ ನಡೆದ, ನಡೆಯುತ್ತಿರುವ ಪೋಲಿಯೋ ಲಸಿಕೆ ಅಭಿಯಾನದ ಕಾರಣದಿಂದಾಗಿ ದೇಶದಲ್ಲಿಯ ಪೋಲಿಯೋ ಪೀಡಿತ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಇದೊಂದು ದೇಶದ ಬಹು ದೊಡ್ಡ ಸಾಧನೆ. ದೇಶ ಅಭಿಮಾನ ಪಡುವ ಸಾಧನೆ. ಈ ಕಾರಣದಿಂದಾಗಿ ಈಗ ಕರುಣಾಗೃಹದಲ್ಲಿ ಅಂಗವಿಕಲ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಇರುವ ಸೌಲಭ್ಯಗಳು ಅನುಪಯೋಗವಾಗಬಾರದೆಂಬ ಉದ್ದೇಶದಿಂದ ಕರುಣಾಗೃಹಕ್ಕೆ ಗ್ರಾಮಾಂತರ ಪ್ರದೇಶದ ಬಡ ಮಕ್ಕಳನ್ನು ಸೇರಿಸಿಕೊಳಳಲಾಗುತ್ತಿದೆ. ಈಗ ಕರುಣಾಗೃಹದ ಇನ್ನೊಂದು ಕಾರ್ಯಕ್ರಮ ಅನಪೇಕ್ಷಿತ ಮಕ್ಕಳಿಗೆ ಆಶ್ರಯ ಕೊಡುವ ಕೇಂದ್ರ ಆರಂಭವಾಗುತ್ತಿದೆ. ಇದಕ್ಕೆ ಸರ್ಕಾರದ ಮಾನ್ಯತೆ ದೊರೆತಿದೆ. ಸದ್ಯಕ್ಕೆ ಮಂಡ್ಯ ಜಿಲ್ಲೆಗೆ ಇಂಥ ಕೇಂದ್ರ ಕರುಣಾಗೃಹ ಒಂದೇ. ಅನಪೇಕ್ಷಿತ ಮಕ್ಕಳನ್ನು ಈ ಕೇಂದ್ರದಲ್ಲಿ ಇಟ್ಟುಕೊಂಡು ನಂತರ ಆ ಮಕ್ಕಳನ್ನು ದತ್ತು ಸ್ವೀಕಾರ ಯೋಜನೆಯಡಿಲ್ಲಿ ಅಪೇಕ್ಷಿತ ಸಮರ್ಥ ಕುಟುಂಬಕ್ಕೆ ಕೊಡಲಾಗುವುದು. ಈ ಕೇಂದ್ರ ನಡೆಸುವುದಕ್ಕೆ ಅಗತ್ಯವಾದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಓರ್ವ ವೈದ್ಯರು, ಓರ್ವ ಉನ್ನತ ಪದವೀಧರ ಸಮಾಜ ಸೇವಕಿ ಗೌರವ ಕಾರ್ಯದರ್ಶಿಯಾಗಿ ಕೆಲಸ ಮಾಡಲು ಮುಂದೆ ಬಂದಿದ್ದಾರೆ. ಈ ಕೇಂದ್ರದ ಬಗ್ಗೆ ಇನ್ನೂ ಪ್ರಚಾರವಾಗಬೇಕಿದೆ.

ಹೊಸ ಜೀವನ ದಾರಿ ಕೇಂದ್ರದಲ್ಲಿ 'ನಮ್ಮೊಳಗಿನ ನಾವು' ಎಂಬ ಹೆಸರಿನ ಶಿಬಿರ ನಡೆಯಿತು. ಈ ಶಿಬಿರದಲ್ಲಿ ಸುಮಾರು ೧೫ ಜನ ಭಾಗವಹಿಸಿದ್ದರು.

ಮೈಸೂರಿನ ವಿವಿಧ ಶಾಲಾ ಬಾಲಕರಿಗಾಗಿ 'ನಿಸರ್ಗ ಅಧ್ಯಯನ' ಶಿಬಿರ ನಡೆಯಿತು. ಈ ಶಿಬಿರದಲ್ಲಿ ೧೫ ಮಕ್ಕಳು ಭಾಗವಹಿಸಿದ್ದರು.

ತಮಿಳುನಾಡಿನ ಒಂದು ಸರ್ಕಾರೇತರ ಸಂಸ್ಥೆಯ ರಾಜೇಂದ್ರನ್ ಎಂಬುವವರು ಟ್ರಸ್ಟಿಗೆ ಭೇಟಿಕೊಟ್ಟು ಕಾರ್ಯಕ್ರಮದ ಬಗ್ಗೆ ತಿಳಿದುಕೊಂಡರು.

ಟ್ರಸ್ಟಿನ ಅಧ್ಯಕ್ಷರು ಮಂಡ್ಯ ಜಿಲ್ಲಾ ಗ್ರಾಮ ಪಂಚಾಯತ್ ಪರಿಷತ್ತಿನ ಘಟಕವನ್ನು ಉದ್ಘಾಟಿಸಿದರು.

ಬೆಂಗಳೂರಿನಿಂದ ಟ್ರಸ್ಟಿನ ಅಭಿಮಾನಿ ವೆಂಕಟ್ ಮತ್ತು ಕುಟುಂಬದವರು ಭೇಟಿಕೊಟ್ಟರು.

೨೦೧೦ ಸೆಪ್ಟಂಬರ್ ಮಾಹೆಯ ದಾನಿಗಳು

ಶ್ರೀಮತಿ ಅರ್ಚನಾ.ಬಿ.ಎಂ; ಶ್ರೀ ಕೆ.ಬಿ.ನಾರಾಯಣ; ಶ್ರೀ ಸಿ.ಎಸ್.ಬನಶಂಕರಯ್ಯ; ಶ್ರೀ ಎಂ.ಎನ್.ವೆಂಕಟೇಶ್; ಶ್ರೀ ವೆಂಕಟರಾಮನ್- ಬೆಂಗಳೂರು
ಶ್ರೀ ಎ.ಎನ್.ನಾಗರಾಜ್-ಭೀಮನಕಟ್ಟೆ
ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೮೪

– ಸುರೇಂದ್ರ ಕೌಲಗಿ



ಈಗ ಜನಪದ ಸೇವಾ ಟ್ರಸ್ಟಿನ ಗ್ರಂಥಾಲಯದಲ್ಲಿ ಎರಡು ಸಾವಿರ ಪುಸ್ತಕಗಳಿವೆ. ಈ ಗ್ರಂಥಾಲಯದಲ್ಲಿ ಇರುವ ಒಂದೊಂದು ಪುಸ್ತಕವೂ ಟ್ರಸ್ಟಿನ ಬೆಳವಣಿಗೆಯ ಕಾಲಘಟ್ಟದ ಸಂಕೇತವಾಗಿದೆ. ಕೇಂದ್ರ ಪ್ರಕಟಪಡಿಸಿರುವ ಗಾಂಧೀಯವರ ಬರಹಗಳ ಸಂಕಲನದ ೬೦ ಸಂಪುಟಗಳು ಗ್ರಂಥಾಲಯದ ಪ್ರಾರಂಭದ ಗುರುತುಗಳಾಗಿವೆ. ಈ ಮಾತಿಗೆ ಸಾಕ್ಷಿ ಆ ಗ್ರಂಥಗಳಲ್ಲಿಯ ಕೆಲವು ಸಂಪುಟಗಳ ಹಾಳೆಗಳು ಗೆದ್ದಲು ಹುಳುವಿನಿಂದ ತಿಂದದ್ದು ಮತ್ತು ಮಳೆಯ ಹನಿಯಿಂದ ಒದ್ದೆಯಾಗಿ ತಮ್ಮ ಸ್ವರೂಪ ಕೆಡಿಸಿಕೊಂಡದ್ದು. ಇದಕ್ಕೆ ಕಾರಣ ಈಗ್ಗೆ ನಲವತ್ತು ವರ್ಷಗಳ ಹಿಂದೆ ಗ್ರಂಥಾಲಯಕ್ಕೆ ತನ್ನದೇ ಆದ ಸೂಕ್ತ ವ್ಯವಸ್ಥೆ ಇಲ್ಲದೇ ಇದ್ದದ್ದು. ನಾಡು ಹೆಂಚಿನ ಜನಪದ ನಿಲಯದ ಒಂದು ಹೊರಭಾಗದಲ್ಲಿ ಗ್ರಂಥಾಲಯ ಇದ್ದುದರಿಂದ ಮಳೆ ಬಂದಾಗಲೆಲ್ಲ ಅಲ್ಲಿ ಸೋರುವುದು ಸಾಮಾನ್ಯವಾಗಿತ್ತು. ಆಗ ನೀರು ಪುಸ್ತಕಗಳ ಮೇಲೆ ಬಿದ್ದು ಒದ್ದೆಯಾಗುವುದು ತಡೆಯಲಾರದ ಸಂಗತಿಯಾಗಿತ್ತು. ರಸ್ತೆಯಲ್ಲಿಯ ಧೂಳು ಕೂಡ ಪುಸ್ತಕದಲ್ಲಿ ಬಂದು ಸೇರಿಕೊಳ್ಳುತ್ತಿತ್ತು. ಅಲ್ಲದೆ ಪುಸ್ತಕಗಳನ್ನು ಗೋಡೆಗೆ ಒರಗಿಸಿಡುವ ಸ್ಥಿತಿಯಿತ್ತು. ಹೀಗಾಗಿ ಗಾಂಧಿ ಬರಹದ ಆ ಸಂಕಲನದ ಸಂಪುಟಗಳು ತಮ್ಮ ಸ್ವರೂಪ ಕಳೆದುಕೊಳ್ಳಲು ಕಾರಣವಾಯಿತು. ಅಂದರೆ ಆಗ ಟ್ರಸ್ಟಿನ ಆರ್ಥಿಕ ಮತ್ತು ಭೌತಿಕ ಸ್ಥಿತಿಯ ಸಾಕ್ಷಿಯಾಗಿವೆ ಆ ಗ್ರಂಥಗಳು. ಆ ಗ್ರಂಥಗಳನ್ನು ಉಪಯೋಗಕ್ಕೆ ತೆಗೆದುಕೊಂಡಾಗಲೆಲ್ಲ ಕಳೆದು ಹೋದ ಟ್ರಸ್ಟಿನ ಪ್ರಾರಂಭಿಕ ದಿನಗಳು ಸಹಜವಾಗಿ ನೆನಪಿಗೆ ಬರುತ್ತವೆ. ಈ ಗ್ರಂಥಗಳನ್ನು ಬೆಂಗಳೂರಿನಲ್ಲಿರುವ ಗಾಂಧೀ ಸ್ಮಾರಕ ನಿಧಿಯಿಂದ ಖರೀದಿಸಿ ಗ್ರಂಥಾಲಯದಲ್ಲಿ ಜೋಡಿಸಿದಾಗ ಒಂದು ವಿಶೇಷವಾದ ರೋಮಾಂಚನಕಾರಿಯಾದ ಅನುಭವ ಉಂಟಾಗಿತ್ತು. ಆ ವೇಳೆಗಾಗಲೆ ಗಾಂಧೀ ವಿಚಾರ ಒಪ್ಪಿ ೧೮ ವರ್ಷಗಳಾಗಿತ್ತು. ಮತ್ತು ಗಾಂಧೀ ವಿಚಾರದ ದಾರಿಯಲ್ಲಿ ಇನ್ನೂ ಮುಂದೆ ಸಾಗಬೇಕೆಂಬ ಉತ್ಸಾಹದ ಯೌವನವಿತ್ತು. ಈ ಎಲ್ಲ ಸಂಪುಟ ಮಾಲೆ ಒಂದರ್ಥದಲ್ಲಿ ಟ್ರಸ್ಟಿನ ಗ್ರಂಥಾಲಯಕ್ಕೆ ಹಾಕಿದ ಚಿರನೂತನ ಮಾಲೆಯಂತಿದೆ. ಆದರೆ ಕಾರಣಾಂತರಗಳಿಂದ ಸಂಪುಟಗಳಿಗೆ ಆದ ನೋವಿನಿಂದ ಮನಸ್ಸಿಗೂ ಸಹ ವೇದನೆಯಾಗುತ್ತದೆ. ಆದಾಗ್ಯೂ ಅಗತ್ಯವೆಂದಾಗಲೆಲ್ಲ ಒಂದೊಂದು ಸಂಪುಟವು ಬಹಳ ಉಪಯೋಗಕರವಾಗಿ ಒದಗಿ ಬಂದಿದೆ. ದಿನಗಳು ಉರುಳಿದಂತೆ ಮತ್ತು ಜೀವನಾನುಭವ ಕೂಡಿ ಬಂದಂತೆ ಯಾವುದೇ ಸಂಪುಟವನ್ನು ಕೈಗೆತ್ತಿಕೊಂಡು ಓದಿದಾಗ ವಿಶೇಷ ಅರ್ಥ, ವಿಶೇಷ ಆನಂದ ದೊರೆಯುತ್ತದೆ. ಗಾಂಧೀಜಿ ಗತಿಸಿ ಹೋಗಿದ್ದರೂ ಈ ಸಂಪುಟಗಳಲ್ಲಿಯ ಅವರ ವಿಚಾರಗಳು ಎಷ್ಟೊಂದು ಪ್ರಸ್ತುತವಾಗಿ ಅವರನ್ನು ಅಮರರನ್ನಾಗಿ ಮಾಡಿದೆ ಎಂಬುದರ ಒಳನೋಟವು ದೊರೆಯುತ್ತದೆ. ಗ್ರಂಥಾಲಯದಲ್ಲಿರುವ ಗಾಂಧೀಜಿಯವರ 'Social service work & reform' ಎಂಬ ಗ್ರಂಥದ ಸಂಪುಟಗಳಿವೆ. ಈ ಸಂಪುಟಗಳಲ್ಲಿ ಮೊದಲೆಯ ಸಂಪುಟ ತೆಗೆದಾಗ ಟ್ರಸ್ಟಿನ ಅಭಿಮಾನಿ ಮತ್ತು ಗಾಂಧೀ ವಿಚಾರ ಪ್ರೇಮಿ ಕೆ.ಎಸ್.ನಾರಾಯಣಸ್ವಾಮಿಯವರು ೨-೦೬-೧೯೯೧ ಎಂದು ದಿನಾಂಕ ನಮೂದಿಸಿ ಸಂತೋಷ್ ಮತ್ತು ಗೀತಾರವರ

ಮದುವೆಯ ಸಂಧರ್ಬದಲ್ಲಿ ಉಡುಗೊರೆಯಾಗಿ ಕೊಟ್ಟದ್ದು ಕಂಡು ಬರುತ್ತದೆ. ಆ ಗ್ರಂಥದಲ್ಲಿ ಅವರು 'ವಿವಾಹದ ಶುಭದಿನದಂದು ಹೃತ್ಪೂರ್ವಕ ಆಶೀರ್ವಾದಗಳೊಡನೆ' ಚಿ॥ರಾ॥ಸಂತೋಷ್ ಮತ್ತು ಚಿ॥ಸೌ॥ಗೀತಾ ಅವರಿಗೆ ಎಂದು ಬರೆದದ್ದು ಕಂಡುಬರುತ್ತದೆ. ಆಗ ನಾರಾಯಣಸ್ವಾಮಿಯವರೊಂದಿಗಿನ ಸಂಪರ್ಕ, ಅವರು ಟ್ರಸ್ಟಿಗೆ ಮಾಡಿದ ಸಹಾಯ, ಜನಪದ ವಿಚಾರಕ್ಕೆ ಬರೆಯುತ್ತಿದ್ದ ಲೇಖನ, ಅವರು ಮೈಸೂರಿನಲ್ಲಿದ್ದಾಗ ಗಾಂಧೀ ಶಾಂತಿ ಪ್ರತಿಷ್ಠಾನ ಆಶ್ರಯದಲ್ಲಿ ಮಾಡುತ್ತಿದ್ದ ಕಾರ್ಯಕ್ರಮಗಳು, ನಂತರ ಅವರು ಬೆಂಗಳೂರಿಗೆ ಹೋದ ಮೇಲೆ ಅವರ ಮನೆಗೆ ಹೋಗಿ ಬರುತ್ತಿದ್ದದ್ದು, ಅವರ ಮಗ ಕೆ.ಎಸ್.ಅರುಣ್ ಮತ್ತು ನಾರಾಯಣಸ್ವಾಮಿ ಅವರೊಂದಿಗೆ ಒಟ್ಟಿಗೆ ಊಟಕ್ಕೆ ಕುಳಿತಾಗ ವಿವಿಧ ವಿಷಯಗಳನ್ನು ಮಾತನಾಡುತ್ತಿದ್ದದ್ದು, ಇತ್ಯಾದಿ ಅನೇಕ ಸಂಗತಿಗಳು ಮನದೊಳಕ್ಕೆ ಧಾವಿಸಿ ಬರುತ್ತವೆ. ಅಲ್ಲದೇ ಅವರು ಕೊಟ್ಟ ಸಂಪುಟಗಳು ಬಹಳಷ್ಟು ಉಪಯೋಗಕ್ಕೆ ಬರುತ್ತಿರುವುದರ ಮೂಲಕ ನಾರಾಯಣ ಸ್ವಾಮಿಯವರ ಆಶೀರ್ವಾದ ಮತ್ತು ನೆರವಿನ ಹಸ್ತದ ಸ್ಪರ್ಶ ಅನುಭವಕ್ಕೆ ಬರುತ್ತದೆ. ಇದರೊಂದಿಗೆ ಸಂತೋಷ್‌ರವರ ಜನ್ಮದಿನ, ಕರುಣಾಗೃಹದ ಮಕ್ಕಳೊಂದಿಗೆ ಅವರ ಬಾಲ್ಯ, ಮೇಲುಕೊಟೆ-ಬೆಂಗಳೂರು-ಮೈಸೂರುನಲ್ಲಿಯ ಶಿಕ್ಷಣ ನಂತರ ತಮ್ಮ ಯೌವನಾವಸ್ಥೆಯಲ್ಲಿ ಟ್ರಸ್ಟಿನೊಂದಿಗೆ ತಮ್ಮ ಜೀವನವನ್ನು ಹೆಣೆದುಕೊಂಡದ್ದು ಇತ್ಯಾದಿಗಳೆಲ್ಲದರ ಮಧುರ ಘಟನೆಗಳು ಕೂಡ ಜ್ಞಾಪಕಕ್ಕೆ ಬರುತ್ತದೆ. ಗ್ರಂಥಾಲಯದ ಇನ್ನೊಂದು ಸ್ಥಳದಲ್ಲಿ ಗಾಂಧೀ ಸ್ಮಾರಕ ನಿಧಿಯ ಸಂಪುಟಗಳೂ ಕೈಗೆ ಸಿಗುತ್ತವೆ. ಅರ್ಥವಿಚಾರ ಎಂಬ ೮ನೇ ಸಂಪುಟದ ಪ್ರಾರಂಭದ ಖಾಲಿ ಹಾಳೆಯಲ್ಲಿ 'ಗಾಂಧೀ ಗ್ರಂಥಮಾಲಾ ಸಂಪಾದಕೀಯ ಕಾರ್ಯಲಯದ ಗೆಳೆಯರಿಂದ' ಶ್ರೀ ಗಿರಿಜಾ ಸುರೇಂದ್ರರಿಗೆ ವಿವಾಹದ ಸಂದರ್ಭದಲ್ಲಿ ೨೪-೧೦-೧೯೬೦ ಎಂದು ನಮೂದಿಸಲಾಗಿದೆ. ಈ ಗ್ರಂಥವನ್ನು ಉಪಯೋಗಕ್ಕೆ ತೆಗೆದುಕೊಂಡಾಗ ಈ ಒಕ್ಕಣೆ ಕಣ್ಣಿಗೆ ಬಿದ್ದಾಗ ವಿವಾಹಪೂರ್ವದ ಜೀವನ ಮತ್ತು ನಂತರದ ಬೆಳವಣಿಗೆಗಳು ಎಲ್ಲವೂ ಸ್ಮರಣೆಗೆ ಬರುತ್ತವೆ. ಹೀಗೆ ಗ್ರಂಥಾಲಯದಲ್ಲಿರುವ ಒಂದೊಂದು ಪುಸ್ತಕವೂ ಜೀವನದ ಮತ್ತು ಟ್ರಸ್ಟಿನ ಆಗುಹೋಗುಗಳಲ್ಲಿಯ ಬೆಳವಣಿಗೆಯ ಗುರುತಾಗಿದೆ. 'My days among the dead are past' ಎಂಬ ಇಂಗ್ಲಿಷ್ ಕವನವನ್ನು ವಿದ್ಯಾರ್ಥಿ ಜೀವನದಲ್ಲಿ ಓದಿದ್ದು ಜ್ಞಾಪಕಕ್ಕೆ ಬಂದು ಕವಿಯ ಭಾವನೆಗಳು ಎಷ್ಟೊಂದು ಸರಿ ಎಂದು ಅನಿಸುತ್ತದೆ. ಸಹಜವಾಗಿಯೇ ಈ ಲೇಖನ ಬರೆಯುವಾಗ ರವೀಂದ್ರನಾಥ ಠಕೂರರ ಕನ್ನಡ ಗೀತಾಂಜಲಿ ಕೈಗೆ ಸಿಕ್ಕಿತು. ಅದನ್ನು ತೆಗೆದಾಗ ಅದರಲ್ಲಿ ಚಿ॥ನರಸಿಂಹನಿಗೆ ಆಶೀರ್ವಾದಗಳೊಂದಿಗೆ ಅರ್ಪಿತ ಎಂದು ೨೪-೦೪-೧೯೮೨ ಬರೆದದ್ದು ಕಣ್ಣಿಗೆ ಬಿತ್ತು. ಇದು ಕೂಡ ಕರುಣಾಗೃಹದ ಹಳೆಯ ವಿದ್ಯಾರ್ಥಿಯ ಬಾಲ್ಯ, ಯೌವನ ಮತ್ತು ವಿವಾಹದ ನಂತರ ಆತನ ಜೀವನದ ನೆನಪುಗಳ ಸುರಳಿ ಬಿಚ್ಚುತ್ತದೆ. ಆ ಪುಸ್ತಕದ 'ಅಂತರ್ಯಾಮಿಗೆ' ಎಂಬ ಕವನದ,

ವಿಕಸಿತಮಾಡೆನ್ನಾಂತರ್ಯವನು, ಅಂತರ್ಯಾಮಿಯೇ ಹೇ,
ನಿರ್ಮಲವಾಗಿಡು, ಉಜ್ವಲಮಾಡು, ಸುಂದರವಾಗಿಡು ಹೇ,
ಜಾಗೃತನಾಗಿಡು, ನಿರ್ಭಯನಾಗಿಡು, ಉದ್ಧರಿಸೆನ್ನನು ಹೇ,
ಮಂಗಲ ಕೊಡು, ನಿಸ್ಸಂಶಯವಾಗಿಡು, ವಿಕಸಿತಮಾಡೆನ್ನಾಂತರ್ಯವನು
ಅಂತರ್ಯಾಮಿಯೇ ಹೇ.

ಎಂಬ ಸಾಲುಗಳು ಗತಿಸಿಹೋದ ಮಹಾನ್ ಚೇತನಗಳ ಮಾತುಗಳು ಕಿವಿಯಲ್ಲಿ ನಿನದಿಸುತ್ತವೆ.

(ಮುಂದುವರಿಯುತ್ತದೆ...)

ಸರ್ವೋದಯ ಆಂದೋಲನದ ಮುನ್ನಡೆ

ಸರ್ವೋದಯ ಆಂದೋಲನದ ಅಗ್ರಸಂಸ್ಥೆಯಾದ ಸರ್ವ ಸೇವಾ ಸಂಘದ ಅರ್ಧವಾರ್ಷಿಕ ಅಧಿವೇಶನವು ಸೆಪ್ಟಂಬರ್ ೨೮,೨೯,೩೦ ಈ ದಿನಾಂಕಗಳಲ್ಲಿ ಮಂಡ್ಯ ಜಿಲ್ಲೆಯ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆಯಿತು. ಈ ಅಧಿವೇಶನಕ್ಕೆ ಕರ್ನಾಟಕ ಸರ್ವೋದಯ ಮಂಡಲವು ಅತಿಥೇಯ ಸಂಸ್ಥೆಯಾಗಿತ್ತು. ಅಧಿವೇಶನಕ್ಕೆ ಆಗಮಿಸಿದ್ದ ಸುಮಾರು ೩೦೦ ಪ್ರತಿನಿಧಿಗಳಿಗೆ ಊಟ, ವಸತಿ ಮತ್ತು ಇತ್ಯಾದಿ ವ್ಯವಸ್ಥೆಯನ್ನು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಏರ್ಪಡಿಸಿಕೊಟ್ಟು ತುಂಬ ಸಹಾಯ ಮಾಡಿದರು. ಅಧಿವೇಶನವು ಯಶಸ್ವಿಯಾಗಿ ನಡೆಯಿತು. ಅಧಿವೇಶನಕ್ಕೆ ಮುಖ್ಯ ಅತಿಥಿಯಾಗಿ ದೆಹಲಿಯಲ್ಲಿರುವ ಯೂಸುಫ್ ಮಹತಾಲಿ ಸಂಸ್ಥೆಯ ಸಂಯೋಜಕರಾದ ಡಾ.ಜೆ.ಜೆ.ಫಾರೀಕ್ ಬಂದಿದ್ದರು. ಫಾರೀಕ್‌ರವರು ತಮ್ಮ ಉದ್ಘಾಟನಾ ಭಾಷಣದಲ್ಲಿ ದೇಶದ ಪ್ರಚಲಿತ ವಿದ್ಯಮಾನಗಳನ್ನು ವಿಶ್ಲೇಷಿಸಿದರು. ದೇಶ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸರ್ವೋದಯ ಪರಿಹಾರವನ್ನು ಸೂಚಿಸಿದರು. ಅವರ ಭಾಷಣವು ತುಂಬ ಉದ್ಬೋಧಕ ಮತ್ತು ಮಾರ್ಗದರ್ಶಿಯಾಗಿತ್ತು. ಅಧಿವೇಶನದ ಅಧ್ಯಕ್ಷತೆಯನ್ನು ಸರ್ವ ಸೇವಾ ಸಂಘದ ಅಧ್ಯಕ್ಷರಾದ ಡಾ.ಸುಗುಣ್ ಭರಂಟ್ ವಹಿಸಿದ್ದರು. ಈ ಅಧಿವೇಶನದಲ್ಲಿ ಖಾದಿ ಉದ್ಯಮ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಪರಿಹಾರದ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಖಾದಿ ಉದ್ಯಮವನ್ನು ಸರ್ಕಾರದ ಧನ ಸಹಾಯವಿಲ್ಲದೆ ನಡೆಸುವ ಪ್ರಯತ್ನ ಮಾಡಬೇಕೆಂದೂ ಹಾಗೂ ಖಾದಿ ಪ್ರಮಾಣ ಪತ್ರವನ್ನು ಖಾದಿ ಆಯೋಗದಿಂದ ಪಡೆಯುವ ಬದಲು ಸರ್ವ ಸೇವಾ ಸಂಘದಿಂದ ಪಡೆಯಬೇಕೆಂದು ಅಭಿಪ್ರಾಯ ಪಡಲಾಯಿತು. ಖಾದಿ ಉದ್ಯಮಕ್ಕಾಗಿ ಸರ್ಕಾರವು ಏಷಿಯಾ ಅಭಿವೃದ್ಧಿ ಬ್ಯಾಂಕಿನಿಂದ ಧನ ಸಹಾಯ ಪಡೆಯಲು ಉದ್ದೇಶಿಸಿರುವುದನ್ನು ಸಭೆಯು ಖಂಡಿಸಿತು.

ಕಳೆದ ಮೂವತ್ತು ವರ್ಷಗಳಿಂದ ಮುಂಬಯಿ ಬಳಿ ಇರುವ ದೇವನಾರ ಕಸಾಯಿಖಾನೆ ಎದಿರು ಸರ್ವೋದಯ ಕಾರ್ಯಕರ್ತರು ಗೋಹತ್ಯೆ ವಿರೋಧಿಸಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಗಾಂಧೀಜಿಯವರಿಂದ ಪ್ರಥಮ ಸತ್ಯಾಗ್ರಹಿ ಎಂದು ಆಯ್ಕೆಯಾಗಿದ್ದ ವಿನೋಬಾರವರು ಈ ಸತ್ಯಾಗ್ರಹ ಕಲ್ಪನೆಯನ್ನು ಕೊಟ್ಟರು. ಈ ಸತ್ಯಾಗ್ರಹವು ಅಹಿಂಸಕ ಅಸಂಪ್ರದಾಯಿಕ ಮತ್ತು ಅರಾಜನೈತಿಕ ರೀತಿಯಲ್ಲಿ ನಡೆದುಕೊಂಡು ಬರುತ್ತಿದೆ. ಈ ಸತ್ಯಾಗ್ರಹದಲ್ಲಿ ಭಾಗವಹಿಸಲು ಇಷ್ಟ ಪಡುವ ಸತ್ಯಾಗ್ರಹಿಗಳಿಗೆ ಕರೆಕೊಡಲಾಗಿದೆ. ಈ ಸತ್ಯಾಗ್ರವು ಮುಂದುವರೆಯುವುದಕ್ಕೆ ಹಣದ ಅವಶ್ಯಕತೆಗಿಂತ ಸತ್ಯಾಗ್ರಹಿಗಳ ಅವಶ್ಯಕತೆ ಹೆಚ್ಚಾಗಿದೆ. ಇದುವರೆಗೆ ೩೦ ವರ್ಷದ ಅವಧಿಯಲ್ಲಿ ಸಾವಿರಾರು ಸತ್ಯಾಗ್ರಹಿಗಳು ಈ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಾರೆ.

ಇಲ್ಲಿಂದ ಪ್ರೇರಣೆ ಪಡೆದಿದ್ದಾರೆ. ಯಾರಿಗೆ ಸತ್ಯ, ಪ್ರೇಮ ಮತ್ತು ಕರುಣೆಯಲ್ಲಿ ಶ್ರದ್ಧೆಯಿದೆಯೋ ಅವರು ಸತ್ಯಾಗ್ರಹದಲ್ಲಿ ಭಾಗವಹಿಸಬಹುದು. ಜತೆಗೆ ಸಾಮೂಹಿಕ ನಿಯಮಪಾಲನೆಯ ಸಿದ್ಧತೆ ಅವಶ್ಯ. ಯಾರು ಸತ್ಯಾಗ್ರಹ ಶಿಬಿರದಲ್ಲಿ ಒಂದು ಅಥವಾ ಎರಡು ತಿಂಗಳು ಇರಲು ಇಷ್ಟಪಡುತ್ತಾರೋ ಅವರಿಗೆ ಪ್ರವಾಸ ಖರ್ಚು ಕೊಡಲಾಗುವುದು. ಆಸಕ್ತರು

'ಗೋರಕ್ಷಾ ಸತ್ಯಾಗ್ರಹ ಶಿಬಿರ'
ಸರ್ವೋದಯ ತೀರ್ಥ ಲಾಲ್ ಬಹದ್ದೂರ್ ಶಾಸ್ತ್ರಿ ಮಾರ್ಗ್
ಘಾಟ್ ಕೂಪರ್ (ಪಶ್ಚಿಮ)
ಮುಂಬಯಿ - ೪೦೦ ೦೮೬

ಅಥವಾ

ಸುರೇಂದ್ರ ಕೌಲಗಿ
ಅಧ್ಯಕ್ಷರು
ಕರ್ನಾಟಕ ಸರ್ವೋದಯ ಮಂಡಲ
ಮೇಲುಕೋಟೆ - ೫೭೧ ೪೩೧
ಮಂಡ್ಯ ಜಿಲ್ಲೆ
ದೂರವಾಣಿ : ೦೮೨೩೬-೩೧೬೩೪೪; ೦೮೨೩೬-೨೯೮೮೫೪

ಇವರನ್ನು ಸಂಪರ್ಕಿಸಬಹುದು.

* * *

ಜ್ಞಾನದೀಪ

ಹಣತೆಯಲ್ಲಿ ಹಚ್ಚಿಟ್ಟ ದೀಪವಿದಲ್ಲ !
ಸ್ವಿಚ್ಚೊತ್ತಿ ಬೆಳಗಿದುದೂ ಅಲ್ಲ !!
ಇದು ಸ್ವಯಂ ಪ್ರಕಾಶಿತ ಅದ್ಭುತ ದೀಪ !
ಇದರ ಬೆಳಕಿನಲ್ಲಿ ಕಾಣುವುದು ವಿಶ್ವರೂಪ !!
ಹಿಂದೆ, ಪಾರ್ಥನಿಗೆ ಸಾರಥಿಯಾಗಿ,
ಪರಮಾತ್ಮನೊಲಿದಿತ್ತ ಜ್ಞಾನದೀಪ !
ಪ್ರಜ್ವಾಲಿತೋ ಜ್ಞಾನಮಯ ಪ್ರದೀಪಃ !!

- ಶಾರದಾ ಜಡೆ, ಸಾಂಗಲಿ

ಖಾದಿ ವಿಚಾರ

'ದೇಶದ ಉನ್ನತಿಗಾಗಿ ಖಾದಿ ಮತ್ತು ಗ್ರಾಮೋದ್ಯೋಗಗಳು ತುಂಬಾ ಆವಶ್ಯಕ. ಅದರಿಂದ ಪ್ರತಿಯೊಬ್ಬರೂ ನೂಲಬೇಕು' ಎಂದು ಗಾಂಧೀಜಿ ಅನೇಕ ಸಲ ಹೇಳಿದ್ದಾರೆ. ಇಂಗ್ಲೆಂಡಿನ ಸುತ್ತಲೂ ಸಮುದ್ರವಿದೆ. ಇಂಗ್ಲೆಂಡಿನಲ್ಲಿ ಪ್ರತಿಯೊಬ್ಬನಿಗೂ ಈಜು ಬರಲೇ ಬೇಕು. ಹಾಗೆಯೇ ಹಿಂದೂಸ್ತಾನದಲ್ಲಿ ಭೂಮಿ ಕಡಿಮೆ. ಜನಸಂಖ್ಯೆ ಹೆಚ್ಚು. ಆದ್ದರಿಂದ ಪ್ರತಿಯೊಬ್ಬರೂ ನೂಲಬೇಕು. ಇದು ದೇಶದ (ಡಿಫೆನ್ಸ್) ಸಂರಕ್ಷಣೆಯಾಗಿದೆ. ವಿಶ್ವಯುದ್ಧ ದೇವರ ದಯದಿಂದ ಆಗದಿರಲಿ. ಹಿಂದೂಸ್ತಾನ ಅದರಿಂದ ಉಳಿಯಲಿ. ಆದರೆ ವಿಶ್ವಯುದ್ಧ ಪ್ರಾರಂಭವಾಗಿ ಬಾಂಬುಗಳು ಬೊಂಬಾಯಿ, ಅಹಮದಾಬಾದು ಮೊದಲಾದ ಊರುಗಳ ಮೇಲ ಬಿದ್ದರೆ ಅಲ್ಲಿರುವ ಕೆಲಸಗಾರರೆಲ್ಲ ಓಡಿಹೋಗುತ್ತಾರೆ. ಹಳ್ಳಿ ಸೇರುತ್ತಾರೆ. ಹಳ್ಳಿ ಹಳ್ಳಿಗೂ ಅವರು ಸಾಯಲು ಬರುವುದಿಲ್ಲ, ಬದುಕುವುದಕ್ಕಾಗಿಯೇ ಬರುತ್ತಾರೆ. ಹೀಗಾದರೆ ಹಿಂದೂಸ್ತಾನದ ಪರಿಸ್ಥಿತಿ ಏನಾಗುತ್ತದೆಂಬುದು ತಿಳಿಯುತ್ತದೆ. ಜನ ಬೆತ್ತಲೆ ಇರುವ ಸ್ಥಿತಿ ಉಂಟಾಗುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ರಕ್ಷಣೆಗಾಗಿ ಶಸ್ತ್ರಶಕ್ತಿಯನ್ನು ನಿರ್ಮಿಸಬೇಕಾಗುತ್ತದೆ. ಇದೇ ಸರಕಾರ ಮಾಡಬೇಕಾದ ಮೊದಲನೆ ಕೆಲಸ. ಆದರೆ ಬಡವರಿಗೆ ಅದರಿಂದ ಏನೂ ಸೇವೆಯಾಗುವುದಿಲ್ಲ. ಎಲ್ಲ ಹಣವೂ ಶಸ್ತ್ರಾಸ್ತ್ರಕ್ಕಾಗಿಯೇ ಖರ್ಚಾಗಿಬಿಡುತ್ತದೆ. ಆದ್ದರಿಂದ ಇದರಲ್ಲಿ ಏನೂ ಲಾಭ ನಮಗೆ ಕಾಣಿಸುವುದಿಲ್ಲ. ಅದಕ್ಕೆ ಬದಲಾಗಿ ನಮ್ಮ ಮಕ್ಕಳಿಗೆ ನೂಲುವುದನ್ನು ಕಲಿಸಿದರೆ ದೇಶ ಉಳಿಯುತ್ತದೆ.

ಇದನ್ನು ಒಂದು ಯಜ್ಞವೆಂದು ತಿಳಿದು ಮಾಡಬೇಕು. ಪ್ರಾಚೀನ ಕಾಲದಲ್ಲಿ ಕಾಡನ್ನು ಸುಡುವುದು ಯಜ್ಞವೆಂದು ತಿಳಿದಿದ್ದರು. ಆದರೆ ಇಂದು ಕಾಡನ್ನು ಬೆಳೆಸಬೇಕಾಗಿದೆ. ಆದ್ದರಿಂದ ಈಗ ಮರ ಹಾಕುವುದು ಯಜ್ಞ, ಆದ್ದರಿಂದಲೇ ನೀವು 'ಟೋಕನ್' ರೂಪದಲ್ಲಾದರೂ ಸಮಿತ್ತನ್ನು ಕಡಿಯಬೇಕೆನ್ನುತ್ತೇವೆ. ಮೊದಲು ವಿದ್ಯಾರ್ಥಿ ಸಮಿತ್ತನ್ನು ಕಡಿದು ಅದನ್ನು ತೆಗೆದುಕೊಂಡು ಹೋಗಿ ಗುರುವಿಗೆ ನಾನು ನಿನ್ನ ಸೇವೆಗೆ ಬಂದಿದ್ದೇನೆಂದು ಹೇಳುತ್ತಿದ್ದನು. ಅಂದರೆ ಕಾಡನ್ನು ಕಡಿಯುವುದನ್ನು ಸೇವೆಯೆಂದು ತಿಳಿದಿದ್ದರು. ಹೀಗೆ ಆಯಾ ಕಾಲಕ್ಕನುಸಾರವಾಗಿ ಯಜ್ಞ ಬದಲಾಗುತ್ತದೆ. ನಮ್ಮ ದೇಶದ ರಕ್ಷಣೆಗಾಗಿ ಪ್ರತಿಯೊಬ್ಬರೂ ನೂಲಬೇಕೆಂದು ಮಹಾತ್ಮಾ ಗಾಂಧೀಯವರು ಹೇಳಿದ್ದರು. ನಮ್ಮ ದೇಶದ ಮುಂದೆ ಉದಾಹರಣೆ ತೋರಿಸಬೇಕೆಂದು ಅವರು ದಿನಾಲೂ ನೂಲುತ್ತಿದ್ದರು. ಈಶ್ವರನ ಕೃಪೆಯಿಂದ ಅವರು ಕೊನೆಯ ದಿನವೂ ನೂತರು. ಈಶ್ವರನಿಗೆ ಇಚ್ಛೆಯಾಗಿದ್ದರೆ ಅವರ ವ್ರತವನ್ನು ಮುರಿಯಬಹುದಾಗಿತ್ತು. ಐದು ಐದೂವರೆ ಗಂಟೆಯ ಬದಲು ಎರಡು ಮೂರು ಗಂಟೆಗೇ ಗಾಂಧೀಯವರ ಹತ್ಯೆಯಾಗಿಬಿಡಬಹುದಾಗಿತ್ತು. ಆದರೆ ಈಶ್ವರ ಭಕ್ತನ ಸೂತ್ರವನ್ನು ಮುರಿಯಗೊಡುವುದಿಲ್ಲ. ಆದ್ದರಿಂದ ಆ ದಿನವೂ ಅವರ ಸೂತ್ರಯಜ್ಞ ನಡೆಯಿತು. ಅವರ ಈ ಉದಾಹರಣೆ ನಮಗೆ ಬಲ ನೀಡಬಲ್ಲದು.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಟಿ.ಎಸ್.ಶ್ರೀಧರ್ * ಶ್ರೀ ಎನ್.ಎಸ್.ಸುಬ್ಬಣ್ಣ – ಬೆಂಗಳೂರು
ಶ್ರೀ ಲಿಂಗಣ್ಣ ಬಂಧೂಕಾರ್ – ಮಂಡ್ಯ
ಶ್ರೀ ಎಚ್.ವಿ.ಬಾಲರಾಜ್ * ಶ್ರೀ ಬಿ.ಅಪ್ಪಾಜಿಗೌಡರು – ಮದ್ದೂರು
ಶ್ರೀ ಟಿ.ಎಲ್.ಸುದರ್ಶನಮೂರ್ತಿ – ಕೋಲಾರ
ಶ್ರೀ ಎನ್.ಎಸ್.ರಘುನಾಥ್ – ಮೈಸೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಜಯಪ್ರಕಾಶಗೌಡ – ದೊಡ್ಡಬಾಣಸವಾಡಿ
ಟಿ.ಜಿ.ವಿಠಲ್ – ಬಳ್ಳಾರಿ
ಶ್ರೀ ಕೆ.ಟಿ.ಫಾಲಾಕ್ಷ – ಕೆ.ಆರ್.ಪೇಟೆ
ಶ್ರೀ ಗೋವಿಂದರಾಜು – ಚಿನಕುರಳಿ
ಶ್ರೀ ಎಂ.ಯಲ್ಲಪ್ಪ – ಸಿಡಿ ಹೊಸಕೋಟೆ
ಶ್ರೀಮತಿ ವಸಂತಾ.ಎಂ.ಎಸ್ – ಚಿಕ್ಕಮಂಡ್ಯ; ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

jANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.